ಕರ್ನಾಟಕ ಸರ್ಕಾರ

**ಸಾರ್ವಜನಿಕ ಶಿಕ್ಷಣ ಇಲಾಖೆ**

**ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ**

**ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ. ಶಿವಮೊಗ್ಗ**

## ಸಂಶೋಧನಾ ವರದಿ

# ಶಿವಮೊಗ್ಗ ಜಿಲ್ಲೆಯಾದ್ಯಂತ ಅನುಷ್ಠಾನಗೊಂಡಿರುವ 'ನೋ ಬ್ಯಾಗ್ ಡೇ' ಕಾರ್ಯಾಕ್ರಮದ ಪರಿಣಾಮಕತ್ವ ಕುರಿತು ಅಧ್ಯಯನ

2019–20

ಮಾರ್ಗದರ್ಶಕರು

ಶ್ರೀಮತಿ ಡಾ॥ ಸುಮಂಗಲ ಪಿ ಕುಚಿನಾಡ
ಉಪನಿರ್ದೇಶಕರು(ಅಭಿವೃದ್ಧಿ) ಮತ್ತು ಪ್ರಾಂಶುಪಾಲರು
ಡಯಟ್ ಶಿವಮೊಗ್ಗ

ಅಧ್ಯಯನ ಕೈಗೊಂಡವರು

ಶ್ರೀಮತಿ ಗೀತಾ. ಆರ್ ಉಪನ್ಯಾಸಕರು
ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ
ಶಿವಮೊಗ್ಗ

ಸಂದೇಶ ನಿಮ್ಮೊಂದಿಗೆ . . . . . . . . . . .

ಆತ್ಮೀಯರೇ,

ಮಕ್ಕಳು ಮೂಲತಃ ಸೃಜನಶೀಲರು. ಶಾಲೆಯ ತರಗತಿ ಕೊಠಡಿಯ ನಾಲ್ಕು ಗೋಡೆಗಳ ಮಧ್ಯೆ ಅನೇಕ ಕಟ್ಟುಪಾಡುಗಳಿಂದ ನಡೆಯುವ ಕಲಿಕಾ ಚಟುವಟಿಕೆಗಳಿಗಿಂತ ಮುಕ್ತ ಮತ್ತು ಆಯ್ಕೆಗೆ ಅವಕಾಶವಿರುವ ಚಟುವಟಿಕೆಗಳಲ್ಲಿ ಉತ್ಸಾಹದಿಂದ ಮತ್ತು ಸಂತಸದಿಂದ ಭಾಗವಹಿಸುತ್ತಾರೆ. ಮಕ್ಕಳಲ್ಲಿರುವ ಸೃಜನಶೀಲತೆಯನ್ನು ಅನಾವರಣಗೊಳಿಸುವ ಹಾಗೂ ಪಾಟಿಚೀಲ, ಪುಸ್ತಕ ಹೊರುವ ಹೊರೆಯನ್ನು ಒಂದು ದಿನದ ಮಟ್ಟಿಗೆ ಕಡಿಮೆಮಾಡುವ ಸಂಕಲ್ಪದೊಂದಿಗೆ ಕರ್ನಾಟಕ ಸರ್ಕಾರ 2018–19 ರಲ್ಲಿ ಸರ್ಕಾರಿ ಹಾಗೂ ಖಾಸಗಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ 'ನೋ ಬ್ಯಾಗ್ ಡೇ' ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವಂತೆ ಆದೇಶಿಸಿದೆ. ಇದೇ ಕಾರ್ಯಕ್ರಮವನ್ನು 2019–20ರಲ್ಲಿಯೂ ಮುಂದುವರಿಸುತ್ತಿರುವುದು ನಿಮಗೆಲ್ಲ ತಿಳಿದಿರುವ ಅಂಶವಾಗಿದೆ.

ಈ ಆದೇಶದನ್ವಯ ಶಿವಮೊಗ್ಗ ಜಿಲ್ಲಾ ವ್ಯಾಪ್ತಿಯಲ್ಲಿ 'ನೋ ಬ್ಯಾಗ್ ಡೇ' ಕಾರ್ಯಕ್ರಮ ಅನುಷ್ಠಾನಗೊಂಡಿರುವ ಬಗ್ಗೆ ಅವಲೋಕಿಸುವುದು ನಮ್ಮ ಜವಬ್ದಾರಿಯಾಗಿದೆ. ಶಿವಮೊಗ್ಗ ಡಯಟ್ ಈ ನಿಟ್ಟಿನಲ್ಲಿ ಒಂದು ಹೆಜ್ಜೆ ಮುಂದೆ ಇಟ್ಟು, ಜಿಲ್ಲಾ ವ್ಯಾಪ್ತಿಯಲ್ಲಿರುವ ಸರ್ಕಾರಿ ಹಾಗೂ ಖಾಸಗಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ 'ನೋ ಬ್ಯಾಗ್ ಡೇ' ಕಾರ್ಯಕ್ರಮದ ಅನುಷ್ಠಾನದ ಬಗ್ಗೆ ಅಧ್ಯಯನಮಾಡಲು ಯೋಜಿಸಿದೆ. ಈ ಅಧ್ಯಯನದ ಮೂಲಕ 'ನೋ ಬ್ಯಾಗ್ ಡೇ' ಕಾರ್ಯಕ್ರಮದ ಕಲಿಕಾ ಚಟುವಟಿಕೆಗಳ ಬಗ್ಗೆ ಶಿಕ್ಷಕರಿಗೆ ಮನನ ಮಾಡಿಸುವುದು ಹಾಗೂ ಶಾಲೆಗಳಲ್ಲಿ ಇಲಾಖೆಯ ನಿರೀಕ್ಷೆಯಂತೆ ಕಾರ್ಯನಿರ್ವಹಿಸುತ್ತಿರುವ ಬಗ್ಗೆ ಸೂಕ್ಷ್ಮವಾಗಿ ಹಾಗೂ ವಸ್ತುನಿಷ್ಠವಾಗಿ ಅವಲೋಕಿಸಲಾಗುವುದು. ಈ 'ನೋ ಬ್ಯಾಗ್ ಡೇ' ಕಾರ್ಯಕ್ರಮದ ಪರಿಣಾಮಕಾರಿ ಅನುಷ್ಠಾನದ ಮೂಲಕ ಜಿಲ್ಲೆಯಲ್ಲಿ ಗುಣಾತ್ಮಕ ಶಿಕ್ಷಣಕ್ಕೆ ಎಲ್ಲರೂ ಶ್ರಮಿಸಬೇಕೆಂಬ ಆಶಯದೊಂದಿಗೆ ಶುಭಕೋರುತ್ತೇನೆ.

ವಂದನೆಗಳೊಂದಿಗೆ,

ಶ್ರೀಮತಿ ಡಾ|| ಸುಮಂಗಲ ಪಿ ಕುಚಿನಾಡ
ಉಪನಿರ್ದೇಶಕರು(ಅಭಿವೃದ್ಧಿ) ಮತ್ತು ಪ್ರಾಂಶುಪಾಲರು
ಡಯಟ್ ಶಿವಮೊಗ್ಗ

## ಕೃತಜ್ಞತೆಗಳು...

ಮಾನವನದು ಹುಟ್ಟಿನಿಂದ ಸಾಯುವವರೆಗೂ ಕಲಿಯುತ್ತಲೇ ಇರುವ ಪ್ರವೃತ್ತಿಯಾಗಿದೆ. ಮಾನವನು ಅನುಕರಣಾ ಜೀವಿಯಾಗಿರುವ ಕಾರಣದಿಂದ ಕಲಿಕೆ ಸ್ವಯಂ ಪ್ರೇರಿತವಾಗಿದ್ದು ಭಾಷಾ ಕೌಶಲ, ಸಂವಹನ ಕೌಶಲ, ಆಂತರವ್ಯಕ್ತಿಯ ಸಂಬಂಧಗಳು, ಸಕಾರತ್ಮಕ ಸೃಜನ ಶೀಲತೆ–ಚಿಂತನೆ, ತಂಡ ರಚನೆ, ನಾಯಕತ್ವ, ನಿರ್ಧಾರ ಕೈಗೊಳ್ಳುವುದು, ಸಮಸ್ಯೆ ಪರಿಹಾರ ಕೌಶಲ್ಯಗಳು, ಕಲ್ಪನೆ, ಪ್ರಯೋಗಶೀಲತೆ, ಸ್ಥಳ ಪರಿಶೀಲನೆ, ಪ್ರವಾಸ, ಸಂದರ್ಶನ, ಕಾರ್ಯಕ್ರಮ ಸಂಯೋಜನೆ ಮೊದಲಾದ ಸಾಮರ್ಥ್ಯಗಳನ್ನು ಸದೃಢಗೋಳಿಸಲು ಈ 'ನೋ ಬ್ಯಾಗ್ ಡೇ' ಕಾರ್ಯಕ್ರಮದಿಂದ ಸಾಧ್ಯವಾಗಿಸಬಹುದಾಗಿದೆ.

ಶಿಕ್ಷಣ ಇಲಾಖೆ ಪರಿಚಯಿಸುತ್ತಿರುವ 'ನೋ ಬ್ಯಾಗ್ ಡೇ' ಕಾರ್ಯಕ್ರಮ ಯಶಸ್ವಿಗೊಳ್ಳುವುದು, ಎಲ್ಲಾ ಶಿಕ್ಷಕರು ಅದರ ಬಗ್ಗೆ ಮಾಹಿತಿ ಪಡೆದು ತಮ್ಮ ಶಾಲೆಗಳಲ್ಲಿ ಅನುಷ್ಠಾನಗೊಳಿಸಿದಾಗ ಮಾತ್ರ ಎಂಬ ಮಾತು ಎಲ್ಲರೂ ಒಪ್ಪುವಂತಹದ್ದು. ತರಗತಿ ಕಲಿಕಾ ಚಟುವಟಿಕೆಗಳ ಜೊತೆ ಜೊತೆಯಲ್ಲಿ 'ನೋ ಬ್ಯಾಗ್ ಡೇ' ಚಟುವಟಿಕೆಗಳನ್ನು ಸಹ ಅಳವಡಿಸಿಕೊಳ್ಳುವಂತೆ ಪ್ರೇರೇಪಿಸುವುದು ಅಗತ್ಯವಾಗಿದೆ. ಈ ಹಿನ್ನೆಲೆಯಲ್ಲಿ ಶಿವಮೊಗ್ಗ ಜಿಲ್ಲೆಯ ಸರ್ಕಾರಿ ಹಾಗೂ ಅನುದಾನಿತ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಲ್ಲಿ 'ನೋ ಬ್ಯಾಗ್ ಡೇ' ಕಾರ್ಯಕ್ರಮವನ್ನು ಅನುಷ್ಟಾನಗೊಳಿಸಿರುವ ಬಗ್ಗೆ ಸೂಕ್ಷ್ಮವಾಗಿ ಹಾಗೂ ವಸ್ತು ನಿಷ್ಟವಾಗಿ ಅವಲೋಕಿಸುವುದು ಅಪೇಕ್ಷಣೀಯವಾಗಿದೆ.

ಈ ಹಿನ್ನೆಲೆಯಲ್ಲಿ ಅಧ್ಯಯನವನ್ನು ನಡೆಸುವಂತೆ ಉಪನಿರ್ದೇಶಕರು(ಅಭಿವೃದ್ಧಿ) ಹಾಗೂ ಪ್ರಾಂಶುಪಾಲರು ಡಯಟ್ ಶಿವಮೊಗ್ಗ ಇವರು ಆದೇಶಿಸಿದ್ದರು. ಶ್ರೀಯುತರ ಮಾರ್ಗದರ್ಶನದಂತೆ ಸೂಕ್ತ ಸಿದ್ದತೆಗಳೊಂದಿಗೆ **"ಶಿವಮೊಗ್ಗ ಜಿಲ್ಲೆಯಾದ್ಯಂತ ಅನುಷ್ಠಾನಗೊಂಡಿರುವ 'ನೋ ಬ್ಯಾಗ್ ಡೇ' ಕಾರ್ಯಾಕ್ರಮದ ಪರಿಣಾಮಕತ್ವ ಕುರಿತು ಅಧ್ಯಯನ."** ವನ್ನು ಕೈಗೊಳ್ಳಲಾಗಿದೆ. ಶಿವಮೊಗ್ಗ ಜಿಲ್ಲೆಯ ಸರ್ಕಾರಿ ಮತ್ತು ಅನುದಾನಿತ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಯಾದೃಚ್ಛಿಕವಾಗಿ ಪ್ರತೀ ತಾಲ್ಲೂಕುಗಳಿಂದ ಕಿರಿಯ ಪ್ರಾಥಮಿಕ, ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಂತೆ ಒಟ್ಟು 50 ಶಾಲೆಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಈ ಆಯ್ದ 50 ಶಾಲೆಗಳ ಮುಖ್ಯೋಪಾಧ್ಯಯರು, ಸಹಶಿಕ್ಷಕರು ಹಾಗೂ ಮಕ್ಕಳಿಗೆ 'ನೋ ಬ್ಯಾಗ್ ಡೇ' ಕಾರ್ಯಕ್ರಮದಲ್ಲಿ ಚರ್ಚಿಸಿರುವ ವಿಷಯಾಂಶಗಳನ್ನು ಆಧರಿಸಿ, ನಿಗಧಿತ ಪ್ರಶ್ನಾವಳಿಗಳನ್ನು ನೀಡಿ ಅವರುಗಳಿಂದ ಮಾಹಿತಿ ಮತ್ತು ಅಭಿಪ್ರಾಯಗಳನ್ನು ಪಡೆದು ಈ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

ಈ ಅಧ್ಯಯನಕ್ಕೆ ಸೂಕ್ತ ಮಾರ್ಗದರ್ಶನ ಮತ್ತು ಬೆಂಬಲವನ್ನು ನೀಡಿದ ಉಪನಿರ್ದೇಶಕರು(ಅಭಿವೃದ್ಧಿ) ಹಾಗೂ ಪ್ರಾಂಶುಪಾಲರು ಡಯಟ್ ಶಿವಮೊಗ್ಗ ಇವರಿಗೆ ನನ್ನ ತುಂಬು ಹೃದಯದ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ನನ್ನೊಟ್ಟಿಗೆ ಸಹಕರಿಸಿದ ಎಲ್ಲ ಅಧಿಕಾರಿವರ್ಗದವರಿಗೆ, ಸಿಬ್ಬಂದಿವರ್ಗಕ್ಕೂ, ಜಿಲ್ಲೆಯ ಎಲ್ಲಾ ಮುಖ್ಯೊಪ್ಯಾಧ್ಯಾಯರುಗಳಿಗೆ, ಸಹಶಿಕ್ಷಕರುಗಳಿಗೆ ಹಾಗೂ ಮಕ್ಕಳಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ನನ್ನ ಈ ಅಧ್ಯಯನಕ್ಕೆ ಸಹಕರಿಸಿದ ಎಲ್ಲ ಆತ್ಮೀಯರಿಗೂ ಮನತುಂಬಿ ಅಭಿನಂದಿಸುತ್ತೇನೆ.

ಶ್ರೀಮತಿ ಗೀತಾ. ಆರ್ ಉಪನ್ಯಾಸಕರು
ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ
ಶಿವಮೊಗ್ಗ

# ವಿಷಯಾನುಕ್ರಮಣಿಕೆ


| ಕ್ರ.ಸಂ | ವಿವರಗಳು | ಪು.ಸಂ. |
|---|---|---|
| 1 | ಪೀಠಿಕೆ | |
| 2 | ಅಧ್ಯಯನದ ಶೀರ್ಷಿಕೆ | |
| 3 | ಅಧ್ಯಯನ ನಿರತರ ಪರಿಚಯ | |
| 4 | ಅಧ್ಯಯನದ ಪ್ರಾಮುಖ್ಯತೆ | |
| 5 | ಅಧ್ಯಯನ ವಿಷಯಕ್ಕೆ ಸಂಬಂಧಿಸಿದ ವರದಿಗಳು, ದಾಖಲೆಗಳು | |
| 6 | ಅಧ್ಯಯನದ ಸ್ವರೂಪ | |
| 7 | ಅಧ್ಯಯನ ಕ್ಷೇತ್ರದ ವ್ಯಾಪ್ತಿ | |
| 8 | ಅಧ್ಯಯನದ ಉದ್ದೇಶ | |
| 9 | ಅಧ್ಯಯನದಿಂದ ಕಂಡು ಕೊಳ್ಳಬೇಕಾದ ಅಂಶಗಳು | |
| 10 | ಅಧ್ಯಯನದ ಕಾರ್ಯವಿಧಾನಗಳು | |
| 11 | ಭಾಗೀದಾರ ಸಂಸ್ಥೆಗಳು ಮತ್ತು ವ್ಯಕ್ತಿಗಳು | |
| 12 | ಉಪಯೋಗಿಸಿದ ತಂತ್ರಗಳು ಮತ್ತು ಸಾಧನಗಳು | |
| 13 | ದತ್ತಾಂಶ ಮತ್ತು ಮಾಹಿತಿ ಸಂಗ್ರಹಣೆ | |
| 14 | ದತ್ತಾಂಶಗಳ ವಿಶ್ಲೇಷಣೆ ಪ್ರಶ್ನಾವಾರು | |
| 15 | ಅಧ್ಯಯನದ ಫಲಿತಾಂಶ ಹಾಗೂ ತತ್ಸಂಬಂಧಿತ ಚರ್ಚೆ | |
| 16 | ಅಧ್ಯಯನದ ಸಾರಾಂಶ | |
| 17 | ಅಧ್ಯಯನದಿಂದ ಕೈಗೊಂಡ ತೀರ್ಮಾನಗಳು | |
| 18 | ಅಧ್ಯಯನದ ಮೂಲಕ ನೀಡಲು ಬಯಸುವ ಸಲಹೆಗಳು | |
| 19 | ಅಧ್ಯಯನಕಾರರು ಕ್ಷೇತ್ರ ಭೇಟಿಮಾಡಿದ ಛಾಯಾ ಚಿತ್ರಗಳು : | |
| 20 | ಗ್ರಂಥ ಋಣ | |
| 21 | ಅನುಬಂಧಗಳು | |

## ಪೀಠಿಕೆ :

ಪುಸ್ತಕಗಳು ಜ್ಞಾನದ ಆಗರಗಳು. ಮಾನವ ತನ್ನ ಅನಾದಿಕಾಲದ ತನ್ನ ಅನುಭವದ ಸಾರವನ್ನು ಅಕ್ಷರಗಳ ರೂಪದಲ್ಲಿ ದಾಖಲಿಸಿ, ಮುಂದಿನ ಪೀಳಿಗೆಗೆ ದಾರಿದೀಪವಾಗಲಿ ಎಂದು ಅತ್ಯಂತ ಜತನದಿಂದ ಕಾಪಿಟ್ಟು ಸಂಗ್ರಹಿಸಿದ್ದಾನೆ. ಅವುಗಳ ಕ್ರಮಯುತ ಅಧ್ಯಯನದಿಂದ ಜ್ಞಾನವೆಂಬ ಅಮೃತ ಗಂಗೆ ಪೀಳಿಗೆ ಯಿಂದ ಪೀಳಿಗೆಗೆ ನಿರಾತಂಕವಾಗಿ ಸಾಗಿಕೊಂಡು ಬಂದಿದೆ.

ಜಗತ್ತಿನಲ್ಲಿ ನಡೆದ ಜ್ಞಾನಸ್ಫೋಟದ ಪರಿಣಾಮದಿಂದ ಹೆಚ್ಚು ಹೆಚ್ಚು ಜ್ಞಾನ ಸಂಪಾದನೆಯ ಕಡೆಗೆ ಎಲ್ಲರ ಅವಧಾನ ಕೇಂದ್ರೀಕರಣಗೊಳ್ಳುತ್ತಿರುವುದನ್ನು ಎಲ್ಲ ಕಡೆ ಕಂಡುಬರುತ್ತಿದೆ. ಈ ದಾವಂತದಲ್ಲಿ ತಮ್ಮನ್ನು ತಾವು ಕಳೆದುಕೊಳ್ಳುತ್ತಿರುವ ಬಗ್ಗೆ ಗಮನಿಸುತ್ತಿಲ್ಲ. ಅದರಲ್ಲೂ ಶಾಲಾ ವಯಸ್ಸಿನ ಮಕ್ಕಳ ಬದುಕು ಅತ್ಯಂತ ಸೋಚನೀಯವಾಗಿದೆ. ಮನೆ ಅಂಗಳದಲ್ಲಿ ಅಜ್ಜ, ಅಜ್ಜಿ, ತಂದೆ, ತಾಯಿ, ಅಣ್ಣ–ತಮ್ಮ, ಅಕ್ಕ–ತಂಗಿ, ಓರಗೆಯ ಮಕ್ಕಳ ಜೊತೆಯಲ್ಲಿ ಸಂತೋಷದಿಂದ ಬೆರೆತು ಆಡಿ–ಹಾಡಿ, ಕುಣಿದು ನಲಿದಾಡುವ ಚಿಕ್ಕ ಚಿಕ್ಕ ಮಕ್ಕಳಿಗೂ ಸಹ ಪುಸ್ತಕ ಹಿಡಿದು; ಹೊಮ್ ವರ್ಕ್ ಮಾಡುತ್ತಾ ನಿಶಬ್ದವಾಗಿ ಕುಳಿತುಕೊಳ್ಳಬೇಕಾದ ಶೋಚನೀಯ ಸ್ಥಿತಿ ನಮ್ಮ ಸುತ್ತಲೂ ಕಾಣುತ್ತಿದ್ದೇವೆ. ಸ್ವ ಅನುಭವದ ಮೂಲಕ, ಹಿರಿಯರ ಹಾಗೂ ತನ್ನ ಓರಗೆಯವರ ಜೋತೆಯಲ್ಲಿ ಅನುಕರಣೆಯ ಮೂಲಕ ಗಳಿಸಿಕೊಳ್ಳಬೇಕಾದ ಜೀವನದ ಪಾಠಗಳನ್ನು; ನಿರ್ಧಿಷ್ಠ ನಿಗಧಿತ ಪಠ್ಯಪುಸ್ತಕಗಳ ಮೂಲಕ ಒಬ್ಬಂಟ್ಟಿಯಾಗಿ ಗಳಿಸಬೇಕಾದ ಅನಿವಾರ್ಯತೆ ನಿರ್ಮಾಣಗೊಂಡಿದೆ.

ಆಸಕ್ತಿಯಿಂದ ಕಲಿಯುವ ವಸ್ತುಗಳಾಗಬೇಕಾಗಿರುವ ಪಠ್ಯಪುಸ್ತಕಗಳು; ಇತ್ತೀಚಿನ ದಿನಗಳಲ್ಲಿ ಮಕ್ಕಳ ಅಪೂರ್ವ ಬಾಲ್ಯವನ್ನು ಕಸಿಯುವ ಹೊರೆಗಳಾಗುತ್ತಿವೆ. ಪಠ್ಯಪುಸ್ತಕಗಳ ಭಾರಕ್ಕೆ ಮಕ್ಕಳು ಕಲಿಕೆಯಿಂದ ವಿಮುಖರಾಗುತ್ತರುವುದನ್ನು ಕಾಣುತ್ತಿದ್ದೇವೆ. ಕಲಿಕೆ ಮಕ್ಕಳ ಆಸಕ್ತಿಯ ಕ್ಷೇತ್ರವನ್ನಾಗಿಸುವ ಕಡೆಗೆ ಆಲೋಚಿಸುವ ಅಗತ್ಯತೆ ಈಗ ಹೆಚ್ಚಾಗಿ ಕಂಡುಬರುತ್ತಿದೆ. ಪಠ್ಯಪುಸ್ತಕಗಳ ಹೊರೆಯನ್ನು ತಗ್ಗಿಸುವ ಅಥವಾ ಪಠ್ಯಪುಸ್ತಕಗಳೆ ಇಲ್ಲದಂತಹ ಕಲಿಕಾ ಕ್ರಮ ಅನುಸರಿಸುವ ಕಡೆಗೂ ಆಲೋಚಿಸಬೇಕಾಗಿದೆ.

ಎನ್.ಸಿ.ಎಫ್. 2005ರ ಪ್ರಕಾರ ಭಾರತದ ಪ್ರತಿ ಪ್ರಜೆಗೂ ಸಂವಿಧಾನದಲ್ಲಿ ಪ್ರಸ್ತಾಪಿಸಿದಂತೆ ಕೆಲವು ಪ್ರಮುಖವಾದ ಗುರಿಗಳನ್ನು ತಲುಪುವಂತೆ ಮಾಡುವ ಗುರುತರವಾದ ಜವಾಬ್ದಾರಿ ಎಲ್ಲಾ ಶೈಕ್ಷಣಿಕ ಸಂಸ್ಥೆಗಳ ಮೇಲೆ ಇದೆ. ಈ ಜವಾಬ್ದಾರಿಯನ್ನು ಸಮರ್ಥವಾಗಿ ನಿರ್ವಹಿಸಲು ಅನೇಕ ನಾವಿನ್ಯ ಪ್ರಯೋಗಗಳನ್ನು ನಡೆಸುತ್ತಾ ಬಂದಿವೆ. ಆದರೂ ಶಿಕ್ಷಣ ಕ್ಷೇತ್ರದಲ್ಲಿ ಹಲವಾರು ಸವಾಲುಗಳು ಇನ್ನೂ ಜೀವಂತವಾಗಿಯೇ ಉಳಿದಿವೆ ಎಂದರೆ ತಪ್ಪಾಗಲಾರದು. ಅಂತಹ ಜ್ವಲಂತ ಸವಾಲುಗಳಲ್ಲಿ 'ಶಾಲಾ ಮಕ್ಕಳ ಪುಸ್ತಕದ ಹೊರೆ' ಒಂದು ಇಳಿಸಲಾಗದ ಹೊರೆಯಾಗಿ; ದಿನದಿಂದ ದಿನಕ್ಕೆ ಹೆಚ್ಚು ಹೆಚ್ಚು ಭಾರವಾಗುತ್ತಲೇ ಇದೆ. ಮಕ್ಕಳ ಕುತೂಹಲವನ್ನು ಅರಳಿಸಬೇಕಾದ ಪುಸ್ತಕಗಳ ಪಾತ್ರ; ಪ್ರತಿಷ್ಟೆಯ ಪ್ರತೀಕವಾಗುತ್ತಿವೆ. ಪುಸ್ತಕಗಳ ಭಾರಕ್ಕೆ ಮಕ್ಕಳ ಬೆನ್ನು ಬಾಗುತ್ತಿರುವ ಸ್ಥಿತಿ ನಿರ್ಮಾಣವಾಗಿದೆ.

ಪ್ರಸ್ತುತ ಸನ್ನಿವೇಶದಲ್ಲಿ ಕೆಲವು ಶಿಕ್ಷಣ ಸಂಸ್ಥೆಗಳು ಹಲವಾರು ನಾವಿನ್ಯ ತಂತ್ರಗಳನ್ನು ಅಳವಡಿಸಿಕೊಂಡು, 'ಶಾಲಾ ಮಕ್ಕಳ ಪುಸ್ತಕದ ಹೊರೆ' ಯನ್ನು ತಗ್ಗಿಸಲು ಪ್ರಯತ್ನಿಸುತ್ತಿರುವುದು ಅನುಕರಣಾ ಯೋಗ್ಯವಾಗಿದೆ. ಈ

‘ನೋ ಬ್ಯಾಗ್ ಡೇ’ ವಿನೂತನ ಕಾರ್ಯಕ್ರಮದಿಂದ ಮಕ್ಕಳ ಮನೋಭಾವದಲ್ಲಿ ನಿರೀಕ್ಷಿತ ಬದಲಾವಣೆಯನ್ನು ಕಾಣಲಾಯಿತು. ಇದರಿಂದ ಪ್ರೇರಿತವಾದ ಕರ್ನಾಟಕ ಸರ್ಕಾರ ಪ್ರಾಯೋಗಿಕವಾಗಿ 2018–19 ರಲ್ಲಿ ಸರ್ಕಾರಿ ಹಾಗೂ ಖಾಸಗಿ ಶಾಲೆಗಳಲ್ಲಿ ‘ನೋ ಬ್ಯಾಗ್ ಡೇ’ಕಾರ್ಯಕ್ರಮವನ್ನು ಅನುಷ್ಟಾನಗೊಳಿಸುವಂತೆ ಆದೇಶಿಸಿತು. ಈ ಆದೇಶದನ್ವಯ ಶಿವಮೊಗ್ಗ ಜಿಲ್ಲಾ ವ್ಯಾಪ್ತಿಯಲ್ಲಿ ‘ನೋ ಬ್ಯಾಗ್ ಡೇ’ ಕಾರ್ಯಕ್ರಮ ಅನುಷ್ಟಾನಗೊಂಡಿರುವ ಬಗ್ಗೆ ಅವಲೋಕಿಸುವುದು ನಮ್ಮ ಜವಬ್ದಾರಿಯಾಗಿದೆ. ‘ನೋ ಬ್ಯಾಗ್ ಡೇ’ ಕಾರ್ಯಕ್ರಮದ ಕಲಿಕಾ ಚಟುವಟಿಕೆಗಳ ಬಗ್ಗೆ ಶಿಕ್ಷಕರಿಗೆ ಮನನ ಮಾಡಿಸುವುದು ಹಾಗೂ ಶಾಲೆಗಳಲ್ಲಿ  ಇಲಾಖೆಯ ನಿರೀಕ್ಷೆಯಂತೆ ಕಾರ್ಯನಿರ್ವಹಿಸುತ್ತಿರುವ ಬಗ್ಗೆ ಸೂಕ್ಷ್ಮವಾಗಿ ಹಾಗೂ ವಸ್ತುನಿಷ್ಠವಾಗಿ ಅವಲೋಕಿಸುವುದು ಅನಿವಾರ್ಯವೆನಿಸುತ್ತದೆ. ಈ ಪ್ರಯತ್ನದಲ್ಲಿ ನಾವು ‘ನೋ ಬ್ಯಾಗ್ ಡೇ’ ಕಾರ್ಯಕ್ರಮ ಅನುಷ್ಟಾನದ ಪರಿಣಾಮಕತ್ವ ಕುರಿತು ಅಧ್ಯಯನಕ್ಕೆ ಮುಂದಾಗಿದ್ದೇವೆ.

‘ಸರ್ಕಾರ ಹಾಗೂ ಶಿಕ್ಷಣ ಇಲಾಖೆ ಪರಿಚಯಿಸುತ್ತಿರುವ ‘ನೋ ಬ್ಯಾಗ್ ಡೇ’ ಕಾರ್ಯಕ್ರಮ ಯಶಸ್ವಿಗೊಳ್ಳುವುದು, ಎಲ್ಲಾ ಶಿಕ್ಷಕರು ಅದರ ಬಗ್ಗೆ ಮಾಹಿತಿ ಪಡೆದು ತಮ್ಮ ಶಾಲೆಗಳಲ್ಲಿ ಅನುಷ್ಠಾನಗೊಳಿಸಿದಾಗ ಮಾತ್ರ’ ಎಂಬ ಮಾತು ಎಲ್ಲರೂ ಒಪ್ಪುವಂತಹದ್ದು.  ತರಗತಿ ಕಲಿಕಾ ಚಟುವಟಿಕೆಗಳ ಜೊತೆ ಜೊತೆಯಲ್ಲಿ ‘ನೋ ಬ್ಯಾಗ್ ಡೇ’ ಚಟುವಟಿಕೆಗಳನ್ನು ಸಹ ಅಳವಡಿಸಿಕೊಳ್ಳುವಂತೆ ಪ್ರೇರೇಪಿಸುವುದು ಅಗತ್ಯವಾಗಿದೆ. ಈ ಹಿನ್ನೆಲೆಯಲ್ಲಿ ಶಿವಮೊಗ್ಗ ಜಿಲ್ಲೆಯ ಸರ್ಕಾರಿ ಹಾಗು ಅನುದಾನಿತ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಲ್ಲಿ ‘ನೋ ಬ್ಯಾಗ್ ಡೇ’ ಕಾರ್ಯಕ್ರಮವನ್ನು ಅನುಷ್ಟಾನಗೊಳಿಸಿರುವ ಬಗ್ಗೆ ಸೂಕ್ಷ್ಮವಾಗಿ ಹಾಗೂ ವಸ್ತು ನಿಷ್ಟವಾಗಿ ಅವಲೋಕಿಸುವುದು ಅಪೇಕ್ಷಣೀಯವಾಗಿದೆ.

ಈ ಹಿನ್ನೆಲೆಯಲ್ಲಿ ಅಧ್ಯಯನವನ್ನು ನಡೆಸುವಂತೆ ಉಪನಿರ್ದೇಶಕರು(ಅಭಿವೃದ್ಧಿ) ಹಾಗೂ ಪ್ರಾಂಶುಪಾಲರು ಡಯಟ್ ಶಿವಮೊಗ್ಗ ಇವರು ಆದೇಶಿಸಿದ್ದರು. ಶ್ರೀಯುತರ ಮಾರ್ಗದರ್ಶನದಂತೆ ಸೂಕ್ತ ಸಿದ್ದತೆಗಳೊಂದಿಗೆ **“ಶಿವಮೊಗ್ಗ ಜಿಲ್ಲೆಯಾದ್ಯಂತ ಅನುಷ್ಠಾನಗೊಂಡಿರುವ ‘ನೋ ಬ್ಯಾಗ್ ಡೇ’ ಕಾರ್ಯಕ್ರಮದ ಪರಿಣಾಮಕತ್ವ ಕುರಿತು ಅಧ್ಯಯನ.”** ವನ್ನು ಕೈಗೊಳ್ಳಲಾಗಿದೆ.  ಶಿವಮೊಗ್ಗ ಜಿಲ್ಲೆಯ ಸರ್ಕಾರಿ ಮತ್ತು ಅನುದಾನಿತ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಯಾದೃಚ್ಛಿಕವಾಗಿ ಪ್ರತೀ ತಾಲ್ಲೂಕುಗಳಿಂದ ಮೂರು ಕಿರಿಯ ಪ್ರಾಥಮಿಕ, ನಾಲ್ಕು ಹಿರಿಯ ಪ್ರಾಥಮಿಕ ಹಾಗೂ ಮೂರು ಪ್ರೌಢಶಾಲೆಗಳಂತೆ ಒಟ್ಟು ಎಪ್ಪತ್ತು ಶಾಲೆಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಈ ಆಯ್ದ ಎಪ್ಪತ್ತು ಶಾಲೆಗಳ ಮುಖ್ಯೋಪಾಧ್ಯಯರು, ಸಹಶಿಕ್ಷಕರು ಹಾಗೂ ಮಕ್ಕಳಿಗೆ ‘ನೋ ಬ್ಯಾಗ್ ಡೇ’ ಕಾರ್ಯಕ್ರಮದಲ್ಲಿ ಚರ್ಚಿಸಿರುವ ವಿಷಯಾಂಶಗಳನ್ನು ಆಧರಿಸಿ, ನಿಗಧಿತ ಪ್ರಶ್ನಾವಳಿಗಳನ್ನು ನೀಡಿ ಅವರುಗಳಿಂದ ಮಾಹಿತಿ ಮತ್ತು ಅಭಿಪ್ರಾಯಗಳನ್ನು ಪಡೆದು ಈ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

ಈ ಅಧ್ಯಯನವನ್ನು ಆದ್ಯತೆಯ ಕಾರ್ಯವೆಂದು ಭಾವಿಸಿ ಬಹಳ ಆಸಕ್ತಿಯಿಂದ ತೊಡಗಿಸಿಕೊಳ್ಳಲಾಗಿತ್ತು. ವಿಶೇಷ ಅನುಭವಗಳೊಂದಿಗೆ ನಡೆಸಿದ ಈ ಅಧ್ಯಯನದಲ್ಲಿ ನಾನು ಕಂಡುಕೊಂಡ ವಾಸ್ತವಾಂಶಗಳನ್ನು ದೊರೆತ ಫಲಿತಾಂಶಗಳೊಂದಿಗೆ ವಿವರವಾದ ವರದಿಯನ್ನು ಈ ಮೂಲಕ ಪ್ರಸ್ತುತ ಪಡಿಸುವುದು ನನ್ನ ಜವಾಬ್ದಾರಿಯಾಗಿದೆ. ಈ ಅಧ್ಯಯನವು ಶೈಕ್ಷಣಿಕ ಕ್ಷೇತ್ರದಲ್ಲಿ ಒಂದು ಹೊಸ ಬೆಳಕನ್ನು ಚೆಲ್ಲಬಹುದೆಂಬ ಆಶಯ ನನ್ನದಾಗಿದೆ.

# "ಶಿವಮೊಗ್ಗ ಜಿಲ್ಲೆಯಾದ್ಯಂತ ಅನುಷ್ಠಾನಗೊಂಡಿರುವ 'ನೋ ಬ್ಯಾಗ್ ಡೇ' ಕಾರ್ಯಕ್ರಮದ ಪರಿಣಾಮಕತ್ವ ಕುರಿತು ಅಧ್ಯಯನ."

# "ಶಿವಮೊಗ್ಗ ಜಿಲ್ಲೆಯಾದ್ಯಂತ ಅನುಷ್ಠಾನಗೊಂಡಿರುವ 'ನೋ ಬ್ಯಾಗ್ ಡೇ' ಕಾರ್ಯಾಕ್ರಮದ ಪರಿಣಾಮಕತ್ವ ಕುರಿತು ಅಧ್ಯಯನ."

## ಈ ಕಾರ್ಯವನ್ನು ಕೈಗೊಂಡಿರುವವರ ವಿವರ

1. ಅಧ್ಯಯನಕಾರರ ಹೆಸರು :– ಶ್ರೀಮತಿ ಆರ್. ಗೀತಾ
2. ಪದನಾಮ :– ಉಪನ್ಯಾಸಕರು
3. ಶೈಕ್ಷಣಿಕ ವಿದ್ಯಾರ್ಹತೆ :– ಎಂ ಎ., ಬಿ ಇಡಿ.,
4. ಒಟ್ಟು ಸೇವಾವಧಿ :– 30 ವರ್ಷಗಳು
5. ಕಾರ್ಯ ನಿರ್ವಹಿಸುತ್ತಿರುವ ಸಂಸ್ಥೆ :– ಡಯಟ್ ಶಿವಮೊಗ್ಗ
6. ಸೇವಾ ವಿಶೇಷತೆ :– ಕನ್ನಡ ಭಾಷಾ ಶಿಕ್ಷಕರಾಗಿ 10 ವರ್ಷಗಳ ಸೇವೆ.
   ಶಿವಮೊಗ್ಗ ಜಿಲ್ಲಾ ಉಪನಿರ್ದೇಶಕರ ಕಾರ್ಯಾಲಯದಲ್ಲಿ ಕನ್ನಡ ವಿಷಯ ಪರಿವೀಕ್ಷಕರಾಗಿ 10 ವರ್ಷಗಳ ಸೇವೆ.
   ಶಿವಮೊಗ್ಗ ಡಯಟ್‌ನಲ್ಲಿ ಉಪನ್ಯಾಸಕರಾಗಿ 10 ವರ್ಷಗಳ ಕಾಲ ಕರ್ತವ್ಯ ನಿರ್ವಹಿಸಿದ ಅನುಭವ.
7. ಪ್ರಸ್ತಾವನೆ ಸಲ್ಲಿಸಿದ ದಿನಾಂಕ :– 05–08–2019

# ಅಧ್ಯಯನದ ಪ್ರಾಮುಖ್ಯತೆ

ಎನ್.ಸಿ.ಎಫ್. 2005ರ ಪ್ರಕಾರ ಭಾರತದ ಪ್ರತಿ ಪ್ರಜೆಗೂ ಸಂವಿಧಾನದಲ್ಲಿ ಪ್ರಸ್ತಾಪಿಸಿದಂತೆ ಕೆಲವು ಪ್ರಮುಖವಾದ ಗುರಿಗಳನ್ನು ತಲುಪುವಂತೆ ಮಾಡುವ ಗುರುತರವಾದ ಜವಾಬ್ದಾರಿ ಎಲ್ಲಾ ಶೈಕ್ಷಣಿಕ ಸಂಸ್ಥೆಗಳ ಮೇಲೆ ಇದೆ. ಈ ಜವಾಬ್ದಾರಿಯನ್ನು ಸಮರ್ಥವಾಗಿ ನಿರ್ವಹಿಸಲು ಅನೇಕ ನಾವಿನ್ಯ ಪ್ರಯೋಗಗಳನ್ನು ನಡೆಸುತ್ತಾ ಬಂದಿವೆ. ಆದರೂ ಶಿಕ್ಷಣ ಕ್ಷೇತ್ರದಲ್ಲಿ ಹಲವಾರೂ ಸವಾಲುಗಳು ಇನ್ನೂ ಜೀವಂತವಾಗಿಯೇ ಉಳಿದಿವೆ. ಅಂತಹ ಜ್ವಲಂತ ಸವಾಲುಗಳಲ್ಲಿ 'ಶಾಲಾ ಮಕ್ಕಳ ಪುಸ್ತಕದ ಹೊರೆ' ಒಂದು ಇಳಿಸಲಾಗದ ಹೊರೆಯಾಗಿ; ದಿನದಿಂದ ದಿನಕ್ಕೆ ಹೆಚ್ಚು ಹೆಚ್ಚು ಭಾರವಾಗುತ್ತಲೇ ಇದೆ. ಮಕ್ಕಳ ಕುತೂಹಲವನ್ನು ಅರಳಿಸಬೇಕಾದ ಪುಸ್ತಕಗಳ ಪಾತ್ರ ಪ್ರತಿಷ್ಠೆಯ ಪ್ರತೀಕವಾಗುತ್ತಿವೆ. ಪುಸ್ತಕಗಳ ಭಾರಕ್ಕೆ ಮಕ್ಕಳ ಬೆನ್ನು ಬಾಗುತ್ತಿರುವ ಸ್ಥಿತಿ ನಿರ್ಮಾಣವಾಗಿದೆ.

2016–17ರಲ್ಲಿ ತಜ್ಞರ ತಂಡಗಳು ಶಾಲೆಗಳಿಗೆ ಭೇಟಿ ನೀಡಿ, ರಾಜ್ಯದಲ್ಲಿ ಶಾಲಾ ಬ್ಯಾಗ್ನ ತೂಕವನ್ನು ಕಡಿಮೆಮಾಡಲು ಮಾರ್ಗದರ್ಶಿ ನಿಯಮಗಳನ್ನು ರೂಪಿಸಿದೆ. ಈ ಮಾರ್ಗದರ್ಶಿ ನಿಯಮಗಳ ಅನ್ವಯ ವಿದ್ಯಾರ್ಥಿಗಳು ಅವರ ದೇಹದ ತೂಕದ ಶೇ. 10 ರಿಂದ 15 ರಷ್ಟು ತೂಕದ ಪಠ್ಯಪುಸ್ತಕಗಳನ್ನು ತೆಗೆದುಕೊಂಡು ಹೋಗಬಹುದಾಗಿದೆ. ಪ್ರಸ್ತುತ ಸನ್ನಿವೇಶದಲ್ಲಿ ಕೆಲವು ಶಿಕ್ಷಣ ಸಂಸ್ಥೆಗಳು ಹಲವಾರು ನಾವಿನ್ಯ ತಂತ್ರಗಳನ್ನು ಅಳವಡಿಸಿಕೊಂಡು, 'ಶಾಲಾ ಮಕ್ಕಳ ಪುಸ್ತಕದ ಹೊರೆ' ಯನ್ನು ತಗ್ಗಿಸಲು ಪ್ರಯತ್ನಿಸುತ್ತಿರುವುದು ಅನುಕರಣಾ ಯೋಗ್ಯವಾಗಿದೆ. ಈ 'ನೋ ಬ್ಯಾಗ್ ಡೇ' ವಿನೂತನ ಕಾರ್ಯಕ್ರಮದಿಂದ ಮಕ್ಕಳ ಮನೋಭಾವದಲ್ಲಿ ನಿರೀಕ್ಷಿತ ಬದಲಾವಣೆಯನ್ನು ಕಾಣಲಾಯಿತು. ಇದರಿಂದ ಪ್ರಾಯೋಗಿಕವಾಗಿ ಕರ್ನಾಟಕ ಸರ್ಕಾರ 2018–19 ರಲ್ಲಿ ಸರ್ಕಾರಿ ಹಾಗೂ ಖಾಸಗಿ ಶಾಲೆಗಳಲ್ಲಿ 'ನೋ ಬ್ಯಾಗ್ ಡೇ'ಕಾರ್ಯಕ್ರಮವನ್ನು ಅನುಷ್ಟಾನಗೊಳಿಸುವಂತೆ ಆದೇಶಿಸಿತು.

ಈ ಆದೇಶದನ್ವಯ ಶಿವಮೊಗ್ಗ ಜಿಲ್ಲಾ ವ್ಯಾಪ್ತಿಯಲ್ಲಿಯೂ ಸಹ ಯಶಸ್ವಿಯಾಗಿ ಅನುಷ್ಠಾನಗೊಳಿಸಲಾಗಿದೆ. 'ನೋ ಬ್ಯಾಗ್ ಡೇ' ಕಾರ್ಯಕ್ರಮದ ಉದ್ದೇಶಗಳಾದ ಈ ಕೆಳಕಂಡ ಅಂಶಗಳನ್ನು ಜಿಲ್ಲೆಯ ಎಲ್ಲಾ ಶಾಲೆಗಳಲ್ಲಿ ಅಳವಡಿಸಿ ಅನುಷ್ಠಾನಗೊಳಿಸಲಾಗಿದೆ:

1. ವಾರದ ಒಂದು ದಿನ ಪುಸ್ತಕ ಚೀಲದ ಭಾರವನ್ನು ತಪ್ಪಿಸುವುದು.

2. ಸಹಪಠ್ಯ ಚಟುವಟಿಕೆಗಳಲ್ಲಿ ಎಲ್ಲ ವಿದ್ಯಾರ್ಥಿಗಳೂ ಭಾಗವಹಿಸುವಂತೆ ಮಾಆಡುವುದು.

3. ವಿದ್ಯಾರ್ಥಿಗಳ ಆಸಕ್ತಿ ಮಮತ್ತು ಅಭಿರುಚಿಗಳಿಗೆ ಸೂಕ್ತ ಅವಕಾಶ ಮತ್ತು ಪ್ರೇರಣೆಯನ್ನು ಒದಗಿಸುವುದು.

4. ಜ್ಞಾನವನ್ನು ಕಟ್ಟಿಕೊಳ್ಳುವ ಮತ್ತು ಅನ್ವಯಿಸುವ ಹಂತಗಳನ್ನು ಬಲಗೊಳಿಸುವುದು.

5. ಪಠ್ಯ ಮೂಲಕ ಕಲಿತ ಅನೇಕ ಕಲಿಕಾಂಶಗಳ ಪುನರ್ಬಲನ ಮತ್ತು ಮೌಲ್ಯಮಾಪನ ಮಾಡುವುದು.

6. ಪಠ್ಯಪುಸ್ತಕದ ಆಚೆಗೂ ಕಲಿಕೆಯನ್ನು ತೆಗೆದುಕೊಂಡು ಹೋಗುವುದು.

7. ಅಭಿವಯಕ್ತಿಯ ಕೌಶಲವನ್ನು ವೃದ್ಧಿಸುವುದು.

8. ಸ್ಥಳೀಯ ಕಲಾವಿದರು, ಸಂಪನಲವ್ಯಕ್ತಿಗಳೂ, ಕರಕುಶಲಕರ್ಮಿಗಳನ್ನು ಸಮರ್ಪಕವಾಗಿ ತೊಡಗಿಸಿಕೊಳ್ಳುವುದು.

9. ಸಹಪಠ್ಯ ಚಟುವಟಿಕೆಗಳನ್ನು ವ್ಯವಸ್ಥಿತವಾಗಿ ಮತ್ತು ಯೋಜನಾಬದ್ಧವಾಗಿ ಸಂಘಟಿಸುವ ಕೌಶಲವನ್ನು ಶಿಕ್ಷಕರಲ್ಲಿ ಬೆಲೆಸುವುದು.

ಈ ಎಲ್ಲಾ ಉದ್ದೇಶಗಳ ಈಡೇರಿಕೆಗಾಗಿ 'ನೋ ಬ್ಯಾಗ್ ಡೇ' ಕಾರ್ಯಕ್ರಮವನ್ನು ತಮ್ಮ ಶಾಲೆಗಳಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಅಗತ್ಯ ಪ್ರೇರಣೆಯನ್ನು ನೀಡುವುದು ಸಹ ಈ ಅಧ್ಯಯನದ ಉದ್ದೇಶವಾಗಿದೆ. ಅಲ್ಲದೆ ಇಲಾಖೆಯ ಆದೇಶದನ್ವಯ ಶಿವಮೊಗ್ಗ ಜಿಲ್ಲಾ ವ್ಯಾಪ್ತಿಯಲ್ಲಿ 'ನೋ ಬ್ಯಾಗ್ ಡೇ' ಕಾರ್ಯಕ್ರಮ ಅನುಷ್ಟಾನಗೊಂಡಿರುವ ಬಗ್ಗೆ ಅವಲೋಕಿಸುವುದು ನಮ್ಮ ಜವಬ್ದಾರಿಯು ಸಹ ಆಗಿದೆ. 'ನೋ ಬ್ಯಾಗ್ ಡೇ' ಕಾರ್ಯಕ್ರಮದ ಕಲಿಕಾ ಚಟುವಟಿಕೆಗಳ ಬಗ್ಗೆ ಶಿಕ್ಷಕರಿಗೆ ಮನನ ಮಾಡಿಸುವುದು ಹಾಗೂ ಶಾಲೆಗಳಲ್ಲಿ ಇಲಾಖೆಯ ನಿರೀಕ್ಷೆಯಂತೆ ಕಾರ್ಯನಿರ್ವಹಿಸುತ್ತಿರುವ ಬಗ್ಗೆ ಸೂಕ್ಷ್ಮವಾಗಿ ಹಾಗೂ ವಸ್ತುನಿಷ್ಠವಾಗಿ ಅವಲೋಕಿಸುವುದು ಅನಿವಾರ್ಯವೆನಿಸುತ್ತದೆ. ಈ ಪ್ರಯತ್ನದಲ್ಲಿ ನಾವು 'ನೋ ಬ್ಯಾಗ್ ಡೇ' ಕಾರ್ಯಕ್ರಮ ಅನುಷ್ಟಾನದ ಪರಿಣಾಮಕತ್ವದ ಅಧ್ಯಯನಕ್ಕೆ ಮುಂದಾಗಿದ್ದೇವೆ.

# ಅಧ್ಯಯನದ ಸ್ವರೂಪ

ಶಿವಮೊಗ್ಗ ಜಿಲ್ಲಾ ವ್ಯಾಪ್ತಿಯ ಎಲ್ಲಾ ಏಳು ತಾಲ್ಲೂಕುಗಳಲ್ಲಿರುವ ಸರ್ಕಾರಿ ಹಾಗೂ ಅನುದಾನಿತ ಕಿರಿಯ ಪ್ರಾಥಮಿಕ ಶಾಲೆ, ಹಿರಿಯ ಪ್ರಾಥಮಿಕ ಶಾಲೆ ಹಾಗೂ ಪ್ರೌಢ ಶಾಲೆಯಲ್ಲಿ ಪಠ್ಯಪುಸ್ತಕ ಆಧಾರಿತ ತರಗತಿ ಬೋಧನೆಗೆ ಹೊರತಾಗಿ, ಪ್ರತೀ ವಾರಕ್ಕೆ ಒಂದು ದಿನ ಅಥವಾ ಪಾಕ್ಷಿಕ ಒಂದು ದಿನ ಪಠ್ಯಪುಸ್ತಕ ರಹಿತ ಚಟುವಟಿಕೆ ಆಧಾರಿತ ಕಲಿಕಾ ಪ್ರಕ್ರಿಯೆಯನ್ನು ನಡೆಸುವಂತೆ ಇಲಾಖೆ ಸೂಚಿಸಿದೆ. ಇಲಾಖೆಯ ಈ ಆದೇಶದನ್ವಯ ತಮ್ಮ ಶಾಲೆಗಳಲ್ಲಿ ಅಳವಡಿಸಿ ಬೋಧನೆ ಮಾಡುತ್ತಿರುವ ಶಿಕ್ಷಕರುಗಳಿಂದ 'ನೋ ಬ್ಯಾಗ್ ಡೇ' ಕಾರ್ಯಕ್ರಮದ ಅನುಷ್ಟಾನಗೊಂಡಿರುವ ಬಗ್ಗೆ ಅಧ್ಯಯನ ಕೈಗೊಂಡಿದೆ. ಈ ಕಾರ್ಯಕ್ರಮವನ್ನು ಅನುಷ್ಠಾನಗೊಂಡಿರುವ ಶಾಲೆಗಳಲ್ಲಿ ಯಾದೃಚ್ಛಿಕವಾಗಿ ಪ್ರತೀ ತಾಲ್ಲೂಕುಗಳಿಂದ ಕಿರಿಯ ಪ್ರಾಥಮಿಕ ಶಾಲೆ, ಹಿರಿಯ ಪಾಥಮಿಕ ಶಾಲೆ ಹಾಗೂ ಪ್ರೌಢಶಾಲೆಗಳಂತೆ ಒಟ್ಟು 50 ಶಾಲೆಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಈ ಶಾಲೆಗಳ ಮುಖ್ಯಶಿಕ್ಷಕರು, ಸಹಶಿಕ್ಷಕರು ಹಾಗು ಮಕ್ಕಳನ್ನು ಬಳಸಿಕೊಂಡು 'ನೋ ಬ್ಯಾಗ್ ಡೇ' ಕಾರ್ಯಕ್ರಮದಲ್ಲಿ ಚರ್ಚಿಸಿರುವ ವಿಷಯಾಂಶಗಳನ್ನು ಆಧರಿಸಿ, ನಿಗಧಿತ ಪ್ರಶ್ನಾವಳಿಗಳನ್ನು ಸಿದ್ದಪಡಿಸಿಕೊಂಡು, ಅವರುಗಳಿಗೆ ನೀಡಿ, ಅವರಿಂದ ಮಾಹಿತಿ ಮತ್ತು ಅಭಿಪ್ರಾಯಗಳನ್ನು ಪಡೆದು ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

ಈ ಅಧ್ಯಯನಕ್ಕೆ ಆಯ್ಕೆಮಾಡಿಕೊಂಡಿರುವ ಶಾಲೆಗಳ ಮುಖ್ಯೋಪಾಧ್ಯಾರಿಂದಲೂ ಸಹ ತಮ್ಮ ಶಾಲೆಯ ಭಾಷಾ ಶಿಕ್ಷಕರಲ್ಲಿನ ಮನೋಧೋರಣೆ, ಕೋರ್ ವಿಷಯಗಳನ್ನು ಬೋಧಿಸುವ ಶಿಕ್ಷಕರಲ್ಲಿನ ಮನೋಧೋರಣೆ, ಹಾಗೂ ಮಕ್ಕಳ ಮನೋಧೋರಣೆ ಮತ್ತು ಬೋಧನಾ ಪ್ರಕ್ರಿಯೆಯಲ್ಲಿನ ನಿರೀಕ್ಷಿತ ಬದಲಾವಣೆಗಳನ್ನು ಆಧರಿಸಿ ತಯಾರಿಸಿದ ನಿಗಧಿತ ಪ್ರಶ್ನಾವಳಿಗಳನ್ನು ನೀಡಿ ಅವರುಗಳಿಂದ ಮಾಹಿತಿ ಮತ್ತು ಅಭಿಪ್ರಾಯಗಳನ್ನು ಪಡೆದು ಶಿಕ್ಷಕರ ಸಾಮರ್ಥ್ಯವರ್ಧಕ ಚಟುವಟಿಕೆಗಳ ಈ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

ಅಧ್ಯಯನಕ್ಕೆ ಆಯ್ಕೆಮಾಡಿಕೊಂಡಿರುವ ಶಾಲೆಗಳ ವಿದ್ಯಾರ್ಥಿಗಳಿಂದಲೂ ಸಹ 'ನೋ ಬ್ಯಾಗ್ ಡೇ' ಕಾರ್ಯಕ್ರಮದ ದಿನ ತಾವು ಪಠ್ಯಪುಸ್ತಕ ಹಾಗೂ ಶಾಲಾ ಬ್ಯಾಗ್ ಇಲ್ಲದಂತೆ ಶಾಲೆಗೆ ಬರುವಲ್ಲಿ ತಮ್ಮ ಮನೋಭಾವ ಮತ್ತು ಕಲಿಕಾ ಚಟುವಟಿಕೆಗಳಲ್ಲಿ ತಾವು ಸಕ್ರೀಯವಾಗಿ ಪಾಲ್ಗೊಳ್ಳುತ್ತಿರುವ ಬಗ್ಗೆ ಅವರ ಮನೋಧೋರಣೆ ಮತ್ತು ತರಗತಿ ಬೋಧನಾ ಪ್ರಕ್ರಿಯೆಯಲ್ಲಿನ ನಿರೀಕ್ಷಿತ ಬದಲಾವಣೆಗಳನ್ನು ಆಧರಿಸಿ ತಯಾರಿಸಿದ ನಿಗಧಿತ ಪ್ರಶ್ನಾವಳಿಗಳನ್ನು ನೀಡಿ ಅವರುಗಳಿಂದ ಮಾಹಿತಿ ಮತ್ತು ಅಭಿಪ್ರಾಯಗಳನ್ನು ಪಡೆದು ಈ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

ಶಾಲೆಗಳಿಗೆ ಭೇಟಿಮಾಡಿದ ಸಂದರ್ಭದಲ್ಲಿ ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತೆ ಅವಲೋಕನಾ ವಿಧಾನದಿಂದಲೂ, ಮಾಹಿತಿಗಳನ್ನು ಸಂಗ್ರಹಿಸಲಾಗಿದೆ. ಅಧ್ಯಯನದಲ್ಲಿ ಕಂಡುಕೊಳ್ಳಬೇಕಾಗಿರುವ ಅಂಶಗಳನ್ನು ಆಧರಿಸಿ ದತ್ತ ಅಂಶಗಳನ್ನು ಬಳಸಿಕೊಳ್ಳಲಾಗಿದೆ. ಅಧ್ಯಯನದ ನಿಹಿತಾರ್ಥಗಳನ್ನು ಆಧರಿಸಿ ವಾಸ್ತವಿಕವಾಗಿ ಶಾಲೆಗಳಲ್ಲಿ 'ನೋ ಬ್ಯಾಗ್ ಡೇ' ಕಾರ್ಯಕ್ರಮ ಅನುಷ್ಟಾನಗೊಂಡಿರುವ ಸ್ಥಿತಿಯನ್ನು ಅವಲೋಕಿಸುವುದಾಗಿದೆ. ಆ ಮೂಲಕ ಕಲಿಕಾ ಪ್ರಕ್ರಿಯೆಯಲ್ಲಿ ನಾವಿನ್ಯ ತಂತ್ರಗಳನ್ನು ವಿನ್ಯಾಸಗೊಳಿಸುವ ಹಾಗೂ ಅಳವಡಿಸಿಕೊಳ್ಳುವ ಮನೋಭಾವವನ್ನು ಬೆಳೆಸುವುದೂ ಸಹ ಆಗಿದೆ.

# ಅಧ್ಯಯನ ಕ್ಷೇತ್ರದ ವ್ಯಾಪ್ತಿ

ಭಾರತದ ಪರಂಪರೆಯಲ್ಲಿ ಶಿಕ್ಷಕನಿಗೆ ಅಪಾರ ಗೌರವದ ಸ್ಥಾನವಿದೆ. ''ಗುರುದೇವ್ರೋಭವ'' ಎಂದು ದೇವರಿಗೆ ಹೋಲಿಸಲಾಗಿದೆ. ಬದಲಾಗುತ್ತಿರುವ 'ಶಿಕ್ಷಕ' ಎಂಬ ಪರಿಕಲ್ಪನೆಯ ಕಾಲದಲ್ಲಿ ನವನವೀನ ಕಲಿಕಾ ವಿಧಾನಗಳು ಹೊಸ ಹೊಸ ಕಲಿಕಾ ಸನ್ನಿವೇಶಗಳು ನಮ್ಮ ಕಲಿಕಾಫಲಗಳು, ಬದಲಾಗುತ್ತಿರುವ ವಿದ್ಯಾರ್ಥಿಗಳ ಅಗತ್ಯತೆಗಳು ಬೇಡಿಕೆಗಳು, ಗುರಿಗಳು, ಉದ್ದೇಶಗಳು, ಇಂತಹ ಬದಲಾವಣೆಯ ಪರ್ವದಲ್ಲಿ ಶಿಕ್ಷಕನು ಬದಲಾಗಬೇಕಾಗಿದೆ. ಶಿಕ್ಷಕ ಮತ್ತು ಅವನ ತರಗತಿಗಳು ನಿಂತ ನೀರಾಗದೇ ಹರಿಯುವ ನೀರಿನಂತೆ ಹೊಸತನ ಶುಭ್ರತೆ ತರುವಂತಾಗಬೇಕು. ಅದಕ್ಕಾಗಿ ಶಿಕ್ಷಕ ಸದಾ ಜ್ಞಾನದಾಹಿಯಾಗಬೇಕು

'ಸರ್ಕಾರ ಹಾಗೂ ಶಿಕ್ಷಣ ಇಲಾಖೆ ಪರಿಚಯಿಸುತ್ತಿರುವ 'ನೋ ಬ್ಯಾಗ್ ಡೇ' ಕಾರ್ಯಕ್ರಮ ಯಶಸ್ವಿಗೊಳ್ಳುವುದು, ಎಲ್ಲಾ ಶಿಕ್ಷಕರು ಅದರ ಬಗ್ಗೆ ಮಾಹಿತಿ ಪಡೆದು ತಮ್ಮ ಶಾಲೆಗಳಲ್ಲಿ ಅನುಷ್ಠಾನಗೊಳಿಸಿದಾಗ ಮಾತ್ರ ' ಎಂಬ ಮಾತು ಎಲ್ಲರೂ ಒಪ್ಪುವಂತಹದ್ದು. ತರಗತಿ ಕಲಿಕಾ ಚಟುವಟಿಕೆಗಳ ಜೊತೆ ಜೊತೆಯಲ್ಲಿ 'ನೋ ಬ್ಯಾಗ್ ಡೇ' ಚಟುವಟಿಕೆಗಳನ್ನು ಸಹ ಅಳವಡಿಸಿಕೊಳ್ಳುವಂತೆ ಪ್ರೇರೇಪಿಸುವುದು ಅಗತ್ಯವಾಗಿದೆ. ಈ ಹಿನ್ನೆಲೆಯಲ್ಲಿ ಶಿವಮೊಗ್ಗ ಜಿಲ್ಲೆಯ ಸರ್ಕಾರಿ ಹಾಗು ಅನುದಾನಿತ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಲ್ಲಿ 'ನೋ ಬ್ಯಾಗ್ ಡೇ' ಕಾರ್ಯಕ್ರಮವನ್ನು ಅನುಷ್ಟಾನಗೊಳಿಸಿರುವ ಬಗ್ಗೆ ಸೂಕ್ಷ್ಮವಾಗಿ ಹಾಗೂ ವಸ್ತು ನಿಷ್ಟವಾಗಿ ಅವಲೋಕಿಸುವುದು ಅಪೇಕ್ಷಣೀಯವಾಗಿದೆ.

ಈ ಹಿನ್ನೆಲೆಯಲ್ಲಿ ಅಧ್ಯಯನವನ್ನು ನಡೆಸುವಂತೆ ಉಪನಿರ್ದೇಶಕರು(ಅಭಿವೃದ್ಧಿ) ಹಾಗೂ ಪ್ರಾಂಶುಪಾಲರು ಡಯಟ್ ಶಿವಮೊಗ್ಗ ಇವರು ಆದೇಶಿಸಿದ್ದರು. ಶ್ರೀಯುತರ ಮಾರ್ಗದರ್ಶನದಂತೆ ಸೂಕ್ತ ಸಿದ್ದತೆಗಳೊಂದಿಗೆ **''ಶಿವಮೊಗ್ಗ ಜಿಲ್ಲೆಯಾದ್ಯಂತ ಅನುಷ್ಠಾನಗೊಂಡಿರುವ 'ನೋ ಬ್ಯಾಗ್ ಡೇ' ಕಾರ್ಯಾಕ್ರಮದ ಪರಿಣಾಮಕತ್ವ ಕುರಿತು ಅಧ್ಯಯನ.''** ವನ್ನು ಕೈಗೊಳ್ಳಲಾಗಿದೆ. ಶಿವಮೊಗ್ಗ ಜಿಲ್ಲೆಯ ಸರ್ಕಾರಿ ಮತ್ತು ಅನುದಾನಿತ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಯಾದೃಚ್ಛಿಕವಾಗಿ ಪ್ರತೀ ತಾಲ್ಲೂಕುಗಳಿಂದ ಕಿರಿಯ ಪ್ರಾಥಮಿಕ, ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಂತೆ ಒಟ್ಟು 50 ಶಾಲೆಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಈ ಆಯ್ದ 50 ಶಾಲೆಗಳ ಮುಖ್ಯೋಪಾಧ್ಯಯರು, ಸಹಶಿಕ್ಷಕರು ಹಾಗೂ ಮಕ್ಕಳಿಗೆ 'ನೋ ಬ್ಯಾಗ್ ಡೇ' ಕಾರ್ಯಕ್ರಮದಲ್ಲಿ ಚರ್ಚಿಸಿರುವ ವಿಷಯಾಂಶಗಳನ್ನು ಆಧರಿಸಿ, ನಿಗಧಿತ ಪ್ರಶ್ನಾವಳಿಗಳನ್ನು ನೀಡಿ ಅವರುಗಳಿಂದ ಮಾಹಿತಿ ಮತ್ತು ಅಭಿಪ್ರಾಯಗಳನ್ನು ಪಡೆದು ಈ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

ಈ ಅಧ್ಯಯನವನ್ನು ಆದ್ಯತೆಯ ಕಾರ್ಯವೆಂದು ಭಾವಿಸಿ ಬಹಳ ಆಸಕ್ತಿಯಿಂದ ತೊಡಗಿಸಿಕೊಳ್ಳಲಾಗಿತ್ತು. ವಿಶೇಷ ಅನುಭವಗಳೊಂದಿಗೆ ನಡೆಸಿದ ಈ ಅಧ್ಯಯನದಲ್ಲಿ ನಾನು ಕಂಡುಕೊಂಡ ವಾಸ್ತವಾಂಶಗಳನ್ನು ದೊರೆತ ಫಲಿತಾಂಶಗಳೊಂದಿಗೆ ವಿವರವಾದ ವರದಿಯನ್ನು ಈ ಮೂಲಕ ಪ್ರಸ್ತುತ ಪಡಿಸುವುದು ನನ್ನ ಜವಾಬ್ದಾರಿಯಾಗಿದೆ. ಈ ಅಧ್ಯಯನವು ಶೈಕ್ಷಣಿಕ ಕ್ಷೇತ್ರದಲ್ಲಿ ಒಂದು ಹೊಸ ಬೆಳಕನ್ನು ಚೆಲ್ಲಬಹುದೆಂಬ ಆಶಯ ನನ್ನದಾಗಿದೆ.

ಆ ಮೂಲಕ ತಮ್ಮ ಬೋಧನಾ ಕೌಶಲ್ಯವನ್ನು ಹಾಗೂ ಜಿಲ್ಲೆಯ ಶೈಕ್ಷಣಿಕ ಗುಣ ಮಟ್ಟವನ್ನು ಉತ್ತಮ ಪಡಿಸಲು ಪ್ರಯತ್ನಶೀಲರಾಗಿದ್ದಾರೆ ಎಂಬ ಅಂಶಗಳನ್ನು ಕಂಡುಕೊಳ್ಳಲು ಶಿವಮೊಗ್ಗ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯು ಮುಂದಾಗಿದ್ದು. ಈ ಕಾರ್ಯದ ನಿರ್ವಹಣೆಗೆ ಶ್ರೀಮತಿ ಗೀತಾ ಆರ್. ಉಪನ್ಯಾಸಕರು ದಯಟ್ ಶಿವಮೊಗ್ಗ ಇವರನ್ನು ನಿಯೋಜಿಸಿ ಆದೇಶಿಸಿರುತ್ತಾರೆ.

# ಅಧ್ಯಯನದ ಉದ್ದೇಶ

**"ಶಿವಮೊಗ್ಗ ಜಿಲ್ಲೆಯಾದ್ಯಂತ ಅನುಷ್ಠಾನಗೊಂಡಿರುವ 'ನೋ ಬ್ಯಾಗ್ ಡೇ' ಕಾರ್ಯಕ್ರಮದ ಪರಿಣಾಮಕತ್ವ ಕುರಿತು ಅಧ್ಯಯನ." ಈ ಅಧ್ಯಯನವು ಕೆಳಕಂಡ ಉದ್ದೇಶಗಳನ್ನು ಒಳಗೊಂಡಿರುತ್ತದೆ.**

## ಅಧ್ಯಯನದ ಉದ್ದೇಶ

1. 'ನೋ ಬ್ಯಾಗ್ ಡೇ' ಕಾರ್ಯಕ್ರಮ ಅನುಷ್ಟಾನಗೊಂಡಿರುವ ಬಗ್ಗೆ ಅವಲೋಕಿಸಿ, ಭಾಗೀದಾರರು ಧನಾತ್ಮಕವಾಗಿ ಅಂಗೀಕರಿಸುವಂತೆ ಮಾಡುವುದು.

2. ಮಕ್ಕಳ ಶಾಲಾ ಪಠ್ಯಪುಸ್ತಕದ ಬ್ಯಾಗ್‌ನ ಹೊರೆಯನ್ನು ಕಡಿತಗೊಳಿಸುವ ತಂತ್ರಗಳ ಪರಿಚಯ ಮಾಡಿಸುವುದು ಹಾಗೂ 'ನೋ ಬ್ಯಾಗ್ ಡೇ' ಕಾರ್ಯಕ್ರಮ ಬಗ್ಗೆ ಶಿಕ್ಷಕರು ಅರ್ಥೈಸಿಕೊಂಡು ಅನುಷ್ಟಾನಗೊಳಿಸಲು ಪ್ರೇರೇಪಿಸುವುದು.

3. 'ನೋ ಬ್ಯಾಗ್ ಡೇ' ಕಾರ್ಯಕ್ರಮದ ಆಶಯಗಳನ್ನು ಈಡೇರಿಸುವಲ್ಲಿ ಶಿಕ್ಷಕರ ಮನೋಸಿದ್ದತೆಯ ಬಗ್ಗೆ ತಿಳಿಯುವುದು.

4. ಶಿಕ್ಷಕರು 'ನೋ ಬ್ಯಾಗ್ ಡೇ' ಕಾರ್ಯಕ್ರಮದಲ್ಲಿ ಕಲಿಕಾ ಚಟುವಟಿಕೆಗಳನ್ನು ಅನುಷ್ಟಾನಗೊಳಿಸುತ್ತಿರುವ ವಸ್ತುಸ್ಥಿತಿಯನ್ನು ತಿಳಿಯುವುದು.

5. ಮಕ್ಕಳ ಅಮೂಲ್ಯ ಬಾಲ್ಯವನ್ನು ಮತ್ತಷ್ಟು ಆನಂದದಾಯಕ ಪಡಿಸುವಲ್ಲಿ 'ನೋ ಬ್ಯಾಗ್ ಡೇ' ಕಲ್ಪನೆ ಪೂರಕವಾದದ್ದು ಎಂಬ ಮನೋಭಾವನೆಯನ್ನು ದೃಢಗೊಳಿಸುವುದು.

6. ಭಾರಿತೂಕದ ಶಾಲಾ ಬ್ಯಾಗ್ ಗಳನ್ನು ಒಂದು ದಿನದ ಮಟ್ಟಿಗಾದರೂ ಶಾಲೆಗೆ ತರುವುದರಿಂದ ಮಗುವನ್ನು ಮುಕ್ತರನ್ನಾಗಿಸುವ ಮನೋಭಾವನೆ ಮೂಡಿಸುವುದು.

7. ಪ್ರತಿ ಮಗುವಿಗೂ ಆತ್ಮವಿಶ್ವಾಸ ವೃದ್ಧಿ, ವಿಷಯ ಮಂಡನಾ ಕೌಶಲ, ಸಭಾಕಂಪನ ನಿರ್ಮೂಲನೆ ಮೊದಲಾದ ಸಾಮರ್ಥ್ಯಗಳನ್ನು ಬೆಳೆಸಲು 'ನೋ ಬ್ಯಾಗ್ ಡೇ' ಕಾರ್ಯಕ್ರಮ ವೇದಿಕೆಯಾಗಿಸುವ ಕೌಶಲ್ಯವನ್ನು ಶಿಕ್ಷಕರಲ್ಲಿ ಬೆಳೆಸುವುದು.

8. ಮಗು ತಂಡದಲ್ಲಿ ಕಾರ್ಯ ನಿರ್ವಹಿಸುವ ಮತ್ತು ಹೊಂದಾಣಿಕೆಯ ಗುಣವನ್ನು ಬೆಳೆಸಲು ಈ 'ನೋ ಬ್ಯಾಗ್ ಡೇ' ಕಾರ್ಯಕ್ರಮ ಸಹಾಯವಾಗುತ್ತದೆ ಎಂಬ ಅಂಶವನ್ನು ದೃಢಗೊಳಿಸುವುದು.

9. ಮಕ್ಕಳಲ್ಲಿರುವ ಸುಪ್ತ ಪ್ರತಿಭೆಯ ಅನಾವರಣಕ್ಕೆ ಪಠ್ಯಪುಸ್ತಕದ ಅಡೆತಡೆಗಳನ್ನು ನಿವಾರಣೆಗೊಳಿಸಿಕೊಳ್ಳು ಈ 'ನೋ ಬ್ಯಾಗ್ ಡೇ' ಕಾರ್ಯಕ್ರಮ ವೇದಿಕೆಯಾಗಬಲ್ಲದು ಎಂಬ ಅಂಶ ಮನನ ಮಾಡಿಸುವುದು.

10. ಮಕ್ಕಳನ್ನು ತರಗತಿ ಕೋಣೆಯ ಸೀಮಿತ ಪ್ರದೇಶದಿಂದ ಹೊರಾಂಗಣ ಕಲಿಕಾ ವಾತಾವರಣಕ್ಕೆ ಕರೆತರುವ ಮೂಲಕ ಪ್ರಕೃತಿಯಲ್ಲಿ ಕಲಿಕೆಯ ಅವಕಾಶವನ್ನು ಕಲ್ಪಿಸಿ ಕೊಡುವುದು.

ಹೀಗೆ ಹತ್ತು ಹಲವು ಶೈಕ್ಷಣಿಕ ಮತ್ತು ಮನೋವೈಜ್ಞಾನಿಕ ಚಿಂತನೆಯ ಅಂಶಗಳನ್ನು ಇಟ್ಟುಕೊಂಡು ಈ ಅಧ್ಯಯನವನ್ನು ನಡೆಸಲು ಉದ್ದೇಶಿಸಲಾಗಿದೆ.

# ಅಧ್ಯಯನದಿಂದ ಕಂಡು ಕೊಳ್ಳಬೇಕಾದ ಅಂಶಗಳ

**ಶಿವಮೊಗ್ಗ ಜಿಲ್ಲೆಯ ಸರ್ಕಾರಿ ಹಾಗೂ ಅನುದಾನಿತ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ 'ನೋ ಬ್ಯಾಗ್ ಡೇ' ಕಾರ್ಯಕ್ರಮವು ಅನುಷ್ಟಾನಗೊಂಡಿರುವ ಪರಿಣಾಮಕಾರತ್ವವು ಎಷ್ಟರ ಮಟ್ಟಿಗೆ ಫಲಪ್ರದವಾಗಿದೆ ಎಂದು ಅಧ್ಯಯನಮಾಡಲು ಹೊರಟ ನಾವು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರವನ್ನು ಕಂಡುಕೊಳ್ಳಲು ಪ್ರಯತ್ನಿಸಿದ್ದೇವೆ.**

## ಅಧ್ಯಯನದಿಂದ ಕಂಡು ಕೊಳ್ಳಬೇಕಾದ ಅಂಶಗಳು

1. 'ನೋ ಬ್ಯಾಗ್ ಡೇ' ಕಾರ್ಯಕ್ರಮವನ್ನು ಶಿಕ್ಷಕರು ಹಾಗೂ ಅನುಷ್ಠಾನಾಧಿಕಾರಿಗಳು ಎಷ್ಟರಮಟ್ಟಿಗೆ ಅಂಗೀಕರಿಸಿದ್ದಾರೆ?
2. 'ನೋ ಬ್ಯಾಗ್ ಡೇ' ಕಾರ್ಯಕ್ರಮದ ಪರಿಕಲ್ಪನೆಯನ್ನು ಭಾಗೀದಾರರು ಎಷ್ಟರಮಟ್ಟಿಗೆ ಅರ್ಥೈಸಿಕೊಂಡಿದ್ದಾರೆ?
3. ಕಲಿಕಾಂಶಗಳನ್ನು ಮತ್ತು ಭಾಷಾ ಕೌಶಲಗಳನ್ನು ಬೆಳೆಸಿಕೊಳ್ಳಲು 'ನೋ ಬ್ಯಾಗ್ ಡೇ' ದಿನ ಕೈಗೊಳ್ಳಬಹುದಾದ ನಾವಿನ್ಯ ಚಟುವಟಿಕೆಗಳನ್ನು ರೂಪಿಸಿ ಅನುಷ್ಟಾನಗೊಳಿಸುವಲ್ಲಿ ಶಿಕ್ಷಕರ ಮನೋಧೋರಣೆ ತಿಳಿಯುವುದು.
4. ಮಕ್ಕಳ ಶಾಲಾ ಬ್ಯಾಗ್ ಹೊರೆಯನ್ನು ತಗ್ಗಿಸಲು ಹಾಗೂ ಅವರನ್ನು ಹೆಚ್ಚು ಚಟುವಟಿಕೆಯಲ್ಲಿ ಇರಿಸಿಕೊಳ್ಳಲು ಕೈಗೊಳ್ಳಬಹುದಾದ ನಾವಿನ್ಯ ಚಟುವಟಿಕೆಗಳಲ್ಲಿ 'ನೋ ಬ್ಯಾಗ್ ಡೇ' ಕಾರ್ಯಕ್ರಮಕ್ಕೆ ಮಾಡಿಕೊಂಡಿವ ಸಿದ್ಧತೆ ಬಗ್ಗೆ ತಿಲಿಯುವುದು.
5. 'ನೋ ಬ್ಯಾಗ್ ಡೇ' ಕಾರ್ಯಕ್ರಮ ಅನುಷ್ಟಾನದ ಪರಿಣಾಮಕತ್ವದ ವಸ್ತುಸ್ಥಿತಿಯನ್ನು ತಿಳಿಯುವುದು.

# ಅಧ್ಯಯನದ ಯೋಜನಾ ವಿವರ

## ಅ. ಅಧ್ಯಯನ ಪ್ರತಿದರ್ಶಿಚಯನ

ಶಿವಮೊಗ್ಗ ಜಿಲ್ಲೆಯ ಪ್ರತಿ ತಾಲೂಕಿನ ಯಾದೃಚ್ಛಿಕವಾಗಿ ಆಯ್ದ ಸರ್ಕಾರಿ ಮತ್ತು ಅನುದಾನಿತ ಕಿರಿಯ ಪ್ರಾಥಮಿಕ ಶಾಲೆ, ಹಿರಿಯ ಪ್ರಾಥಮಿಕ ಶಾಲೆ ಹಾಗು ಪ್ರೌಢ ಶಾಲೆಗಳಿಗೆ ಭೇಟಿ ನೀಡಿ, 'ನೋ ಬ್ಯಾಗ್ ಡೇ' ಕಾರ್ಯಕ್ರಮ ಅನುಷ್ಟಾನದ ಪರಿಣಾಮಕತ್ವವನ್ನು ಪರಿಶೀಲಿಸಿ, ಮಾಹಿತಿ ಸಂಗ್ರಹಿಸಿ, ಪರಿಣಾಮಕಾರಿ ಕಲಿಕೆಗೆ ಅಡಚಣೆಗಳು ಇದ್ದಲ್ಲಿ ಅವುಗಳನ್ನು ಪಟ್ಟಿ ಮಾಡಿಕೊಂಡು, ಕಾರಣಗಳನ್ನು ಕಂಡುಕೊಂಡು ಪರಿಹಾರಾತ್ಮಕ ಕಾರ್ಯತಂತ್ರಗಳನ್ನು ರೂಪಿಸುವುದಾಗಿದೆ.

## ಆ. ಸಾಧನ ಮತ್ತು ತಂತ್ರಗಳು

**ಸಾಧನಗಳು:**

1. ಪ್ರಶ್ನಾವಳಿ ನಮೂನೆ
2. ಅವಲೋಕನ ಪಟ್ಟಿ

**ತಂತ್ರಗಳು** :– * ಪ್ರಶ್ನಾವಳಿ ನಮೂನೆ ಸಹಾಯದಿಂದ ಶಿಕ್ಷಕರ ಚಟುವಟಿಕೆಗಳ ಆಯೋಜಸಿ, ಆ ಮೂಲಕ ವೃತ್ತಿಪರತೆ ಹೆಚ್ಚಿಸಿಕೊಳ್ಳುವ ಬಗ್ಗೆ ಮಾಹಿತಿ

* ಅವಲೋಕನ ಪಟ್ಟಿಯ ಮೂಲಕ ಪಠ್ಯಪುಸ್ತಕ ಹಾಗೂ ಶಾಲಾ ಬ್ಯಾಗ್ ರಹಿತ ಕಲಿಕೆ ಮತ್ತು ಬೋಧನೆಗೆ ಅಳವಡಿಸಿಕೊಂಡಿರುವ ತಂತ್ರದ ಅವಲೋಕನ ಮಾಹಿತಿ ಸಂಗ್ರಹಣೆ.

* ಶಾಲೆಗಳಿಗೆ ಭೇಟಿ ನೀಡಿ ಮಕ್ಕಳು ಮತ್ತು ಶಿಕ್ಷಕರನ್ನು ನೇರವಾಗಿ ಸಂಧರ್ಶನ ಮಾಡಿ ಅವರ ನೈಜ ಕಲಿಕಾ ಅವಕಾಶಗಳು, ಭಾಗವಹಿಸುವಿಕೆ ಮತ್ತು ಪ್ರಗತಿಯನ್ನು ಅವಲೋಕಿಸುವುದು

**ಇ. ಕಾಲಮಿತಿ ;** **'ನೋ ಬ್ಯಾಗ್ ಡೇ' ಕಾರ್ಯಕ್ರಮ ಅನುಷ್ಟಾನದ ಪರಿಣಾಮಕಾರತ್ವವು ಎಷ್ಟರ ಮಟ್ಟಿಗೆ ಫಲಪ್ರದವಾಗಿದೆ ಎಂದು ವಸ್ತುನಿಷ್ಠವಾಗಿ ಅಧ್ಯಯನಮಾಡಲು** ಸೆಪ್ಟಂಬರ್ 2019 ರಿಂದ ಜನವರಿ 2020 ರವರೆಗೆ ಒಟ್ಟು ಐದು ತಿಂಗಳ ಅವಧಿಯನ್ನು ನಿಗಧಿ ಪಡಿಸಿಕೊಳ್ಳಲಾಗಿದೆ.

## ಈ. ಅಧ್ಯಯನದ ಕಾರ್ಯವಿಧಾನಗಳು

ಈ ಆಧ್ಯಯನಕ್ಕಾಗಿ ಶಿವಮೊಗ್ಗ ಜಿಲ್ಲಾ ವ್ಯಾಪ್ತಿಯ ಸರ್ಕಾರಿ ಮತ್ತು ಅನುದಾನಿತ ಕಿರಿಯ ಪ್ರಾಥಮಿಕ ಶಾಲೆಗಳು, ಹಿರಿಯ ಪ್ರಥಮಿಕ ಶಾಲೆಗಳು ಮತ್ತು ಪ್ರೌಢಶಾಲೆಗಳಲ್ಲಿನ ಭಾಷಾ ಶಿಕ್ಷಕರು, ಕೋರ್ ವಿಷಯ ಶಿಕ್ಷಕರುಗಳ ಕಲಿಕಾ–ಬೋಧನಾ ಪ್ರಕ್ರಿಯೆಗಳನ್ನು ಅವಲೋಕನ ಮಾಡಿ, ಪ್ರಶ್ನಾವಳಿಗಳಿಗೆ ಉತ್ತರ ಪಡೆಯುವುದು. ಮುಖ್ಯ ಶಿಕ್ಷಕರು ಮತ್ತು ಮಕ್ಕಳನ್ನು ಭೇಟಿ ಮಾಡಿ ದತ್ತಾಂಶ ಸಂಗ್ರಹಿಸುವುದು. ವಿಶ್ಲೇಷಣೆ, ಬಂದ ಪ್ರತಿಫಲನಗಳನ್ನು ಶಿಕ್ಷಕರೊಂದಿಗೆ ಹಂಚಿಕೊಳ್ಳುವುದು

## –: ಅಧ್ಯಯನದ ಕಾರ್ಯಯೋಜನೆ ವಿವರ :–

**ಪ್ರಸ್ತುತ ಕಾರ್ಯವು ಈ ಕೆಳಕಂಡಂತೆ ಕಾರ್ಯತಂತ್ರಗಳ ವಿವರವನ್ನು ಒಳಗೊಂಡಿರುತ್ತದೆ.**

' ಶಿವಮೊಗ್ಗ ಜಿಲ್ಲೆಯಾದ್ಯಂತ ಅನುಷ್ಠಾನಗೊಂಡಿರುವ 'ನೋ ಬ್ಯಾಗ್ ಡೇ' ಕಾರ್ಯಾಕ್ರಮದ ಪರಿಣಾಮಕತ್ವ ಒಂದು ಅಧ್ಯಯನ.'

**ಅಧ್ಯಯನದ ವಿಧಾನ (ಕ್ರಿಯಾ ಯೋಜನೆ)**

| ಕ್ರ.ಸಂ. | ಚಟುವಟಿಕೆಗಳು | ಬೇಕಾಗುವ ಸಂಪನ್ಮೂಲಗಳು | | | |
|---|---|---|---|---|---|
| | | ಮಾನವ | ಸಾಮಾಗ್ರಿ | ಧನ | ಕಾಲ |
| 1. | 'ನೋ ಬ್ಯಾಗ್ ಡೇ' ಕಾರ್ಯಕ್ರಮದ ಉದ್ದೇಶ ಮತ್ತು ನಿರೀಕ್ಷಿಸಿದ ಬದಲಾವಣೆಗಳನ್ನು ಆಧರಿಸಿ, ಅಧ್ಯಯನದ ಉದ್ದೇಶಗಳ ಈಡೇರಿಕೆಗೆ ಅಗತ್ಯವಾದ ಮಾಹಿತಿ ಸಂಗ್ರಹಿಸುವ ಸಾಧನಗಳನ್ನು (ಅಭಿಪ್ರಾಯಾವಳಿ, ತಾಳೆಪಟ್ಟಿಗಳು) ರೂಪಿಸುವುದು. | ನಾನು ಮತ್ತು ಡಯಟ್ ಸಿಬ್ಬಂದಿ | ಲೇಖನ ಸಾಮಾಗ್ರಿಗಳು ಮತ್ತು ಪೂರಕ ಸಾಹಿತ್ಯ | | 10 ದಿನ |
| 2. | ಅಧ್ಯಯನದ ವ್ಯಾಪ್ತಿಗೆ ಬರುವ ಜಿಲ್ಲೆಯ ಎಲ್ಲಾ ತಾಲ್ಲೂಕುಗಳನ್ನು ಒಳಗೊಂಡಂತೆ 70 ಶಾಲೆ ಹಾಗೂ ಶಿಕ್ಷಕರನ್ನು ಯಾದೃಚ್ಛಿಕವಾಗಿ ಆಯ್ಕೆ ಮಾಡುವುದು. | ನಾನು ಮತ್ತು ಡಯಟ್ ಸಿಬ್ಬಂದಿ | ಲೇಖನ ಸಾಮಾಗ್ರಿಗಳು ಮತ್ತು ಪೂರಕ ಸಾಹಿತ್ಯ | | 05 ದಿನ |
| 3. | 'ನೋ ಬ್ಯಾಗ್ ಡೇ' ಕಾರ್ಯಕ್ರಮ ಅನುಷ್ಟಾನದ ವಸ್ತುಸ್ಥಿತಿಯನ್ನು ತಿಳಿಯುವುದಕ್ಕೆ ಜಿಲ್ಲಾ ವ್ಯಾಪ್ತಿಯ ಎಲ್ಲಾ ಏಳು ತಾಲೂಕುಗಳಿಂದ ಆಯ್ಕೆಯಾದ ಶಿಕ್ಷಕರಿಂದ ಮಾಹಿತಿ ಸಂಗ್ರಹಣೆ. | ನಾನು ಮತ್ತು ಶಿಕ್ಷಕರು | ಅಭಿಪ್ರಾಯವಳಿ | | 20 ದಿನ |
| 4. | ಶಾಲೆಗಳಿಗೆ ಭೇಟಿಮಾಡಿ, 'ನೋ ಬ್ಯಾಗ್ ಡೇ' ಕಾರ್ಯಕ್ರಮ ಅನುಷ್ಟಾನದ ವಸ್ತುಸ್ಥಿತಿಯ ಅವಲೋಕನ, ಮಾಹಿತಿ ಸಂಗ್ರಹಣೆ. | ನಾನು ಮತ್ತು ಶಿಕ್ಷಕರು | ಅವಲೋಕನಾ ಪಟ್ಟಿ | | 40 ದಿನ |
| 5. | ಮಾಹಿತಿ ಕ್ರೋಢಿಕರಣ, ವಿಶ್ಲೇಷಣೆ ಹಾಗೂ ತೀರ್ಮಾನಿಸುವಿಕೆ. | ನಾನು ಮತ್ತು ಡಯಟ್ ಸಿಬ್ಬಂದಿ | ಲೇಖನ ಸಾಮಾಗ್ರಿಗಳು | | 10 ದಿನ |
| 6. | ವರದಿ ತಯಾರಿಕೆ. | ನಾನು ಮತ್ತು ಡಯಟ್ ಸಿಬ್ಬಂದಿ | ಲೇಖನ ಸಾಮಾಗ್ರಿಗಳು | | 10 ದಿನ |
| | ಒಟ್ಟು | | | | 95 ದಿನ |

# ಭಾಗೀದಾರ ಸಂಸ್ಥೆಗಳು ಮತ್ತು ವ್ಯಕ್ತಿಗಳು

ಪ್ರಸ್ತುತ ಕಾರ್ಯವು ಈ ಕೆಳಕಂಡ ಸಂಸ್ಥೆಗಳ ಶಿಕ್ಷಕರು, ಮುಖ್ಯೋಪಾಧ್ಯಾಯರು ಮತ್ತು ಶಾಲೆಯ ವಿದ್ಯಾರ್ಥಿಗಳನ್ನು ಒಳಗೊಂಡಿರುತ್ತದೆ. ಕ್ಷೇತ್ರದ ಅಧ್ಯಯನದಲ್ಲಿ ಅಭಿಪ್ರಾಯ ಸಂಗ್ರಹಣೆ ಹಾಗೂ ಸಂದರ್ಶನ ಕಾರ್ಯದಲ್ಲಿ ಪಾಲ್ಗೊಂಡ ಸಂಸ್ಥೆಗಳು ಮತ್ತು ವ್ಯಕ್ತಿಗಳ ವಿವರ :

| ಕ್ರ.ಸಂ | ಶಾಲೆಯ ಹೆಸರು ಮತ್ತು ವಿಳಾಸ | ಕ್ರ.ಸಂ | ಶಾಲೆಯ ಹೆಸರು ಮತ್ತು ವಿಳಾಸ |
|---|---|---|---|
| 1 | ಸರ್ಕಾರಿ ಮಾದರಿ ಹಿ.ಪ್ರಾ.ಶಾಲೆ ತೀರ್ಥಹಳ್ಳಿ. | 13 | ಸರ್ಕಾರಿ ಪ್ರೌಢಶಾಲೆ, ಕುಡುಮಲ್ಲಿಗೆ. ತೀರ್ಥಹಳ್ಳಿ. |
| 2 | ಸಕಾರಿ ಪ್ರೌಢಶಾಲೆ, ತೂದೂರು, ತೀರ್ಥಹಳ್ಳಿ | 14 | ಸಕಾರಿ ಹಿ.ಪ್ರಾ. ಶಾಲೆ, ತೂದೂರು, ತೀರ್ಥಹಳ್ಳಿ |
| 3 | ಸಪಪೂಕಾ(ಪ್ರೌ.ಶಾ.ವಿ) ಮಾಳೂರು, ತೀರ್ಥಹಳ್ಳಿ | 15 | ಸರ್ಕಾರಿ ಹಿ.ಪ್ರಾ.ಶಾಲೆ, ಕುಡುಮಲ್ಲಿಗೆ. ತೀರ್ಥಹಳ್ಳಿ. |
| 4 | ಸರ್ಕಾರಿ ಪ್ರೌಢಶಾಲೆ, ಅರಸಾಳು, ಹೊಸನಗರ | 16 | ಸರ್ಕಾರಿ ಹಿ.ಪ್ರಾ.ಶಾಲೆ, ಅರಸಾಳು, ಹೊಸನಗರ |
| 5 | ಸರ್ಕಾರಿ ಕಿ.ಪ್ರಾ.ಶಾಲೆ ಬೆನವಳ್ಳಿ. ಹೊಸನಗರ | 17 | ಸರ್ಕಾರಿ ಕಿ.ಪ್ರಾ.ಶಾಲೆ, ಬಟಾಣಿಜೆಡ್ಡು. ಹೊಸನಗರ |
| 6 | ಸರ್ಕಾರಿ ಹಿ.ಪ್ರಾ.ಶಾಲೆ, ಬಸವಾಪುರ. ಹೊಸನಗರ | 18 | ಸರ್ಕಾರಿ ಹಿ.ಪ್ರಾ.ಶಾಲೆ ಮಲ್ಲಾಪುರ. ಶಿವಮೊಗ್ಗ. |
| 7 | ಸ.ಹಿ.ಪ್ರಾ.ಶಾಲೆ ನಾರಾಯಣಪುರ, ಸವಳಂಗ. ಶಿವಮೊಗ್ಗ. | 19 | ಸ.ಕಿ.ಪ್ರಾ.ಶಾಲೆ. ಭೈರನಕೊಪ್ಪ. ಶಿವಮೊಗ್ಗ. |
| 8 | ಸ.ಹಿ.ಪ್ರಾ.ಶಾಲೆ ಹಿಟ್ಟೂರು. ಸವಳಂಗ. ಶಿವಮೊಗ್ಗ. | 20 | ಸ.ಉರ್ದು.ಕಿ.ಪ್ರಾ.ಶಾಲೆ. ರಾಮನಗರ. ಶಿವಮೊಗ್ಗ. |
| 9 | ಸ.ಹಿ.ಪ್ರಾ.ಶಾಲೆ ರಾಮನಗರ. ಶಿವಮೊಗ್ಗ. | 21 | ಸ.ಹಿ.ಪ್ರಾ.ಶಾಲೆ. ಭಡಾರಹಳ್ಳಿ. ಭದ್ರಾವತಿ. |
| 10 | ಶ್ರೀ ತೀರ್ಥರಾಮೇಶ್ವರ ಪ್ರೌಢಶಾಲೆ ರಾಮನಗರ, ಶಿವಮೊಗ್ಗ. | 22 | ಸ.ಹಿ.ಪ್ರಾ.ಶಾಲೆ ಸಿರಿಯೂರು. ಭದ್ರಾವತಿ. |
| 11 | ಸ.ಕಿ.ಪ್ರಾ.ಶಾಲೆ. ವೀರಾಪುರ ಭದ್ರಾವತಿ. | 23 | ಸ.ಉರ್ದು ಕಿ.ಪ್ರಾ.ಶಾಲೆ. ಭಡಾರಹಳ್ಳಿ. ಭದ್ರಾವತಿ. |
| 12 | ಸ.ಹಿ.ಪ್ರಾ.ಶಾಲೆ ಕಲ್ಲಹಳ್ಳಿ. ಭದ್ರಾವತಿ. | 24 | ಸ.ಪ್ರೌಢಶಾಲೆ ಸನ್ಯಾಸಿಕೋಡಮಗ್ಗಿ. ಭದ್ರಾವತಿ. |

| | | | |
|---|---|---|---|
| 25 | ಸ. ಉರ್ದು.ಕಿ. ಪ್ರಾ. ಶಾಲೆ ಸನ್ಯಾಸಿಕೋಡಮಗ್ಗಿ. ಭದ್ರಾವತಿ | 38 | ಸ. ಹಿ. ಪ್ರಾ. ಶಾಲೆ ಸನ್ಯಾಸಿಕೋಡಮಗ್ಗಿ. ಭದ್ರಾವತಿ |
| 26 | ಸ.ಪ.ಪೂ.ಕಾ (ಪ್ರೌ.ಶಾ.ವಿ) ಆನವೇರಿ, ಭದ್ರಾವತಿ | 39 | ಸ.ಬಾ.ಪಪೂಕಾ (ಪ್ರೌ.ಶಾ.ವಿ) ಆನಂದಪುರ, ಸಾಗರ. |
| 27 | ಸರ್ಕಾರಿ ಹಿ.ಪ್ರಾ.ಶಾಲೆ ಆನಂದಪುರಂ. ಸಾಗರ. | 40 | ಸರ್ಕಾರಿ ಕಿ.ಪ್ರಾ.ಶಾಲೆ ಆನಂದಪುರಂ. ಸಾಗರ. |
| 28 | ಜ್ಞಾನ ಸಹ್ಯಾದ್ರಿ ಹಿ.ಪ್ರಾ.ಶಾಲೆ ಆನಂದಪುರಂ. ಸಾಗರ. | 41 | ಜ್ಞಾನ ಸಹ್ಯಾದ್ರಿ ಪ್ರೌಢಶಾಲೆ ಯಡೇಹಳ್ಳಿ. ಸಾಗರ. |
| 29 | ಸರ್ಕಾರಿ ಹಿ.ಪ್ರಾ.ಶಾಲೆ ಆಚಾಪುರ. ಸಾಗರ. | 42 | ಸರ್ಕಾರಿ ಉರ್ದು ಹಿ.ಪ್ರಾ.ಶಾಲೆ ಆಚಾಪುರ. ಸಾಗರ. |
| 30 | ಹಾಜಿ. ಕೆ. ಎಂ. ಕೋಯಾ ಪ್ರೌಢಶಾಲೆ. ಬಿ.ಹೆಚ್.ರಸ್ತೆ ಸಾಗರ | 43 | ಸಾಗರ ಉರ್ದು ಹಿ.ಪ್ರಾ.ಶಾಲೆ. ಬಿ.ಹೆಚ್.ರಸ್ತೆ ಸಾಗರ |
| 31 | ಸಪಪೂಕಾ(ಪ್ರೌ.ಶಾ.ವಿ) ಸಾಗರ | 44 | ಶ್ರೀ ಉಮಾಮಹೇಶ್ವರ ಗ್ರಾಮಾಂತರ ಪ್ರೌಢಶಾಲೆ ಮಾವಲಿ. ಸೊರಬ |
| 32 | ಸಪಪೂಕಾ(ಪ್ರೌ.ಶಾ.ವಿ) ಸೊರಬ | 45 | ಸರ್ಕಾರಿ ಹಿ.ಪ್ರಾ.ಶಾಲೆ ಮಾವಲಿ. ಸೊರಬ. |
| 33 | ಸರ್ಕಾರಿ ಕಿ.ಪ್ರಾ.ಶಾಲೆ ಚನ್ನಾಪುರ ಸೊರಬ. | 46 | ಸರ್ಕಾರಿ ಹಿ.ಪ್ರಾ.ಶಾಲೆ ಬಿಳವಾಣಿ. ಸೊರಬ. |
| 34 | ಶ್ರೀ ವೀರಭದ್ರೇಶ್ವರ ಗ್ರಾಮಾಂತರ ಪ್ರೌಢಶಾಲೆ ಬಿಳವಾಣಿ. ಸೊರಬ | 47 | ಸರ್ಕಾರಿ ಕಿ.ಪ್ರಾ.ಶಾಲೆ ಶಿವಪುರ. ಸೊರಬ. |
| 35 | ಸರ್ಕಾರಿ ಕಿ.ಪ್ರಾ.ಶಾಲೆ ಕೊಪ್ಪದಕೆರೆ. ಶಿಕಾರಿಪುರ. | 48 | ಡಾ॥ ರಾಜಕುಮಾರ್ ಪ್ರೌಢಶಾಲೆ ಅಂಜನಾಪುರ ಶಿಕಾರಿಪುರ. |
| 36 | ಸರ್ಕಾರಿ ಪ್ರೌಢಶಾಲೆ ಹಾರೋಗೊಪ್ಪ ಶಿಕಾರಿಪುರ. | 49 | ಸರ್ಕಾರಿ ಹಿ.ಪ್ರಾ.ಶಾಲೆ ಅಂಜನಾಪುರ. ಶಿಕಾರಿಪುರ. |
| 37 | ಸರ್ಕಾರಿ ಹಿ.ಪ್ರಾ.ಶಾಲೆ ಹಿರೇಕೊರಲಹಳ್ಳಿ. ಶಿಕಾರಿಪುರ. | 50 | ಸರ್ಕಾರಿ ಹಿ.ಪ್ರಾ.ಶಾಲೆ ಹಾರೋಗೊಪ್ಪ. ಶಿಕಾರಿಪುರ. |

## ‘ನೋ ಬ್ಯಾಗ್ ಡೇ’ ಕಾರ್ಯಕ್ರಮದ ತಾತ್ವಿಕ ಮತ್ತು ಐತಿಹಾಸಿಕ ಹಿನ್ನೆಲೆ:

‘ನೋ ಬ್ಯಾಗ್ ಡೇ’ ಪದ್ಧತಿಯನ್ನು ಕರ್ನಾಟಕ 2016–17ನೇ ಸಾಲಿನಲ್ಲಿ ಪೈಲೊಟ್ ಸ್ಟಡಿಯನ್ನು ಮೊದಲಬಾರಿಗೆ ಕೈಗೊಂಡಿತು. ತಜ್ಞರ ತಂಡಗಳು ಶಾಲೆಗಳಿಗೆ ಭೇಟಿ ನೀಡಿ, ಸ್ಟ್ಯಾಂಡರ್ಡೈಸ್ಡ್ ಪ್ರಶ್ನಾವಳಿಯನ್ನು ಬಳಸಿ ದತ್ತಾಂಶಗಳನ್ನು ವಿಶ್ಲೇಷಿಸಿ, ರಾಜ್ಯದಲ್ಲಿ ಶಾಲಾ ಬ್ಯಾಗ್‌ನ ತೂಕ ಕಡಿಮೆಮಾಡಲು ಮಾರ್ಗದರ್ಶಿ ನಿಯಮಗಳನ್ನು ರೂಪಿಸಲಾಯಿತು. ಈ ಅಧ್ಯಯನದನ್ವಯ ವಿದ್ಯಾರ್ಥಿಗಳು ಅವರ ದೇಃದ ತೂಕದ ಶೇಕಡಾ 10 ರಿಂದ 15 ರಷ್ಟು ತೂಕದ ಪಠ್ಯಪುಸ್ತಕಗಳನ್ನು ತೆಗೆದುಕೊಂಡು ಹೋಗಬಹುದಾಗಿದೆ ಎಂಬುದಾಗಿ ಮೂಳೆ ತಜ್ಞರು ಶಿಫಾರಸ್ಸು ಮಾಡಿರುತ್ತಾರೆ. ಇದರೊಂದಿಗೆ ವಿದ್ಯಾರ್ಥಿಗಳಿಂದಲೂ ಸಹ ಅಭಿಪ್ರಾಯ ಸಂಗ್ರಹಿಸಲಾಗಿದೆ.

ಈ ಅಧ್ಯಯನದ ಪ್ರಕಾರ ಸರ್ಕಾರವು 2019–20 ನೇ ಸಾಲಿನಲ್ಲಿ ರಾಜ್ಯದಾದ್ಯಂತ ಸರ್ಕಾರಿ, ಅನುದಾನಿತ ಹಾಗೂ ಅನುದಾನರಹಿತ ಶಾಲೆಗಳಲ್ಲಿನ 1 ರಿಂದ 10ನೇ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಶಾಲಾಬ್ಯಾಗ್ ಹೊರೆ ಕಡಿಮೆ ಮಾಡುವ ಉದ್ದೇಶದಿಂದ ಕೆಲವು ನಿರ್ದೇಶನಗಳನ್ನು ನೀಡಿದೆ.

1. 1–2ನೇ ತರಗತಿಯ ವಿದ್ಯಾರ್ಥಿಗಳು 1–2 ಕೆ.ಜಿ ತೂಕದ ಪಠ್ಯಪುಸ್ತಕದ ಬ್ಯಾಗ್ ಹೊಂದಬಹುದು.

2. 3–5ನೇ ತರಗತಿಯ ವಿದ್ಯಾರ್ಥಿಗಳು 2–3 ಕೆ.ಜಿ ತೂಕದ ಪಠ್ಯಪುಸ್ತಕದ ಬ್ಯಾಗ್ ಹೊಂದಬಹುದು.

3. 6–8ನೇ ತರಗತಿಯ ವಿದ್ಯಾರ್ಥಿಗಳು 3–4 ಕೆ.ಜಿ ತೂಕದ ಪಠ್ಯಪುಸ್ತಕದ ಬ್ಯಾಗ್ ಹೊಂದಬಹುದು.

4. 9–10ನೇ ತರಗತಿಯ ವಿದ್ಯಾರ್ಥಿಗಳು 4–5 ಕೆ.ಜಿ ತೂಕದ ಪಠ್ಯಪುಸ್ತಕದ ಬ್ಯಾಗ್ ಹೊಂದಬಹುದು.

5. 1–2 ನೇ ತರಗತಿ ವಿದ್ಯಾರ್ಥಿಗಳಿಗೆ ಮನೆಗೆಲಸ ನೀಡದಂತೆ ಕ್ರಮವಹಿಸುವುದು.

6. ಅತಿಯಾದ ಹೊರೆಯಿರುವ ಶಾಲಾ ಬ್ಯಾಗ್‌ನಿಂದ ಉಂಟಾಗಬಹುದಾದ ದುಷ್ಪರಿಣಾಮಗಳ ಬಗ್ಗೆ ಪೋಷಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ಮನವರಿಕೆ ಮಾಡುವುದು.

7. ಶಾಲಾ ಗ್ರಂಥಾಲಯದಲ್ಲಿ ಸಮಾನಾರ್ಥಕ ಪದಕೋಶ, ಅಟ್ಲಾಸ್, ಜ್ಞಾನವಿಜ್ಞಾನ ಕೋಶಗಳಂತಹ ಪರಾಮರ್ಶನ ಸಾಮಾಗ್ರಿಗಳು ಸಾಕಷ್ಟು ಸಂಖ್ಯೆಯಲ್ಲಿ ಲಭ್ಯವಾಗುವಂತೆ ಹಾಗೂ ಮಕ್ಕಳು ಇವುಗಳನ್ನು ಅವಶ್ಯಕತೆ ಇದ್ದಾಗ ಬಳಸಿಕೊಳ್ಳುವಂತೆ ವ್ಯವಸ್ಥೆಮಾಡುವುದು.

8. ಪ್ರತೀ ತಿಂಗಳ 3ನೇ ಶನಿವಾರವನ್ನು ಶಾಲೆಗಳಲ್ಲಿ ‘ಬ್ಯಾಗ್ ರಹಿತ ದಿನ’ ವಾಗಿ ಆಚರಿಸತಕ್ಕದ್ದು.

9. ‘ಶಾಲಾ ಬ್ಯಾಗ್ ರಹಿತ’ ದಿನದಂದು ಶಿಕ್ಷಕರು ಪಠ್ಯಪುಸ್ತಕ ಅಥವಾ ಇತರ ಸಾಮಾಗ್ರಿಗಳ ಅವಶ್ಯಕತೆ ಇಲ್ಲದೆ ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳನ್ನು ತೊಡಗಿಸುವುದು.

ಹೀಗೆ ಸ್ವತಂತ್ರ ಪರಿಸರದಲ್ಲಿ ಪ್ರತಿ ಮಗುವ್ರೂ ಸಹ ತನ್ನ ಅರಿವಿನಿಂದ ತನ್ನ ವಿಶಿಷ್ಟ ಸಾಮರ್ಥ್ಯ ಅರ್ಥ್ಯಸಿಕೊಂಡು ಅದನ್ನು ಎಷ್ಟು ಸಾಧ್ಯವ್ರೊ ಅಷ್ಟು ಹಿಗ್ಗಿಸಿಕೊಳ್ಳುವುದೇ 'ನೋ ಬ್ಯಾಗ್ ಡೇ' ಯ ಪ್ರಮುಖ ಆಶಯವಾಗಿದೆ. ಮಕ್ಕಳು ತಮ್ಮ ಸೃಜನಶೀಲತೆಯಿಮದ ಕಲೆ, ಕರಕುಶಲ ಕಾರ್ಯಗಳು, ಸಂಗೀತ, ಕುಂಬಾರಿಕೆ, ಕಸೂತಿ, ಚಿತ್ರಕಲೆ, ತೋಟಗಾರಿಕೆ, ಮರಗೆಲಸ, ತತ್ವಜ್ಞಾನ, ಕನ್ನಡಭಾಷೆ, ಇಂಗ್ಲೀಷ್ ಭಾಷೆ, ಹಿಂದಿ ಭಾಷೆ, ಗಣಿತ, ವಿಜ್ಞಾನ, ಸಮಾಜವಿಜ್ಞಾನ, ಪರಿಸರ ಅಧ್ಯಯನ, ಭೂಗೋಳ, ಸ್ಥಳೀಯ ಚರಿತ್ರೆ ಮೊದಲಾದ ಕಲಿಕೆಯ ಮೆಟ್ಟಿಲುಗಲ ಮೂಲಕ ಅನುಭವ ಪಡೆಯುವುದು. ಈ ಹಿನ್ನೆಲೆಯಲ್ಲಿ ರಾಜ್ಯದ ಹಲವು ಕಡೆಗಳಲ್ಲಿ 'ನೋ ಬ್ಯಗ್ ಡೇ' ಪ್ರಯೋಗಗಳು ನಡೆದಿವೆ.

ದಿನಾಂಕ: 21–10–2019 ರಂದು 'ಮೈಸೂರು ಮಿತ್ರ' ಪತ್ರಿಕೆಯಲ್ಲಿ ಪ್ರಕಟವಾಗಿರು ವರದಿಯ ಪ್ರಕಾರ– ಮೈಸೂರಿನ ವಿಜಯ ವಿಠಲ ಶಾಲೆಯ ಪ್ರಿನ್ಸಿಪಾಲ್ ಶ್ರೀಮತಿ ಎಸ್.ಪ. ಆಶಾ ತಾವು ಕಳೆದ ಎರಡು ವರ್ಷದಿಂದಲೇ ಈ 'ನೋ ಬ್ಯಾಗ್ ಡೇ' ಪದ್ಧತಿಯನ್ನ ಅನುಸರಿಸುತ್ತಿದ್ದು, ಪ್ರತೀ ತಿಂಗಳ 2ನೇ ಶನಿವಾರದಂದು ಬ್ಯಾಗ್ ರಹಿತ ದಿನವನ್ನಾಗಿ ಆಚರಿಸಿಕೊಂಡು ಬರುತ್ತಿದ್ದೇವೆ. ಅಂದು ಕಲೆ, ಕರಕುಶಲತೆ, ಕ್ರೀಡೆ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಮಕ್ಕಳನ್ನು ತೊಡಗಿಸಿ ಕ್ರಿಯಾತ್ಮಕವಾದ ಸಾಮರ್ಥ್ಯವನ್ನು ವೃದ್ಧಿಸಲು ಪ್ರಯತ್ನಿಸುತ್ತೇವೆ ಎಂದರು.

ಕೌಟಿಲ್ಯ ವಿದ್ಯಾಲಯದ ಸೀನಿಯರ್ ಪ್ರಿನ್ಸಿಪಾಲ್ ಹಾಗೂ ಕಾರ್ಯದರ್ಶಿಗಳಾದ ಡಾ॥ ಎಲ್. ಕವಿತಾ ರವರು ಕೂಡ ಮಾತನಾಡಿ, ನಮ್ಮ ಶಾಲೆಯಲ್ಲಿ ಈಗಾಗಲೇ ಈ ನೋ ಬ್ಯಾಗ್ ಡೇ ಪದ್ಧತಿಯನ್ನು ಅನುಷ್ಠಾನಗೊಳಿಸಿಕೊಂಡಿದ್ದೇವೆ. ಅಂದು ಸ್ಕೌಟ್ಸ್ ಗೈಡ್ಸ್, ದೈಹಿಕ ಶಿಕ್ಷಣದ ಕವಾಯತು, ಸಾಮೂಹಿಕ ವ್ಯಾಯಾಮ, ಯೋಗ ಮತ್ತು ಧ್ಯಾನ, ಪ್ರಾಣಾಯಾಮ, ಸ್ಪೋಕನ್ ಇಂಗ್ಲೀಷ್, ಕ್ರೀಡೆ ಹಾಗು ಇತರೆ ಚಟುವಟಿಕೆಗಳನ್ನು ನಡೆಸುತ್ತೇವೆ. ವೈಜ್ಞಾನಿಕ ಜ್ಞಾನ, ಕೌಶಲ್ಯಾಭಿವೃದ್ಧಿ, ಹಾಗೂ ಮಕ್ಕಳನ್ನು ಕ್ರಿಯಾತ್ಮಕವಾಗಿ ಪ್ರೋತ್ಸಹಿಸುತ್ತೇವೆ ಎಂದರು.

ಬೆಂಗಳೂರಿನ ಬನಶಂಕರಿಯಲ್ಲಿರುವ ಐ.ಸಿ.ಎಸ್.ಇ. ಶಾಲೆ ಹಾಗೂ ಲಿಟ್ಲ ಫ್ಲವರ್ ಪಬ್ಲಿಕ್ ಸ್ಕೂಲ್ ರವರು ನೋಬ್ಯಾಗ್ ಡೇ ಪದ್ಧತಿಯನ್ನು 2012–13 ರಿಂದಲೇ ಅನುಷ್ಟಾನಗೊಳಿಸಿಕೊಂಡಿದ್ದು, ಪ್ರತೀ ಬುಧವಾರದಮದು ಆಚರಿಸಿಕೊಂಡು ಬರುತ್ತಿದ್ದಾರೆ. ಅವರು ಹೇಳುವಂತೆ 'ಇದು ನಾವು ಆರು ವರ್ಷಗಲ ಹಿಂದಿನಿಂದಲೇ ನಡೆಸಿಕೊಂಡು ಬರುತ್ತಿರುವ ವಿನೂತನ ಪ್ರಯೋಗವಾಗಿದೆ. ಇದು ದೊಡ್ಡ ಯಶಸ್ಸನ್ನು ತಮದು ಕೊಟ್ಟಿದೆ. ಇದು

ಕೇವಲ ವಿದ್ಯಾರ್ಥಿಗಳಿಗಷ್ಟೇ ಅಲ್ಲದೇ ಶಿಕ್ಷಕರೂ ಸಹ ಇದರಿಂದ ಸಂತಸ ತಾಳಿದ್ದು ಪಠ್ಯಪುಸ್ತಕಗಳಿಲ್ಲದೇ ಕಲಿಸುವುದು, ಕಲಿಯುವುದು ಹೇಗೆ ಎಂದು ತಿಳಿಯಲು ಹಾಗೂ ತಿಳಿಸಲು ಸಹಕಾರಿಯಾಗಿದೆ ಎನ್ನುತ್ತಾರೆ.

ದಿನಾಂಕ: 04 ಆಗಷ್ಟ್ 2018 ರಂದು ಪ್ರಕಟಗೊಂಡಿರುವ ಉದಯವಾಣಿ ದಿನಪತ್ರಿಕೆಯ ವರದಿಯ ಪ್ರಕಾರ– ಶಿವಮೊಗ್ಗ ಜಿಲ್ಲೆಯಾದ್ಯಂತ ಪ್ರತೀ ಶನಿವಾರ 'ನೋ ಬ್ಯಾಗ್ ಡೇ' ಆಚರಿಸುವಂತೆ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾಗಿದ್ದ ಶ್ರೀ ಮಚ್ಚಾದೊ ರವರು ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಆದೇಶವನ್ನು ಹೊರಡಿಸಿದ್ದರು. ಆಗಷ್ಟ್ 04 ರಂದು ಸಾಂಕೇತಿಕವಾಗಿ ಒಂದು ಶಾಲೆಯಲ್ಲಿ 'ನೋಬ್ಯಾಗ್ ಡೇ' ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಿದರು. ಈ ದಿನದಲ್ಲಿ ರಸಪ್ರಶ್ನೆ, ಆಶುಭಾಷಣ, ಅಣುಕು ಸಂಸತ್ತು, ಕರಕುಶಲ ವಸ್ತುಗಳ ತಯಾರಿಕೆ, ಕಂಪ್ಯೂಟರ್ ಬಳಕೆ, ಪ್ರಯೋಗಗಳನ್ನು ಮಾಡುವುದು, ವಾಚನಾಲಯದ ಬಳಕೆ, ಪದ್ಯರಚನೆ, ಏಕಪಾತ್ರ ಅಭಿನಯ, ಕಿರುನಾಟಕ ಪ್ರದರ್ಶನ, ರಂಗೋಲಿಯಲ್ಲಿ ವಿಜ್ಞಾನದ ಚಿತ್ರಗಳು ಹಾಗೂ ಗಣಿತದ ಚಿತ್ರಗಲ ರಚನೆ ಮಾಡುವುದು, ಏರೊಬಿಕ್ಸ್, ಗಾದೆಗಳನ್ನು ಹೇಳುವುದು, ಒಗಟುಗಳ ಸ್ಪರ್ಧೆ, ಸಂಸ್ಕೃತ ಶ್ಲೋಕಗಳನ್ನು ಹೇಳಿಸುವುದು, ಕಂಠಪಾಠ ಪದ್ಯಗಳ ಗಾಯನ, ಗೀತಗಾಯನ ಸ್ಪರ್ಧೆನಡೆಸುವುದು. ಗಾಮೀಣ ಕ್ರೀಡೆಗಳಾದ ಲಗೋರಿ, ಬುಗುರಿ, ಗೋಲಿ, ಮಳೆಆಟ, ಕುಂಟೆ ಪಿಲ್ಲೆ, ಹಗ್ಗ ಜಗ್ಗಾಟ, ಚಿನ್ನಿ ದಾಂಡು, ಮೊದಲಾದ ಸೃಜನಾತ್ಮಕ ಚಟುವಟಿಕೆಗಳನ್ನು ಮಾಡಿಸುವುದು.

## 'ನೋ ಬ್ಯಾಗ್ ಡೇ' ಕಾರ್ಯಕ್ರಮಕ್ಕೆ ಸಂಬಂಧಿಸಿದ ಸಾಹಿತ್ಯಗಳ ಅಧ್ಯಯನ :

ಅಧ್ಯಯನಕ್ಕೆ ಸಂಬಧಿಸಿದಂತೆ ಈವರೆಗೆ ಪಠ್ಯಪುಸ್ತಕ ರಹಿತ ಕಲಿಕಾ ಪ್ರಕ್ರಿಯೆಯ ಕುರಿತು ನೂರಾರು ಅಧ್ಯಯನಗಳು ಆಗಿವೆ. ಅವುಗಳ ಸಾರಲೇಖ ಹೆಕ್ಕಿ ತೆಗೆಯುವುದು ಕಷ್ಟಸಾಧ್ಯವಾಗಿರುವುದರಿಮದ ಇತ್ತೀಚಿನ ರಚನಾವಾದದ ಹಿನ್ನೆಲೆಯಲ್ಲಿ ಕಲಿಕಾ ಅಧ್ಯಯನಗಳ ಸಾರಾಂಶವನ್ನು ಸಂಗ್ರಹಿಸಿ ಇಲ್ಲಿ ನೀಡಲಗಿದೆ.

ಬರ್ರೋಸ್ (2003) ರವರು ಲಾರ್ಡ್‌ರವರ ಬೋಧನಾ ಮಾದರಿಯನ್ನುಉ ಉಪಯೋಗಿಸಿ ಕಲಿಸಿದಲ್ಲಿ ಕಲಿಕೆಯ ಮೇಲಿನ ಪರಿಣಾಮವನ್ನು ಅಧ್ಯಯನ ಮಾಡಿದ್ದಾರೆ. ಇವರ ಪ್ರಧಾನ ಉದ್ದೇಶ ಜೀವಶಾಸ್ತ್ರ ಕಲಿಕರಯಲ್ಲಿ ವಿದ್ಯಾರ್ಥಿಗಳ ಕಲಿಕಾ ಪ್ರಗತಿ ಮತ್ತು ಧೋರಣೆಗಳನ್ನು ಗುರುತಿಸುವುದಾಗಿತ್ತು. ಇದಕ್ಕಾಗಿ ಇವರು 10ನೇ ತರಗತಿಯ 204 ವಿದ್ಯಾರ್ಥಿಗಳನ್ನು ಆಯ್ದುಕೊಂಡರು. 100 ವಿದ್ಯಾರ್ಥಿಗಳಿಗೆ ಚರ್ಚೆಗೆ ಅವಕಾಶವಿರದಂತೆ ಸಾಮಾನ್ಯ ಬೋಧನಾ ವಿಧಾನವನ್ನು ಅನುಸರಿಸಲಾಯಿತು. 104 ವಿದ್ಯಾರ್ಥಿಗಳಿಗೆ ಲಾರ್ಡ್ ರವರ (1998)

ರಚನಾವಾದಿ ಮಾದರಿಯಲ್ಲಿ ಕಲಿಸಲು ಪ್ರಯತ್ನಿಸಲಾಯಿತು. ವಿದ್ಯಾರ್ಥಿಗಳನ್ನು 4ರ ಸಹಾಯಕ ಕಲಿಕಾ ಗುಂಪುಗಳನ್ನಾಗಿ ಮಾಡಿ, ಪ್ರತಿ ಗುಂಪಿಗೆ ನಿರ್ಧರಿತ ಲಕೋಟೆಯನ್ನು ನೀಡಲಾಯಿತು.

ಲಕೋಟೆಯು : 1. ಸಹಾಯಕ ಗುಂಪಿನ ಸಂರಚನೆಯ ವಿವರದ ಶೀಟ್

2. ನಾಲ್ಕು ವಿದ್ಯಾರ್ಥಿಗಳ ಪ್ರೊಫೈಲ್

3. ತರಗತಿ ಕೆಲಸಕ್ಕೆ ಗುಂಪಿನ ಉತ್ತರದ ಶೀಟ್

4. ಕ್ವಿಜ್ ಪ್ರಶ್ನೆಗಳನ್ನು ಒಳಗೊಂಡಿತ್ತು

ಇಲ್ಲಿ ಪರಸ್ಪರ ಚರ್ಚೆ ಮತ್ತು ರಚನಾವಾದಿ ಕಲಿಕೆಯನ್ನು ಅನುಸರಿಸಲಾಯಿತು. ಈ ಅದ್ಯಯನದಿಂದ ರಚನಾವಾದಿ ತರಗತಿ ಪರಿಸರ ಮತ್ತು ವಿದ್ಯಾರ್ಥಿಗಲ ಕಲಿಕ ಪರಿಸರದಲ್ಲಿ ಜಿವಶಾಸ್ತ್ರದ ಪರಿಕಲ್ಪನೆಗಳನ್ನು ಅರ್ಥಮಾಡಿಕೊಳ್ಳಲು, ಜೀವಶಾಸ್ತ್ರದಲ್ಲಿ ಆಸಕ್ತಿ ಮುಡಿಸಲು, ಶೈಕ್ಷಣಿಕವಾಗಿ ಉತ್ತಮ ಪ್ರಗತಿ ಸಾಧಿಸಲು ಮತ್ತು ಉನ್ನತ ಶ್ರೇಣಿಯ ಯೋಚನಾ ಕೌಶಲಗಳನ್ನು ಬೆಳೆಸಲು ಸಹಾಯಕವೆಂದು ಬರ್ರೋಸ್ (2003) ಕಂಡುಕೊಂಡರು. ಇದಲ್ಲದೇ ಮೌಲ್ಯಮಾಪನದ ವೇಳೆಯಲ್ಲಿ ತಾವು ಹೆಚ್ಚು ಕಲಿತೆವೆಂದು ಪ್ರಯೋಗಾತ್ಮಕ ಗುಂಪಿನ ವಿದ್ಯಾರ್ಥಿಗಳು ತಿಳಿಸಿದರು.

## ಜೀನ್ ಪಿಯಾಜೆ ಸಿದ್ಧಾಂತ : (ಕ್ರಿ.ಶ. 1896–1980)

ಪ್ರೋಫೇಸರ್ ಜೀನ್ ಪಿಯಾಜೆಯವರು 1896ರ ಆಗಸ್ಟ್ 09ರಂದು ಸ್ವಿಜರ್ಲೆಂಡ್ ನಲ್ಲಿ ಜನಿಸಿದರು. ಅವರೋಬ್ಬ ಮಕ್ಕಳ ಮನೋವಿಜ್ಞಾನಿ, ಪ್ರಾಣಿಶಾಸ್ತ್ರಜ್ಞ, ಗಣಿತ ಶಾಸ್ತ್ರಜ್ಞ ಮತ್ತು ತತ್ವಜ್ಞಾನಿ. ಇವರ ಪ್ರಕಾರ ಮಕ್ಕಳು ಸಾಮಾನ್ಯವಾಆಗಿ ಮಾಡುವ ವಿಭಿನ್ನ ಚಟುವಟಿಕೆಗಳು ಹಾಗೂ ಅವರು ಯಾವುದೇ ವಸ್ತುವಿನೊಂದಿಗೆ ಮಮಾಡಿದ ಚಟುವಟಿಕೆಗಳಿಗೂ ವ್ಯತ್ಯಸವಿದೆ. ಸ್ಥಿತಿಯ ಕುರಿತು ಪರಿಚಯವಿರುವ ಮಕ್ಕಲು ಉತ್ತಮವಾಗಿ ಅದನ್ನು ಸಂರಕ್ಷಸುತ್ತಾರೆ. ಜೀವನೋಪಾಯಕ್ಕಾಗಿ ಕುಂಬಾರಿಕೆಯನ್ನೇ ಆಶ್ರಯಿಸಿರುವ ಕುಟುಂಬದಲ್ಲಿನ ಮಕ್ಕಳಿಗೆ ಮಣ್ಣನ್ನು ವಿಭಿನ್ನ ಆಕಾರದಲ್ಲಿ ಪರಿವರ್ತಿಸುವ ಅನುಭವವಿರುತ್ತದೆ. ಈ ಮಕ್ಕಳು ಕಲ್ಪನೆಯಲ್ಲಿ ಮಾತ್ರ ಓದದೇ, ಸುಲಬವಾಗಿ ಸಂರಕ್ಷಣೆ ಮಾಡಿಕೊಳ್ಳುವರು.

## ಸಂಬಂಧಿಸಿದ ಸಾಹಿತ್ಯದೊಂದಿಗೆ ಹೋಲಿಸಿ, ವಿಶ್ಲೇಷಣೆ :

ಗುಣಾತ್ಮಕ ಶಿಕ್ಷಣಕ್ಕಾಗಿ ನಾವಿನ್ಯ ವಿಧಾನಗಳನ್ನು ಅನುಸರಿಸಿ, ಇರುವ ಆಶಯಗಳೊಂದಿಗೆ ಹೋಲಿಸಿ, ನೋ ಬ್ಯಾಗ್ ಡೇ ವಿವರದ ವಿಶ್ಲೇಷಣೆಯನ್ನು ಅಧ್ಯಯನದಲ್ಲಿ ನಡೆಸಿದ್ದು ಸದರಿ ಅಂಶಗಳನ್ನು ಈ ಮುಂದಿನಂತೆ ವಿವರಿಸಿದೆ.

**1. ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು 2005ರ ಮಾರ್ಗದರ್ಶಿ ತತ್ವಗಳು ಮತ್ತು ನೋ ಬ್ಯಾಗ್ ಡೇ ಪ್ರಕ್ರಿಯೆ ಅಧ್ಯಯನದ ಹೋಲಿಕೆ :**

ಕಲಿಕೆ ಹಾಗೂ ತರಗತಿ ಪ್ರಕ್ರಿಯೆಯ ಕುರಿತಾಗಿ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು 2005ರ ಪ್ರಕಾರ ಐದು ಮಾರ್ಗದರ್ಶಿ ತತ್ವಗಳನ್ನು ಸೂಚಿಸಲಾಗಿದೆ.

- ಜ್ಞಾನವು ತರಗತಿಯ ಹೊರಗಿನ ಜೀವನಕ್ಕೆ ಸಂಬಂಧೀಕರಿಸುವುದು.
- ಕಂಠಪಾಠ ಪದ್ಧತಿಯಿಂದ ಕಲಿಕೆ ದೂರ ಸರಿಯುತ್ತಿರುವುದನ್ನು ಖಚಿತಪಡಿಸಿಕೊಳ್ಳುವುದು.
- ಕಲಿಕೆ ಪಠ್ಯಪುಸ್ತಕವನ್ನು ಮೀರಿ ನಿಲ್ಲುವಂತೆ ಪಠ್ಯಕ್ರಮವನ್ನು ಶ್ರೀಮಂತಗೊಳಿಸುವುದು.
- ಪರೀಕ್ಷೆಗಳನ್ನು ಹೆಚ್ಚು ನಮ್ಯಗೊಳಿಸುವುದು ಹಾಗು ತರಗತಿಯ ಆಗುಹೋಗುಗಳೊಂದಿಗೆ ಸಮ್ಮಿಳಿತಗೊಳಿಸುವುದು.
- ಸಾಮಾಜಿಕ ಅನನ್ಯತೆಗಳನ್ನು ಪ್ರಜಾಸತ್ತಾತ್ಮಕ ರಾಜ್ಯವ್ಯವಸ್ಥೆಯಲ್ಲಿ ಪಾರಸ್ಪರಿಕ ಶ್ರದ್ಧೆ ಹಾಗೂ ಪ್ರಿತಿಗಳುಳ್ಳ ಕಾಳಜಿಗಳಿಂದ ಕಾಪಾಡುವುದು.

ಮಗು ತನ್ನ ಪರಿಸರದಲ್ಲಿ ಅನುಭವಗಳಿಂದ ಜ್ಞಾನವನ್ನು ಸಂರಚಿಸಿಕೊಳ್ಳುತ್ತದೆ. ಈ ರಚನೆಗಳನ್ನು ಶಾಲೆಗಳಲ್ಲಿ ಭೌತಿಕವಾಗಿ ಪುನಾರಚಿಸುವ ಅವಕಾಶ ಮತ್ತು ಸಹಾಯಬೇಕಾಗುತ್ತದೆ. ನೋ ಬ್ಯಾಗ್ ಡೇ ಪದ್ದತಿಯು ಈ ಅನುಭವಗಳನ್ನು ಮುಕ್ತವಾಗಿ ಹಂಚಿಕೊಳ್ಳಲು ಅವಕಾಶವನ್ನು ಒದಗಿಸಿ ಕೊಡುತ್ತದೆ. ಇಲ್ಲಿ ವಿದ್ಯಾರ್ಥಿಗಳಿಗೆ ಹೆಚ್ಚು ಸ್ವಾತಂತ್ರ್ಯವಿದ್ದು ತನ್ನ ಸ್ನೇಹಿತರೊಂದಿಗೆ ಸಹಭಭಾಗಿತ್ವದ ಕಲಿಕೆ ಸಾದ್ಯವಾಗುತ್ತದೆ. ಆದರೆ ಪಠ್ಯಪುಸ್ತಕವಿಲ್ಲದೆ ಮುಕ್ತವಾಗಿ ಚಟುವಟಿಕೆಗಳನ್ನು ರೂಪಿಸಿ ಪಾಲ್ಗೊಳ್ಳುವಂತೆ ಮಾಡಲು ವಿಶೇಷವಾದ ಕೌಶಲ ಶಿಕ್ಷಕರಿಗೆ ಅಗತ್ಯವಿದೆ.

**2. ಸ್ವಕಲಿಕೆ :** ಪ್ರತೀ ಮಗುವು ತನ್ನ ಸಾಮರ್ಥ್ಯಕ್ಕೆ ಅನುಗುಣವಾಗಿ ವಿಷಯಗಳನ್ನು ಆರಿಸಿಕೊಂಡು ತನ್ನ ಪ್ರತಿಭೆಯನ್ನು ಪ್ರದರ್ಶಿಸಲು ಅಗತ್ಯ ಜ್ಞಾನವನ್ನು ತಾನೇ ಸ್ವ ಆಸಕ್ತಿಯಿಂದ ಸಂಗ್ರಹಿಸುತ್ತದೆ. ಇದು ಕಲಿಕೆಯ ಅಗತ್ಯತೆಯ ಮೇಲೆ ನಡೆಯುವ ಸ್ವಕಲಿಕೆಯಾಗಿದ್ದು ದೃಢವಾದ ಕಲಿಕೆ ಸಾಧ್ಯವಾಗುತ್ತದೆ. ಆದರೆ ಇದಕ್ಕೆ ಮಕ್ಕಳನ್ನು ಪ್ರೋತ್ಸಾಹಿಸುವ ಕೆಲಸ ಶಿಕ್ಷಕರಿಂದ ಆಗಬೇಕಿದೆ.

**3. ಮುಕ್ತ ಕಲಿಕಾ ವಾತಾವರಣ** : 'ಸಂತಸದಾಯಕ ಕಲಿಕೆ' ನೋಬ್ಯಾಗ್ ಡೇ ಪದ್ಧತಿಯ ಮೂಲ ಉದ್ದೇಶವಾಗಿದೆ. ವಿದ್ಯಾರ್ಥಿಯು ಮುಕ್ತ ವಾತಾವರಣದಲ್ಲಿ ತನ್ನ ಆಸಕ್ತಿಯ ವಿಷಯದ ಕಲಿಕಾ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಅವಕಾಶವಿದೆ. ಹಾಡು, ಕ್ರಾಫ್ಟ್, ಯೋಜನೆಗಲಿಂದ ತನ್ನನ್ನು ಪರಿಪೂರ್ಣವಾಗಿ ಪ್ರೇರೇಪಿಸಲಾಗುತ್ತದೆ.

**4. ಗುಂಪು ಕಲಿಕೆ, ಸಹವರ್ತಿ ಕಲಿಕೆ, ಸ್ವ ಕಲಿಕೆಯ ಆಶಯ** : ನೋಬ್ಯಾಗ್ ಡೇ ಪದ್ಧತಿಯಲ್ಲಿ ಹಲವಾರು ಚಟುವಟಿಕೆಗಳನ್ನು ವಿಷಯವಾರು ಆಯೋಜಿಸಿ, ವಿದ್ಯರ್ಥಿಗಳಿಗೆ ಕಲಿಯಲು ಅವಕಾಶ ನೀಡುವುದು. ಕಲಿಕಾರ್ಥಿಗಳು ಪರಸ್ಪರ ಚರ್ಚಿಸಿ, ಸ್ವೀಕರಿಸುವ, ಅಭಿಪ್ರಯಗಳನ್ನು ವ್ಯಕ್ತಪಡಿಸುವ, ಇನ್ನೊಬ್ಬರ ಅಭಿಪ್ರಾಯಗಳನ್ನು ಮುಕ್ತ ಮನಸ್ಸಿನಿಂದ ಸ್ವೀಕರಿಸುವ, ನಾಯಕತ್ವವಹಿಸುವ, ಚಟುವಟಿಕೆಗಳನ್ನು ನಿರ್ವಹಿಸುವ ಮನೋಭಾವಗಳನ್ನು ಬೆಳೆಸುವ ಆಶಯವನ್ನು ಹೊಂದಿದೆ.

**5. ಭಾಷಾಕಲಿಕೆಯ ಅವಲೋಕನ ಮತ್ತು ಮಾರ್ಗದರ್ಶನನ :** ಭಾಷಾಕಲಿಕೆಗೆ ನೋಬ್ಯಾಗ್ ಡೇ ಅತ್ಯುತ್ತಮವಾದ ಅವಕಾಶ ಒದಗಿಸುತ್ತದೆ. ಭಾಷೆಯ ಕೌಶಲಗಳಾದ ಆಲಿಸುವುದು, ಮಾತನಾಡುವುದು, ಓದುವುದು, ಬರೆಯುವುದು ಇವುಗಳನ್ನು ವಸ್ತುನಿಷ್ಠವಾಗಿ ಕಲಿಸಲು ಸೂಕ್ತ ವೇದಿಕೆಯಾಗುತ್ತದೆ.

# ‘ನೋ ಬ್ಯಾಗ್ ಡೇ’ ಕಾರ್ಯಕ್ರಮಕ್ಕೆ ಸಂಬಂಧಿಸಿದ ವರದಿಗಳು ಮತ್ತು ದಾಖಲೆಗಳು

## ಸರ್ಕಾರದ ಆದೇಶದ ಪ್ರತಿ

**ಕರ್ನಾಟಕ ಸರ್ಕಾರದ ನಡವಳಿಗಳು**

ವಿಷಯ : 1 ರಿಂದ 10ನೇ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಶಾಲಾ ಬ್ಯಾಗ್ ಹೊರೆ ತಗ್ಗಿಸುವ ಬಗ್ಗೆ.

ಓದಲಾಗಿದೆ :
1. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಇವರ ಏಕ ಕಡತ ಸಂಖ್ಯೆ: ಟಿಎ-1/ಕ.ಪ.ಮು.ಸಂ/ಪ.ಪೂ.ತೂ/9/2017-18.
2. ಸರ್ಕಾರದ ಜಂಟಿಕಾರ್ಯದರ್ಶಿಗಳು ಭಾರತ ಸರ್ಕಾರ ಇವರ ಅನಧಿಕೃತ ಟಿಪ್ಪಣಿ ಸಂಖ್ಯೆ:1-4/2018-IS-3. ದಿನಾಂಕ:05.10.2018.

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮಾಂಕ(1)ರ ಏಕ ಕಡತದಲ್ಲಿ, ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರು ದಿನಾಂಕ: 16.04.2019ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ, ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ 2019-20ನೇ ಸಾಲಿನಿಂದ ಸರ್ಕಾರಿ, ಅನುದಾನಿತ ಹಾಗೂ ಅನುದಾನರಹಿತ ಶಾಲೆಗಳಲ್ಲಿ ಓದುತ್ತಿರುವ 1 ರಿಂದ 10ನೇ ತರಗತಿಯ ವಿದ್ಯಾರ್ಥಿಗಳ ಶಾಲಾ ಬ್ಯಾಗ್‌ನ ಹೊರೆ ತಗ್ಗಿಸುವ ಕುರಿತು ಡಿ.ಎಸ್.ಇ.ಆರ್.ಟಿ.ಯು Centre for child and law, NLSUI, ಬೆಂಗಳೂರು ರವರ ಸಹಯೋಗದೊಂದಿಗೆ 2016-17ನೇ ಸಾಲಿನಲ್ಲಿ Pilot Study ಯನ್ನು ಕೈಗೊಳ್ಳಲಾಗಿದ್ದು, ತಜ್ಞರ ತಂಡಗಳು ಶಾಲೆಗಳಿಗೆ ಭೇಟಿ ನೀಡಿ standardised ಪ್ರಶ್ನಾವಳಿಯನ್ನು ಬಳಸಿ ದತ್ತಾಂಶಗಳನ್ನು ವಿಶ್ಲೇಷಿಸಿ ರಾಜ್ಯದಲ್ಲಿ ಶಾಲಾ ಬ್ಯಾಗ್‌ನ ತೂಕ ಕಡಿಮೆ ಮಾಡಲು ಮಾರ್ಗದರ್ಶಿ ನಿಯಮಗಳನ್ನು ರೂಪಿಸಲಾಗಿರುತ್ತದೆ. ಅಧ್ಯಯನದನ್ವಯ ವಿದ್ಯಾರ್ಥಿಗಳು ಅವರ ದೇಹದ ತೂಕದ ಶೇ. 10 ರಿಂದ 15 ರಷ್ಟು ತೂಕದ ಪಠ್ಯಪುಸ್ತಕಗಳನ್ನು ತೆಗೆದುಕೊಂಡು ಹೋಗಬಹುದಾಗಿದೆ ಎಂಬುದಾಗಿ ಮೂಲ ತಜ್ಞರು ಶಿಫಾರಸ್ಸು ಮಾಡಿರುತ್ತಾರೆ. ಇದರೊಂದಿಗೆ ವಿದ್ಯಾರ್ಥಿಗಳಿಂದಲೂ ಕೂಡ ಅಭಿಪ್ರಾಯ ಸಂಗ್ರಹಿಸಲಾಗಿರುತ್ತದೆ. ಅನುದಾನರಹಿತ ಶಾಲೆಗಳ ಸಂಘಗಳ ಮುಖ್ಯಸ್ಥರ ಅಭಿಪ್ರಾಯ ಪಡೆದು ಚರ್ಚಿಸಲಾಗಿರುವ ಬಗ್ಗೆ ಸಭೆಯಲ್ಲಿ ಗಮನಸೆಳೆಯಲಾಗಿರುತ್ತದೆ. ಸದರಿ ಸಭೆಯ ನಡವಳಿಯಂತೆ ಸೂಕ್ತ ಆದೇಶವನ್ನು ಹೊರಡಿಸುವಂತೆ ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮಾಂಕ(2)ರ ಅನಧಿಕೃತ ಟಿಪ್ಪಣಿಯಲ್ಲಿ ಸರ್ಕಾರದ ಜಂಟಿಕಾರ್ಯದರ್ಶಿಗಳು ಭಾರತ ಸರ್ಕಾರ ಇವರು ವಿದ್ಯಾರ್ಥಿಗಳ ಶಾಲಾ ಬ್ಯಾಗ್ ಹೊರೆ ತಗ್ಗಿಸಲು ಸೂಕ್ತ ಕ್ರಮ ಕೈಗೊಳ್ಳುವಂತೆ ಕೋರಿರುತ್ತಾರೆ.

ಈ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಇಡಿ 107 ಯೋಯೋಕ 2017, ಬೆಂಗಳೂರು, ದಿನಾಂಕ: 03/05/2019**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2019-20ನೇ ಸಾಲಿನಲ್ಲಿ ರಾಜ್ಯದಾದ್ಯಂತ – ಸರ್ಕಾರಿ, ಅನುದಾನಿತ ಹಾಗೂ ಅನುದಾನರಹಿತ ಶಾಲೆಗಳಲ್ಲಿ 1 ರಿಂದ 10ನೇ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಶಾಲಾ ಬ್ಯಾಗ್ ಹೊರೆ ಕಡಿಮೆ ಮಾಡಲು ಈ ಕೆಳಕಂಡ ಅಂಶಗಳಿಗೆ ಅನುಗುಣವಾಗಿ ಕ್ರಮಗಳನ್ನು ಕೈಗೊಳ್ಳುವಂತೆ ಆದೇಶಿಸಿದೆ.

ಎನ್.ಎನ್.ಕಬ್ಬೂರ

-2

Scanned by CamScanner

-2-

1. ವಿದ್ಯಾರ್ಥಿಯ ಬ್ಯಾಗ್‌ನ ತೂಕವು ಆ ವಿದ್ಯಾರ್ಥಿಯ ದೇಹದ ಸರಾಸರಿ ತೂಕದ ಶೇ.10 ನ್ನು ಮೀರದಂತೆ ವಿದ್ಯಾರ್ಥಿಗಳು ಶಾಲೆಗೆ ತರುವ ಶಾಲಾ ಬ್ಯಾಗಿನ ತೂಕದ ವಿವರ ಕೆಳಗಿನಂತೆ ನಿಗದಿಪಡಿಸಲಾಗಿದೆ.

| ಕ್ರಮ ಸಂಖ್ಯೆ | ತರಗತಿ | ಶಾಲಾಬ್ಯಾಗ್ ನ ತೂಕ |
|---|---|---|
| 1. | 1-2 | 1.5-2 ಕಿ.ಗ್ರಾಂ |
| 2. | 3-5 | 2 -3 ಕಿ.ಗ್ರಾಂ |
| 3. | 6-8 | 3 -4 ಕಿ.ಗ್ರಾಂ |
| 4. | 9-10 | 4 -5 ಕಿ.ಗ್ರಾಂ |

2. 1 ಮತ್ತು 2ನೇ ತರಗತಿ ವಿದ್ಯಾರ್ಥಿಗಳಿಗೆ ಮನೆಗೆಲಸ ನೀಡದಂತೆ ಕ್ರಮವಹಿಸತಕ್ಕದ್ದು.
3. ವಿದ್ಯಾರ್ಥಿಗಳಿಗೆ ಮುಂಚಿತವಾಗಿಯೇ ಆಯಾ ದಿವಸದ ವೇಳಾಪಟ್ಟಿಗೆ ಅನುಗುಣವಾಗಿ ಪಠ್ಯಪುಸ್ತಕ, ನೋಟ್ ಪುಸ್ತಕಗಳನ್ನು ಶಾಲೆಗೆ ತರಲು ಅಗತ್ಯ ಸೂಚನೆಗಳನ್ನು ನೀಡತಕ್ಕದ್ದು.
4. ಅತಿಯಾದ ಹೊರೆಯುರುವ ಶಾಲಾ ಬ್ಯಾಗ್‌ನಿಂದ ಉಂಟಾಗಬಹುದಾದ ದುಷ್ಪರಿಣಾಮಗಳ ಬಗ್ಗೆ ಪೋಷಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ಮನವರಿಕೆ ಮಾಡತಕ್ಕದ್ದು.
5. ಕಡಿಮೆ ಖರ್ಚಿನ, ಹಗುರವಾಗಿರುವ ಹಾಗೂ ದೀರ್ಘಕಾಲ ಬಾಳಿಕೆ ಬರುವಂತಹ ಶಾಲಾ ಬ್ಯಾಗ್, ಪೆನ್ಸಿಲ್ ಕೇಸ್‌ಗಳು ಹಾಗೂ ಇನ್ನಿತರ ಲೇಖನ ಸಾಮಗ್ರಿಗಳನ್ನು ಬಳಸುವಂತೆ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸತಕ್ಕದ್ದು.
6. ಶಾಲಾ ಗ್ರಂಥಾಲಯದಲ್ಲಿ ಸಮಾನಾರ್ಥಕ ಪದಕೋಶ, ಅಟ್ಲಾಸ್, ಜ್ಞಾನವಿಜ್ಞಾನ ಕೋಶಗಳಂತಹ ಪರಾಮರ್ಶನ ಸಾಮಗ್ರಿಗಳು ಸಾಕಷ್ಟು ಸಂಖ್ಯೆಯಲ್ಲಿ ಲಭ್ಯವಾಗುವಂತೆ ಹಾಗೂ ಮಕ್ಕಳು ಇವುಗಳನ್ನು ಆವಶ್ಯಕತೆ ಇದ್ದಾಗ ಬಳಸಿಕೊಳ್ಳುವಂತೆ ವ್ಯವಸ್ಥೆಮಾಡತಕ್ಕದ್ದು.
7. ಅಭ್ಯಾಸ ಚಟುವಟಿಕೆಗಳನ್ನು ಶಾಲೆಗಳಲ್ಲಿ ಮಾಡಿಸಿ ಫೈಲ್ ಮಾಡಿಸುವುದು. ಅವಶ್ಯಕತೆ ಇದ್ದಾಗ ಪರಾಮರ್ಶಿಸಲು ಇವುಗಳನ್ನು ಶಾಲೆಗಳಲ್ಲಿಯೇ ಸಂಗ್ರಹಿಸಿಡಲು ಪ್ರೇರೇಪಿಸುವುದು ಅಥವಾ ಅಭ್ಯಾಸಪುಸ್ತಕಗಳನ್ನು ಬಳಸಿದಲ್ಲಿ ಇವುಗಳನ್ನು ಶಾಲೆಗಳಲ್ಲಿಯೇ ಸಂಗ್ರಹಿಸಿಡತಕ್ಕಸತಕ್ಕದ್ದು.
8. ವಿದ್ಯಾರ್ಥಿಯು ಮನೆಯಿಂದ ಶಾಲೆಗೆ, ಶಾಲೆಯಿಂದ ಮನೆಗೆ ತೆಗೆದುಕೊಂಡು ಹೋಗುವ ಪಠ್ಯಪುಸ್ತಕಗಳು, ನೋಟ್ ಪುಸ್ತಕಗಳು, ಲೇಖನ ಸಾಮಗ್ರಿಗಳು, ಕಲಿಕಾ ಉಪಕರಣಗಳು, ಹಾಗೂ ಇನ್ನಿತರ ವಸ್ತುಗಳನ್ನು ತರಗತಿಯೊಳಗೆ ಶೇಖರಿಸಿಡುವಂತೆ ಅಗತ್ಯ ಅನುಕೂಲತೆಗಳನ್ನು ಕಲ್ಪಿಸತಕ್ಕದ್ದು.
9. ಮಕ್ಕಳು ಶಾಲೆಗಳಿಗೆ ಕುಡಿಯುವ ನೀರನ್ನು ಕೊಂಡಯ್ಯುವುದನ್ನು ತಪ್ಪಿಸಲು ಶುದ್ಧ ಕುಡಿಯುವ ನೀರಿನ ವ್ಯವಸ್ಥೆಯನ್ನು ಶಾಲೆಯಲ್ಲಿಯೇ ಕಲ್ಪಿಸತಕ್ಕದ್ದು.
10. 100 ಪಾಳೆಗಳಿಗೆ ಮೀರಿದ ನೋಟ್ ಪುಸ್ತಕಗಳನ್ನು ಶಾಲೆಯು ನಿಗದಿಗೊಳಿಸದಂತೆ ಎಚ್ಚರಿಕೆ ವಹಿಸತಕ್ಕದ್ದು.
11. ತಿಂಗಳ 3ನೇ ಶನಿವಾರವನ್ನು ಶಾಲೆಗಳಲ್ಲಿ "ಬ್ಯಾಗ್ ರಹಿತ ದಿನ" ವಾಗಿ ಆಚರಿಸತಕ್ಕದ್ದು.

ಆ ದಿನ ಶಿಕ್ಷಕರು ಪಠ್ಯಪುಸ್ತಕ ಅಥವಾ ಇತರ ಬೋಧಕ ಸಾಮಗ್ರಿಗಳ ಅವಶ್ಯಕತೆ ಇಲ್ಲದೆ ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳನ್ನು ತೊಡಗಿಸುವುದು. ಸಲಹಾತ್ಮಕ ಚಟುವಟಿಕೆಗಳನ್ನು ಈ ಕೆಳಕಂಡಂತೆ ನೀಡಿದೆ.

ಎನ್.ಎನ್.ಕಬ್ಬೂರ

-3

Scanned by CamScanner

## ಜಾಲತಾಣಗಳಲ್ಲಿನ ಪ್ರಕಟಣೆಗೊಂಡಿರುವ 'ನೋ ಬ್ಯಾಗ್ ಡೇ' ಕಾರ್ಯಕ್ರಮಕ್ಕೆ ಸಂಬಂಧಿಸಿದ ವರದಿಗಳು

No bag day: Shivamogga implements, rest of the state yet to By Vikas | Published: Thursday, August 9, 2018, 14:23 [IST] Bengaluru, Aug 9: School kids having to carry heavy bags has emerged as one of major concerns for the parents in recent times. Carrying bags as heavy as 7-8 kgs daily is nothing but cruelty which not only effects their spine but also leaves them totally exhausted by the end of the day.




**Bengaluru:** The state government has issued orders to reduce the burden of school children of carrying textbooks. The order says: "The weight of school bags should not exceed 10% of body weight."

As per the order, the school bag should weigh 1.5 to 2 kg for 1 to 2 class, 2 to 3 kg for classes 3 to 5, 4 to 6 kg for classes 6 to 8 and 4 to 5 kg for classes 9 to 10.

"Homework should not be given to the children, who are studying in class 1 and 2. 'No bag day' must be observed in schools on 3rd Saturday of every month," the order instructed.




ಸಮೀಕ್ಷೆಯ ಪ್ರಕಾರ ಭಾರೀ ಶಾಲಾ ಚೀಲಗಳು ಅನುದಾನರಹಿತ ಶಾಲೆಗಳಲ್ಲಿವೆ.

### *2018-19ನೇ ಶೈಕ್ಷಣಿಕ ವರ್ಷದಿಂದ ವಿದ್ಯಾರ್ಥಿಗಳ ಮೇಲಿನ ಹೊರೆ ಸರಾಗಗೊಳಿಸುವ ಡಿಪಿಐ ಯೋಜನೆ ಕೈಗೆತ್ತಿಕೊಂಡಿಲ್ಲ*

ವಾರಕ್ಕೊಮ್ಮೆ ನೋ-ಬ್ಯಾಗ್ ದಿನವನ್ನು ಕಡ್ಡಾಯಗೊಳಿಸುವ ಬಗ್ಗೆ ಸರ್ಕಾರ ಇನ್ನೂ ಆದೇಶ ಹೊರಡಿಸದ ಕಾರಣ ರಾಜ್ಯ ಪಠ್ಯಕ್ರಮದ ಶಾಲೆಗಳ ವಿದ್ಯಾರ್ಥಿಗಳು ತಮ್ಮ ಬೆನ್ನಿನ ಹೊರೆಯನ್ನು ಹೊರಬೇಕಾಗುತ್ತದೆ.

ಈ ವರ್ಷದ ಜನವರಿಯಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆ 2018-19 ಶೈಕ್ಷಣಿಕ ವರ್ಷದಿಂದ ವಿದ್ಯಾರ್ಥಿಗಳ ಮೇಲಿನ ಹೊರೆ ಸರಾಗಗೊಳಿಸುವ ಯಾವುದೇ ಬ್ಯಾಗ್ ದಿನದ ಕಲ್ಪನೆಯನ್ನು ರೂಪಿಸಿತು. ಶೈಕ್ಷಣಿಕ ವರ್ಷ ಪ್ರಾರಂಭವಾಗಿ ಒಂದು ತಿಂಗಳಿಗಿಂತಲೂ ಹೆಚ್ಚು ಸಮಯ ಕಳೆದರೂ, ಈ ಸಮಸ್ಯೆಯನ್ನು ಇಲಾಖೆಯು ಗಮನಿಸಿಲ್ಲ.

ಪೋಷಕರು ಮತ್ತು ಎನ್‌ಜಿಓಗಳು ಮಿತಿಮೀರಿದ ಶಾಲಾ ಚೀಲಗಳನ್ನು ಗುರುತಿಸಿದಾಗ ವಿವಿಧ ಅಭಿಯಾನಗಳನ್ನು ನಡೆಸಿದ ನಂತರ ಈ ಪ್ರಸ್ತಾಪವನ್ನು ಮೊದಲು ಎತ್ತಲಾಯಿತು, ಕೆಲವು 7 ಕೆಜಿ ತೂಕವಿರುತ್ತದೆ. ಇದಲ್ಲದೆ, ವೈದ್ಯರು ಮಾಡಿದ ಶಿಫಾರಸುಗಳ ಪ್ರಕಾರ ದೇಹದ ತೂಕದ 10-15% ಒಳಗೆ ಚೀಲದ ಒಟ್ಟು ತೂಕವನ್ನು ಸರಿಪಡಿಸಲು ಇಲಾಖೆ ಉತ್ಸುಕವಾಗಿದೆ.

# ‘ನೋ ಬ್ಯಾಗ್ ಡೇ’ ಕಾರ್ಯಕ್ರಮಕ್ಕೆ ಸಂಬಂಧಿಸಿದ ಪತ್ರಿಕೆಗಳ ವರದಿಗಳು

ಸುದ್ದಿಬೆಂಗಳೂರು

ಬ್ಯಾಗ್ ದಿನವಿಲ್ಲ: ಶಿವಮೊಗ್ಗ ಅಳವಡಿಸುತ್ತದೆ, ರಾಜ್ಯದ ಉಳಿದ ಭಾಗ ಇನ್ನೂ ವಿಕಾಸ್ ಅವರಿಂದ | ಪ್ರಕಟಣೆ: ಗುರುವಾರ, ಆಗಸ್ಟ 9, 2018, 14:23 [IST] ಬೆಂಗಳೂರು, ಆಗಸ್ಟ 9: ಶಾಲಾ ಮಕ್ಕಳು ಭಾರೀ ಚೀಲಗಳನ್ನು ಸಾಗಿಸಬೇಕಾಗಿರುವುದು ಇತ್ತೀಚಿನ ದಿನಗಳಲ್ಲಿ ಪೋಷಕರಿಗೆ ಒಂದು ಪ್ರಮುಖ ಕಳವಳವಾಗಿದೆ. ಪ್ರತಿದಿನ 7-8 ಕಿ.ಗ್ರಾಂ ಭಾರವಿರುವ ಚೀಲಗಳನ್ನು ಒಯ್ಯುವುದು ಕ್ರೌರ್ಯವಲ್ಲದೆ ಅದು ಅವರ ಬೆನ್ನುಮೂಳೆಯ ಮೇಲೆ ಪರಿಣಾಮ ಬೀರುವುದು ಮಾತ್ರವಲ್ಲದೆ ದಿನದ ಅಂತ್ಯದ ವೇಳೆಗೆ ಸಂಪೂರ್ಣವಾಗಿ ದಣಿದಿದೆ. Sponsored Get 1000… workindia.in Sponsored This notebook… www.williampenn.net ಪ್ರಾತಿನಿಧ್ಯ ಚಿತ್ರ ಕರ್ನಾಟಕದ ಸಾರ್ವಜನಿಕ ಶಿಕ್ಷಣ ಇಲಾಖೆ, ಈ ವರ್ಷದ ಜನವರಿಯಲ್ಲಿ, 2018-19 ಶೈಕ್ಷಣಿಕ ವರ್ಷದಿಂದ ವಿದ್ಯಾರ್ಥಿಗಳ ಮೇಲಿನ ಹೊರೆ ಸರಾಗವಾಗಿಸಲು ನೋ-ಬ್ಯಾಗ್ ದಿನವನ್ನು ಜಾರಿಗೆ ತರಲು ನಿರ್ಧರಿಸಿತ್ತು. ಈ ನಿಟ್ಟಿನಲ್ಲಿ ಎಲ್ಲಾ ಶಾಲೆಗಳಿಗೆ ಬ್ಲಾಕ್ ಶಿಕ್ಷಣ ಅಧಿಕಾರಿಗಳು ನಿರ್ದೇಶನ ನೀಡಿದ್ದಾರೆ. ಆದರೆ ಶಿವಮೊಗ್ಗವನ್ನು ಹೊರತುಪಡಿಸಿ, ರಾಜ್ಯದ ಬೇರೆ ಯಾವುದೇ ಜಿಲ್ಲೆಗಳು ಇದನ್ನು ಜಾರಿಗೆ ತಂದಿಲ್ಲ. ಶಿವಮೊಗ್ಗದಲ್ಲಿ, ಆಗಸ್ಟ 11 ರಿಂದ ಪ್ರತಿ ಶನಿವಾರ 1 ರಿಂದ 10 ನೇ ತರಗತಿಯ ವಿದ್ಯಾರ್ಥಿಗಳು ಚೀಲಗಳಿಲ್ಲದ ಶಾಲೆಗಳಿಗೆ ಹಾಜರಾಗುತ್ತಿದ್ದರು. ಶನಿವಾರದಂದು, ಶಿವಮೊಗ್ಗದಲ್ಲಿನ ಶಾಲೆಗಳು ಶಾಸ್ತ್ರೀಯ ನೃತ್ಯ, ಏರೋಬಿಕ್ಸ್, ಯೋಗ, ಸಮರ ಕಲೆಗಳು ಮತ್ತು ರಂಗಭೂಮಿಯ ಕುರಿತಾದ ಇತರ ಪಠ್ಯಕ್ರಮದ ಚಟುವಟಿಕೆಗಳಲ್ಲಿ ಭಾಗವಹಿಸಲು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುತ್ತಿವೆ. ಇದಲ್ಲದೆ, ಸಾಮಾನ್ಯ ದಿನಗಳಲ್ಲಿ ಶಾಲಾ ಚೀಲಗಳ ತೂಕವನ್ನು ನಿಯಂತ್ರಿಸಲು, ವೈದ್ಯರ ಶಿಫಾರಸುಗಳ ಪ್ರಕಾರ ದೇಹದ ತೂಕದ 10-15% ಒಳಗೆ ಚೀಲದ ಒಟ್ಟು ತೂಕವನ್ನು ಸರಿಪಡಿಸಲು ಸಾರ್ವಜನಿಕ ಶಿಕ್ಷಣ ಇಲಾಖೆ ನೋಡುತ್ತಿದೆ. ಭಾರವಾದ ಚೀಲಗಳನ್ನು ಹೊತ್ತೊಯ್ಯುವ ಹೊರೆಯಿಂದ ವಿದ್ಯಾರ್ಥಿಗಳನ್ನು ನಿವಾರಿಸುವುದರ ಹೊರತಾಗಿ, ಕಲಿಕೆ ಪಠ್ಯಪುಸ್ತಕ ಕೇಂದ್ರಿತವಾಗಿ ಉಳಿಯದಂತೆ ನೋಡಿಕೊಳ್ಳುವುದು ಸಂಪೂರ್ಣ ವ್ಯಾಯಾಮದ ಉದ್ದೇಶವಾಗಿದೆ. ಬೆಂಗಳೂರಿನ ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ವಿಶ್ವವಿದ್ಯಾಲಯದ ಮಕ್ಕಳ ಮತ್ತು ಕಾನೂನು ಕೇಂದ್ರದ ಸಹಯೋಗದೊಂದಿಗೆ ರಾಜ್ಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಇಲಾಖೆಯ ಸಮೀಕ್ಷೆಯ ಪ್ರಕಾರ, ಶಾಲಾ ಚೀಲಗಳ ಹೆಚ್ಚಿನ ಹೊರೆ ಅನುದಾನರಹಿತ ಶಾಲೆಗಳಲ್ಲಿದೆ. 1 ರಿಂದ 10 ನೇ ತರಗತಿಯ ಚೀಲದ ಸರಾಸರಿ ತೂಕ 5.6 ಕೆ.ಜಿ. 8.3 ಕೆಜಿ ಭಾರದ ಚೀಲವನ್ನು ಕೇಂದ್ರೀಯ ವಿದ್ಯಾಲಯದ 12 ನೇ ತರಗತಿಯ ವಿದ್ಯಾರ್ಥಿಯು ಹೊತ್ತೊಯ್ದಿದ್ದಾನೆ. ನೋಟ್ಬುಕ್ಗಳು ಗರಿಷ್ಠ ತೂಕವನ್ನು ಹೊಂದಿವೆ ಎಂದು ಸಮೀಕ್ಷೆಯು ಹೇಳಿದೆ ಎಂದು ಹಿಂದೂ ವರದಿ ಮಾಡಿದೆ.

# *ಪ್ರತಿ ತಿಂಗಳ 3 ನೇ ಶನಿವಾರ ಶಾಲೆಗಳಲ್ಲಿ 'ಬ್ಯಾಗ್ ಡೇ ಇಲ್ಲ'*

**ಕರ್ನಾಟಕ ಸರ್ಕಾರ ಹೊಸ ಆದೇಶವನ್ನು ನೀಡುತ್ತದೆ**




**ಬೆಂಗಳೂರು:** ಶಾಲಾ ಮಕ್ಕಳ ಪಠ್ಯಪುಸ್ತಕಗಳನ್ನು ಹೊರುವ ಹೊರೆ ಕಡಿಮೆ ಮಾಡಲು ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ಆದೇಶವು ಹೀಗೆ ಹೇಳುತ್ತದೆ: "ಶಾಲಾ ಚೀಲಗಳ ತೂಕವು ದೇಹದ ತೂಕದ 10% ಮೀರಬಾರದು."

ಆದೇಶದ ಪ್ರಕಾರ, ಶಾಲಾ ಚೀಲವು 1 ರಿಂದ 2 ತರಗತಿಗೆ 1.5 ರಿಂದ 2 ಕೆಜಿ, 3 ರಿಂದ 5 ನೇ ತರಗತಿಗಳಿಗೆ 2 ರಿಂದ 3 ಕೆಜಿ, 6 ರಿಂದ 8 ನೇ ತರಗತಿಗಳಿಗೆ 4 ರಿಂದ 6 ಕೆಜಿ ಮತ್ತು 9 ರಿಂದ 10 ನೇ ತರಗತಿಗಳಿಗೆ 4 ರಿಂದ 5 ಕೆಜಿ ತೂಕವಿರಬೇಕು.

"1 ಮತ್ತು 2 ನೇ ತರಗತಿಯಲ್ಲಿ ಓದುತ್ತಿರುವ ಮಕ್ಕಳಿಗೆ ಹೋಮ್ವರ್ಕ್ ನೀಡಬಾರದು, ಪ್ರತಿ ತಿಂಗಳು 3 ನೇ ಶನಿವಾರದಂದು ಶಾಲೆಗಳಲ್ಲಿ 'ಬ್ಯಾಗ್ ಡೇ' ಆಚರಿಸಬಾರದು" ಎಂದು ಆದೇಶದಲ್ಲಿ ಸೂಚಿಸಲಾಗಿದೆ.

## ಸರ್ಕಾರಿ ಶಾಲಾ ಮಕ್ಕಳಿಗೆ 'ಬ್ಯಾಗ್ ಡೇ ಇಲ್ಲ'

ರಾಜ್ಯದ ಸರ್ಕಾರಿ ಶಾಲೆಗಳ ವಿದ್ಯಾರ್ಥಿಗಳು ಇನ್ನು ಮುಂದೆ ತಮ್ಮ ಶಾಲಾ ಬ್ಯಾಗ್‌ಗಳನ್ನು ಶನಿವಾರದಂದು ತಬ್ಬಿಕೊಳ್ಳಬೇಕಾಗಿಲ್ಲ, ಇದರಿಂದಾಗಿ ವಾರಾಂತ್ಯವನ್ನು ಹೆಚ್ಚು ಮೋಜು ಮಾಡುತ್ತದೆ.

ಪ್ರಕಟಣೆ: 13 ಸೆಪ್ಟೆಂಬರ್ 2019 06:31 AM | ಕೊನೆಯ ನವೀಕರಿಸಲಾಗಿದೆ: 13 ಸೆಪ್ಟೆಂಬರ್ 2019 06:31 AM|**ಎ + ಎ ಎ-**



ಅಶ್ವಿನಿ ಎಂ ಶ್ರೀಪಾಡ್ ಅವರಿಂದ

ಎಕ್ಸ್‌ಪ್ರೆಸ್ ಸುದ್ದಿ ಸೇವೆ

ಬೆಂಗಳೂರು: ರಾಜ್ಯದ ಸರ್ಕಾರಿ ಶಾಲೆಗಳ ವಿದ್ಯಾರ್ಥಿಗಳು ಇನ್ನು ಮುಂದೆ ಶನಿವಾರ ತಮ್ಮ ಶಾಲಾ ಚೀಲಗಳನ್ನು ತಬ್ಬಿಕೊಳ್ಳಬೇಕಾಗಿಲ್ಲ, ಅವರ ವಾರಾಂತ್ಯವನ್ನು ಹೆಚ್ಚು ಮೋಜು ಮಾಡುತ್ತದೆ. ಸಾರ್ವಜನಿಕ ಶಿಕ್ಷಣ ಇಲಾಖೆ ಶನಿವಾರದಂದು 'ಶಾಲಾ ಬ್ಯಾಗ್ ದಿನ' ನಡೆಸಲು ಪ್ರಸ್ತಾಪಿಸಿದೆ.

| 25 | ಜ್ಞಾನ ಸಹ್ಯಾದ್ರಿ ಹಿ.ಪ್ರಾ.ಶಾಲೆ ಆನಂದಪುರಂ. ಸಾಗರ. | 1 | 1 | 2 | 1 | 1 | | |
| 266 | ಸರ್ಕಾರಿ ಹಿ.ಪ್ರಾ.ಶಾಲೆ ಆಚಾಪುರ. ಸಾಗರ. | 1 | 1 | 2 | 1 | 1 | | |
| 27 | ಹಾಜಿ. ಕೆ. ಎಂ. ಕೋಯಾ ಪ್ರೌಢಶಾಲೆ. ಬಿ.ಹೆಚ್.ರಸ್ತೆ ಸಾಗರ | 1 | 1 | 2 | 1 | 1 | | |
| 28 | ಸಪಪೂಕಾ(ಪ್ರೌ.ಶಾ.ವಿ) ಸಾಗರ | - | 1 | 2 | 1 | 1 | | |
| 29 | ಸ.ಬಾ.ಪಪೂಕಾ (ಪ್ರೌ.ಶಾ.ವಿ) ಆನಂದಪುರ, ಸಾಗರ. | 1 | 1 | 2 | 1 | 1 | | |
| 30 | ಸರ್ಕಾರಿ ಕಿ.ಪ್ರಾ.ಶಾಲೆ ಆನಂದಪುರಂ. ಸಾಗರ. | 1 | 1 | 2 | 1 | - | | |

| | | | | | | | | |
|---|---|---|---|---|---|---|---|---|
| 31 | ಜ್ಞಾನ ಸಹ್ಯಾದ್ರಿ ಪ್ರೌಢಶಾಲೆ ಯಡೇಹಳ್ಳಿ. ಸಾಗರ. | 1 | 1 | 2 | 1 | - | | |
| 32 | ಸರ್ಕಾರಿ ಉರ್ದು ಹಿ.ಪ್ರಾ.ಶಾಲೆ ಆಚಾಪುರ. ಸಾಗರ. | 1 | 1 | 2 | 1 | 1 | | |
| 33 | ಸಾಗರ ಉರ್ದು ಹಿ.ಪ್ರಾ.ಶಾಲೆ. ಬಿ.ಹೆಚ್.ರಸ್ತೆ ಸಾಗರ | 1 | 1 | 2 | 1 | 1 | | |
| 34 | ಸಪಪೂಕಾ(ಪ್ರೌ.ಶಾ.ವಿ) ಸೊರಬ | 1 | 1 | 2 | 1 | - | | |
| 35 | ಸರ್ಕಾರಿ ಕಿ.ಪ್ರಾ.ಶಾಲೆ ಚನ್ನಾಪುರ ಸೊರಬ. | 1 | 1 | 2 | 1 | 1 | | |
| 36 | ಶ್ರೀ ವೀರಭದ್ರೇಶ್ವರ ಗ್ರಾಮಾಂತರ ಪ್ರೌಢಶಾಲೆ ಬಿಳವಾಣಿ. ಸೊರಬ | 1 | 1 | 2 | 1 | - | | |
| 37 | ಶ್ರೀ ಉಮಾಮಹೇಶ್ವರ ಗ್ರಾಮಾಂತರ ಪ್ರೌಢಶಾಲೆ ಮಾವಲಿ. ಸೊರಬ | 1 | 2 | 2 | 2 | 1 | | |
| 38 | ಸರ್ಕಾರಿ ಹಿ.ಪ್ರಾ.ಶಾಲೆ ಮಾವಲಿ. ಸೊರಬ. | 1 | 1 | 2 | 1 | 1 | | |
| 39 | ಸರ್ಕಾರಿ ಹಿ.ಪ್ರಾ.ಶಾಲೆ ಬಿಳವಾಣಿ. ಸೊರಬ. | 1 | 1 | 2 | 1 | - | | |
| 40 | ಸರ್ಕಾರಿ ಕಿ.ಪ್ರಾ.ಶಾಲೆ ಶಿವಪುರ. ಸೊರಬ. | 1 | 1 | 1 | 1 | 1 | | |
| 41 | ಸರ್ಕಾರಿ ಪ್ರೌಢಶಾಲೆ, ಅರಸಾಳು, ಹೊಸನಗರ | 1 | 1 | 2 | 1 | 1 | | |
| 42 | ಸರ್ಕಾರಿ ಕಿ.ಪ್ರಾ.ಶಾಲೆ ಬೆನವಳ್ಳಿ. ಹೊಸನಗರ | 1 | 1 | 1 | 1 | 1 | | |
| 43 | ಸರ್ಕಾರಿ ಹಿ.ಪ್ರಾ.ಶಾಲೆ, ಅರಸಾಳು, ಹೊಸನಗರ | 1 | 1 | 2 | 1 | 1 | | |
| 44 | ಸರ್ಕಾರಿ ಕಿ.ಪ್ರಾ.ಶಾಲೆ, ಬಟಾಣಿಜೆಡ್ಡು. ಹೊಸನಗರ | 1 | 1 | 2 | 1 | - | | |
| 45 | ಸರ್ಕಾರಿ ಕಿ.ಪ್ರಾ.ಶಾಲೆ ಕೊಪ್ಪದಕೆರೆ. ಶಿಕಾರಿಪುರ. | 2 | 1 | 2 | 1 | 1 | | |
| 46 | ಸರ್ಕಾರಿ ಪ್ರೌಢಶಾಲೆ ಹಾರೋಗೊಪ್ಪ ಶಿಕಾರಿಪುರ. | 2 | 1 | 2 | 1 | 1 | | |
| 47 | ಸರ್ಕಾರಿ ಹಿ.ಪ್ರಾ.ಶಾಲೆ ಹಿರೇಕೊರಲಹಳ್ಳಿ. ಶಿಕಾರಿಪುರ. | 1 | 1 | 2 | 1 | 1 | | |
| 48 | ಡಾ॥ ರಾಜಕುಮಾರ್ ಪ್ರೌಢಶಾಲೆ ಅಂಜನಾಪುರ ಶಿಕಾರಿಪುರ. | 2 | 1 | 1 | 1 | 1 | | |
| 49 | ಸರ್ಕಾರಿ ಹಿ.ಪ್ರಾ.ಶಾಲೆ ಅಂಜನಾಪುರ. ಶಿಕಾರಿಪುರ. | 2 | 1 | 2 | 1 | 1 | | |
| 50 | ಸರ್ಕಾರಿ ಹಿ.ಪ್ರಾ.ಶಾಲೆ ಹಾರೋಗೊಪ್ಪ. ಶಿಕಾರಿಪುರ. | 1 | 1 | 2 | - | 1 | | |

**ಕೋಷ್ಟಕ – 5 ರ ವಿಶ್ಲೇಷಣೆ**

| **ಪ್ರಶ್ನೆ ಸಂಖ್ಯೆ** | **7** | **16** | **17** | **20** | **4** | **ಒಟ್ಟು** | **ಶೇ. ಪ್ರಮಾಣ** |
|---|---|---|---|---|---|---|---|
| **ಹೌದು/ ಒಪ್ಪುತ್ತೇನೆ** | 40 | 49 | 05 | 48 | 41 | | |
| **ಇಲ್ಲ/ ಒಪ್ಪುವುದಿಲ್ಲ** | 07 | 01 | 45 | 01 | – | | |
| **ಅಗತ್ಯವಿರಲಿಲ್ಲ/ ಗೊತ್ತಿಲ್ಲ** | – | – | – | – | – | | |
| **ಪ್ರತಿಕ್ರಿಯೆ ಇರುವುದಿಲ್ಲ** | 03 | – | – | 01 | 09 | | |
| ಒಟ್ಟು ಶೇ. ಪ್ರಮಾಣ | 80 | 98 | 90 | 96 | 82 | | 89.2% |

5. 'ನೋ ಬ್ಯಾಗ್ ಡೇ' ಕಾರ್ಯಕ್ರಮ ಅನುಷ್ಠಾನದ ವಸ್ತುಸ್ಥಿತಿಯನ್ನು ಗುರುತಿಸಲು ನೀಡಿದ ಪ್ರಶ್ನಾವಳಿಯಲ್ಲಿ ಈ ಕೆಳಗಿನ ಪ್ರಶ್ನೆಗಳನ್ನು ಬಳಸಿಕೊಂಡು ಮಾಹಿತಿ ಸಂಗ್ರಹಿಸಿದೆ.

ಪ್ರಶ್ನೆ 7. 'ನೋ ಬ್ಯಾಗ್ ಡೇ'ನಡೆಸಲು ಪಾಕ್ಷಿಕ ಅಥವ ಮಾಸಿಕ ಒಂದು ಶನಿವಾರ ನಿಗಧಿಪಡಿಸಲಾಗಿದೆಯೇ?

ಪ್ರಶ್ನೆ 16. 'ನೋ ಬ್ಯಾಗ್ ಡೇ'ಮಗುವಿನ ಸಭಾ ಕಂಪನ ಕಳೆಯಲು, ಮಂಡನಾ ಕೌಶಲ ಬೆಳೆಸಲು ವೇದಿಕೆಯಾಗಬಹುದೇ?

ಪ್ರಶ್ನೆ 17. 'ನೋ ಬ್ಯಾಗ್ ಡೇ'ಅನುಷ್ಠಾನಗೊಳಿಸಲು ಇಲಾಖೆಯಿಂದ ಒತ್ತಡ ಇದೆಯೇ?

ಪ್ರಶ್ನೆ 20. ಜ್ಞಾನವನ್ನು ಮಗು ಅನುಭವದಿಂದ ಕಟ್ಟಿಕೊಳ್ಳುವುದರಿಂದ, ಪಠ್ಯಪುಸ್ತಕ ರಹಿತ ಚಟುವಟಿಕೆಗಳನ್ನು ರೂಪಿಸಲು ನಿಮಗೆ ಒಪ್ಪಿಗೆ ಇದೆಯೇ?

ಮುಕ್ತ ಉತ್ತರದ ಪ್ರಶ್ನೆ 4. 'ನೋ ಬ್ಯಾಗ್ ಡೇ' ದಿನದ ಕಲಿಕಾ ಪ್ರಕ್ರಿಯೆಯ ಬಗ್ಗೆ ನಿಮ್ಮ ಅನುಭವವನ್ನು ತಿಲಿಸಿರಿ.

ಈ ಪ್ರಶ್ನೆಗಳಲ್ಲಿ ಒಂದನೇ ಪ್ರಶ್ನೆಗೆ ಎಲ್ಲಾ 50 ಶಿಕ್ಷಕರಲ್ಲಿ 40 ಜನ ಶಿಕ್ಷಕರು ಪೂರಕವಾಗಿ ಉತ್ತರಿಸಿದ್ದು, ಇಲಾಖೆಯು ನೋ ಬ್ಯಾಗ್ ಡೇ ದಿನಕ್ಕಾಗಿ ತಿಂಗಳಿಗೆ 3ನೇ ಶನಿವಾರ ನಿಗದೀಪಡಿಸಿರುತ್ತದೆ. ಶಾಲೆಯವರು ತಮ್ಮ ಅನುಕೂಲಕ್ಕೆ ಅನುಗುಣವಾಗಿ ಪಾಕ್ಷಿಕ ಅಥವಾ ಮಾಸಿಕ ಒಂದು ದಿನ ನಿಗದಿ ಪಡಿಸಿಕೊಳ್ಳಲು ಅವಕಾಶವಿರುತ್ತದೆ. ಆದರೆ 7ಜನ ಶಿಕ್ಷಕರು ನೀಡಿದ ಉತ್ತರ ಪೂರಕವಾಗಿ ಇರುವುದಿಲ್ಲ. ಉಳಿದಂತೆ ಮೂರು ಜನ ಶಿಕ್ಷಕರು ಉತ್ತರಿಸದೆ ಖಾಲಿ ಬಿಟ್ಟಿರುತ್ತಾರೆ. ಈ ಕಾರ್ಯಕ್ರಮಕ್ಕೆ ಒಂದು ನಿಗದಿತವಾದ ಅವದಿಯನ್ನು ಅಳವಡಿಸಿಕೊಳ್ಳುವುದು ಅಗತ್ಯ ಎಂಬ ಅಂಶ ಕಂಡುಬರುತ್ತದೆ.


ಎರಡನೇ ಪ್ರಶ್ನೆಗೆ 50 ಶಿಕ್ಷಕರಲ್ಲಿ 49 ಜನ ಶಿಕ್ಷಕರು ಪೂರಕವಾಗಿ ಉತ್ತರಿಸಿದ್ದು, ಮಗು ಚಟುವಟಿಕೆಗಳಲ್ಲಿ ಭಾಗವಹಿಸುವ ಮೂಲಕ ಜ್ಞಾನವನ್ನು ಕಟ್ಟಿಕೊಳ್ಳುವ ಜೊತೆ ಜೊತೆಯಲ್ಲಿ ಮಗುವಿನಲ್ಲಿ ಇರಬಹುದಾದ ಸಭಾಕಂಪನವನ್ನು ಕಳೆಯಲು ಹಾಗೂ ತಮ್ಮ ಅನುಭವಗಲನ್ನು, ಅನಿಸಿಕೆಗಳನ್ನು ದೃಢವಾಗಿ ವ್ಯಕ್ತಪಡಿಸುವ ಮಂಡನಾ ಕೌಶಲವನ್ನು ಬೆಳೆಸಲು 'ನೋ ಬ್ಯಾಗ್ ಡೇ' ಕಾರ್ಯಕ್ರಮ ಸಹಕಾರಿಯಾಗಿದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಉಳಿದ ಒಬ್ಬ ಶಿಕ್ಷಕರು ಮಾತ್ರ 'ಇಲ್ಲ' ಎಂದು ಉತ್ತರಿಸಿದ್ದು, ಅವರಿಗೆ ಪ್ರಶ್ನೆಯನ್ನು ಅರ್ಥಸಿಕೊಳ್ಳುವಲ್ಲಿ ಅಡಚಣೆಯಾಗಿರಬಹುದೆಂಬ ಅಂಶ ಕಂಡುಬರುತ್ತಿದೆ.

ಮೂರನೇ ಪ್ರಶ್ನೆಗೆ 50 ಶಿಕ್ಷಕರುಗಳಲ್ಲಿ ಕೇವಲ 05 ಜನ ಶಿಕ್ಷಕರು ಮಾತ್ರ 'ಹೌದು' ಎಂದು ಉತ್ತರಿಸಿದ್ದು, ನೋ ಬ್ಯಾಗ್ ಡೇ ಕಾರ್ಯಕ್ರಮವನ್ನು ತಮ್ಮ ಶಾಲೆಯಲ್ಲಿ ಅಳವಡಿಸಿಕೊಳ್ಳಲು ಇಲಾಖೆಯ ಅಧಿಕಾರಿಗಳು ಒತ್ತಾಯ ಪಡಿಸುತ್ತಿದ್ದಾರೆ ಎಂದು ಹೇಳಿರುತ್ತಾರೆ. ಉಳಿದಂತೆ 45 ಜನ ಶಿಕ್ಷಕರು 'ಇಲ್ಲ' ಎಂದು ಉತ್ತರಿಸಿದ್ದು, ಈ ಕಾರ್ಯಕ್ರಮದ ಅನುಷ್ಠಾನದಲ್ಲಿ ಇಲಾಖಾಧಿಕಾರಿಗಲ ಒತ್ತಾಯ ಇಲ್ಲ ಎಂದು ದೃಢೀಕರಿಸಿದ್ದಾರೆ. ಈ ಉತ್ತರದಿಂದ ಅಧ್ಯಯನದಲ್ಲಿ ಕಂಡುಬರುವ ಅಂಶವೇನೆಂದರೆ; ಇಲಾಖಾಧಿಕಾರಿಗಳು 'ನೋ ಬ್ಯಾಗ್ ಡೇ' ಕಾರ್ಯಕ್ರಮದ ಬಗ್ಗೆ ದಿವ್ಯ ನಿರ್ಲಕ್ಯ ಹೊಂದಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ.

ನಾಲ್ಕನೇ ಪ್ರಶ್ನೆಗೆ 50 ಶಿಕ್ಷಕರುಗಳಲ್ಲಿ 48 ಜನ ಶಿಕ್ಷಕರು 'ಒಪ್ಪುತ್ತೇನೆ' ಎಂದು ಉತ್ತರಿಸಿದ್ದು, ಮಗು ಜ್ಞಾನವನ್ನು ಸ್ವ ಅನುಭವದಿಂದ ಕಟ್ಟಿಕೊಳ್ಳುವುದರಿಂದ ನೋ ಬ್ಯಾಗ್ ಡೇ ಕಾರ್ಯಕ್ರಮವು ವೇದಿಕೆಯನ್ನು ಕಲ್ಪಿಸಿಕೊಢುತ್ತದೆ ಎಂಬ ಅಂಶವನ್ನು ದೃಢಪಡಿಸಿದ್ದಾರೆ. ಉಳಿದಂತೆ ಒಬ್ಬ ಶಿಕ್ಷಕರು ಮಾತ್ರ 'ಇಲ್ಲ' ಎಂದು ಉತ್ತರಿಸಿದ್ದಾರೆ. ಇನ್ನೂ ಒಬ್ಬ ಶಿಕ್ಷಕರು ಯಾವುದೇ ಉತ್ತರವನ್ನು ನೀಡಿರುವುದಿಲ್ಲ.

ಮುಕ್ತ ಅಭಿಪ್ರಾಯದ ಐದನೇ ಪ್ರಶ್ನೆಗೆ ಒಟ್ಟು 41 ಜನ ಶಿಕ್ಷಕರು ಪೂರಕವಾಗಿ ಉತ್ತರಿಸಿದ್ದು, ನೋ ಬ್ಯಾಗ್ ಡೇ ಕಾರ್ಯಕ್ರಮದ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಪಡೆದುಕೊಂಡಿದ್ದು, ಕಲಿಕಾ ಪ್ರಕ್ರಿಯೆಗೆ ಇದು ಉತ್ತಮ ಅವಕಾಶವೆಂದು ತಿಳಿಸಿದ್ದಾರೆ. ಆದರೆ 09 ಜನ ಶಿಕ್ಷಕರು ಮಾತ್ರ ಯಾವುದೇ ಉತ್ತರವನ್ನು ನೀಡಿರುವುದಿಲ್ಲ.

ಒಟ್ಟಾರೆ ' ನೋ ಬ್ಯಾಗ್ ಡೇ' ಕಾರ್ಯಕ್ರಮ ಅನುಷ್ಟಾನದ ಬಗ್ಗೆ ನೀಡಿದ ಪ್ರಶಾವಳಿಯಲ್ಲಿ ಕಂಡುಕೊಂಡ ಅಂಶಗಳನ್ನು ಆಧರಿಸಿ, ಅದರ ಪರಿಣಾಮಕತ್ವವನ್ನು ಅವಲೋಕಿಸಿದಾಗ ವಸ್ತುಸ್ಥಿತಿ ಶೇಕಡಾ ಪ್ರಮಾಣವು 89% ರಷ್ಟು ಇರುವುದಾಗಿ ಕಂಡುಬಂದಿದೆ.




## ವಿಶ್ಲೇಷಣೆಯ ಕೋಷ್ಟಕ – 2

ಶಾಲೆಗಳಲ್ಲಿ ವಿದ್ಯಾರ್ಥಿ ಸ್ನೇಹಿ ವಾತಾವರಣವನ್ನು ನಿರ್ಮಿಸುವಲ್ಲಿ ‘ನೋ ಬ್ಯಾಗ್ ಡೇ’ ಕಾರ್ಯಕ್ರಮ ಅನುಷ್ಠಾನದ ಪರಿಣಾಮಕತ್ವವನ್ನು ಕಂಡುಕೊಳ್ಳಲು ಮುಖ್ಯೋಪಾಧ್ಯಾಯರ ಅಭಿಪ್ರಾಯವಳಿ ಆಧರಿಸಿ ಪ್ರಶ್ನಾವಳಿಗಳನ್ನು ನೀಡಲಾಗಿತ್ತು. ಮುಖ್ಯೋಪಾಧ್ಯಯರಿಗೆ ನೀಡಿದ ಈ ಪ್ರಶ್ನಾವಳಿ ನಮೂನೆಯಲ್ಲಿ ಒಟ್ಟು 10 ಬಹು ಆಯ್ಕೆ ಪ್ರಶ್ನೆಗಳು ಮತ್ತು ಒಂದು ಮುಕ್ತ ಉತ್ತರದ ಪ್ರಶ್ನೆ ಇದ್ದವು. ಆ ಪ್ರಶ್ನೆಗಳಿಗೆ ಮುಖ್ಯ ಶಿಕ್ಷಕರು ನೀಡಿದ ಅಭಿಪ್ರಾಯಗಳನ್ನು ಆಧರಿಸಿ, ಅವುಗಳನ್ನು ಕ್ರೋಢೀಕರಿಸಿ ಈ ಕೆಳಕಂಡ ನಮೂನೆಯಲ್ಲಿ ನಮೂದಿಸಿಕೊಳ್ಳಲಾಯಿತು.

1. 'ನೋ ಬ್ಯಾಗ್ ಡೇ' ಕಾರ್ಯಕ್ರಮವನ್ನು ಮುಖ್ಯೋಪಾಧ್ಯಾಯರು ಅಂಗೀಕರಿಸಿ, ಅನುಷ್ಠಾನಗೊಳಿಸಿದ ಶೇಕಡಾ ಪ್ರಮಾಣ: –

ಕೋಷ್ಟಕ – 6

| ಕ್ರ.ಸಂ | ಶಾಲೆಯ ಹೆಸರು ಮತ್ತು ವಿಳಾಸ | ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿದ ಕ್ರಮ– 1=ಹೌದು/ಒಪ್ಪುತ್ತೇನೆ 2=ಇಲ್ಲ/ಒಪ್ಪುವುದಿಲ್ಲ 3= ಗೊತ್ತಿಲ್ಲ/ಅಗತ್ಯವಿರಲಿಲ್ಲ | | | | | | | | |
|---|---|---|---|---|---|---|---|---|---|---|
| | | 1 | 2 | 5 | 6 | 9 | 10 | 1 | ಒಟ್ಟು | |
| 1 | ಸರ್ಕಾರಿ ಮಾದರಿ ಹಿ.ಪ್ರಾ.ಶಾಲೆ ತೀರ್ಥಹಳ್ಳಿ. | 1 | 1 | 1 | 1 | 1 | 1 | 1 | | |
| 2 | ಸಕಾರಿ ಪ್ರೌಢಶಾಲೆ, ತೂದೂರು, ತೀರ್ಥಹಳ್ಳಿ | 1 | 1 | 1 | 1 | 1 | 1 | 1 | | |
| 3 | ಸಪಪೂಕಾ(ಪ್ರೌ.ಶಾ.ವಿ) ಮಾಳೂರು, ತೀರ್ಥಹಳ್ಳಿ | 1 | 2 | 1 | 1 | 1 | 1 | – | | |
| 4 | ಸರ್ಕಾರಿ ಪ್ರೌಢಶಾಲೆ, ಕುಡುಮಲ್ಲಿಗೆ. ತೀರ್ಥಹಳ್ಳಿ. | 1 | 1 | 1 | 1 | 1 | 1 | 1 | | |
| 5 | ಸಕಾರಿ ಹಿ.ಪ್ರಾ. ಶಾಲೆ, ತೂದೂರು, ತೀರ್ಥಹಳ್ಳಿ | 1 | 1 | 1 | 1 | 1 | 1 | 1 | | |
| 6 | ಸರ್ಕಾರಿ ಹಿ.ಪ್ರಾ.ಶಾಲೆ, ಕುಡುಮಲ್ಲಿಗೆ. ತೀರ್ಥಹಳ್ಳಿ. | 1 | 1 | 2 | 1 | 1 | 1 | 1 | | |
| 7 | ಸ.ಹಿ.ಪ್ರಾ.ಶಾಲೆ ನಾರಾಯಣಪುರ, ಸವಳಂಗ. ಶಿವಮೊಗ್ಗ. | 1 | 2 | 1 | 1 | 1 | 1 | – | | |
| 8 | ಸ.ಹಿ.ಪ್ರಾ.ಶಾಲೆ ಹಿಟ್ಟೂರು. ಸವಳಂಗ. ಶಿವಮೊಗ್ಗ. | 1 | 1 | 1 | 1 | 1 | 1 | 1 | | |
| 9 | ಸ.ಹಿ.ಪ್ರಾ.ಶಾಲೆ ರಾಮನಗರ. ಶಿವಮೊಗ್ಗ. | 1 | 2 | 1 | 1 | 1 | 1 | 1 | | |
| 10 | ಶ್ರೀ ತೀರ್ಥರಾಮೇಶ್ವರ ಪ್ರೌಢಶಾಲೆ ರಾಮನಗರ, ಶಿವಮೊಗ್ಗ. | 1 | – | 2 | 1 | 1 | 1 | 1 | | |
| 11 | ಸರ್ಕಾರಿ ಹಿ.ಪ್ರಾ.ಶಾಲೆ ಮಲ್ಲಾಪುರ. ಶಿವಮೊಗ್ಗ. | 1 | 1 | 1 | 1 | 1 | 1 | 1 | | |
| 12 | ಸ.ಕಿ.ಪ್ರಾ.ಶಾಲೆ. ಭೈರನಕೊಪ್ಪ. ಶಿವಮೊಗ್ಗ. | 1 | 2 | 1 | 1 | 1 | 1 | 1 | | |
| 13 | ಸ.ಉರ್ದು.ಕಿ.ಪ್ರಾ.ಶಾಲೆ. ರಾಮನಗರ. ಶಿವಮೊಗ್ಗ. | 1 | 1 | 1 | 1 | 1 | 1 | 1 | | |
| 14 | ಸ.ಹಿ.ಪ್ರಾ.ಶಾಲೆ ಬಸವಾಪುರ. ಭದ್ರಾವತಿ. | 1 | 1 | 1 | 1 | 1 | 1 | 1 | | |

| | | | | | | | | | | |
|---|---|---|---|---|---|---|---|---|---|---|
| 15 | ಸ.ಕನ್ನಡ ಹಿ.ಪ್ರಾ.ಶಾಲೆ ಸಿರಿಯೂರು. ಭದ್ರಾವತಿ. | 1 | 1 | 1 | 1 | 1 | 1 | 1 | | |
| 16 | ಸ.ಹಿ.ಪ್ರಾ.ಶಾಲೆ. ಭಡಾರಹಳ್ಳಿ. ಭದ್ರಾವತಿ. | 1 | 1 | 1 | 1 | 1 | 1 | 1 | | |
| 17 | ಸ.ಉರ್ದು ಕಿ.ಪ್ರಾ.ಶಾಲೆ. ಭಡಾರಹಳ್ಳಿ. ಭದ್ರಾವತಿ. | 1 | 1 | 1 | 1 | 1 | 1 | 1 | | |
| 18 | ಸ.ಪ್ರೌಢಶಾಲೆ ಸನ್ಯಾಸಿಕೋಡಮಗ್ಗಿ. ಭದ್ರಾವತಿ. | 1 | 2 | 2 | 2 | 1 | 1 | 1 | | |
| 19 | ಸ.ಕಿ.ಪ್ರಾ.ಶಾಲೆ ವೀರಾಪುರ ಭದ್ರಾವತಿ. | 1 | 1 | 1 | 1 | 1 | 1 | 1 | | |
| 20 | ಸ. ಉರ್ದು.ಕಿ. ಪ್ರಾ. ಶಾಲೆ ಸನ್ಯಾಸಿಕೋಡಮಗ್ಗಿ. ಭದ್ರಾವತಿ | 1 | 1 | 1 | 1 | 1 | 1 | 1 | | |
| 21 | ಸ.ಪ.ಪೂ.ಕಾ (ಪ್ರೌ.ಶಾ.ವಿ) ಆನವೇರಿ, ಭದ್ರಾವತಿ | 1 | 1 | 1 | 1 | 1 | 1 | – | | |
| 22 | ಸ. ಹಿ. ಪ್ರಾ. ಶಾಲೆ ಸನ್ಯಾಸಿಕೋಡಮಗ್ಗಿ. ಭದ್ರಾವತಿ | 1 | 2 | 1 | 1 | 1 | 1 | 1 | | |
| 23 | ಸ. ಹಿ. ಪ್ರಾ. ಶಾಲೆ ಕಲ್ಲಹಳ್ಳಿ. ಭದ್ರಾವತಿ | 1 | 2 | 1 | 1 | 1 | 1 | 1 | | |
| 24 | ಸರ್ಕಾರಿ ಹಿ.ಪ್ರಾ.ಶಾಲೆ ಆನಂದಪುರಂ. ಸಾಗರ. | 1 | 1 | 1 | 1 | 1 | 1 | – | | |
| 25 | ಜ್ಞಾನ ಸಹ್ಯಾದ್ರಿ ಹಿ.ಪ್ರಾ.ಶಾಲೆ ಆನಂದಪುರಂ. ಸಾಗರ. | 1 | 2 | 2 | 1 | 1 | 1 | 1 | | |
| 266 | ಸರ್ಕಾರಿ ಹಿ.ಪ್ರಾ.ಶಾಲೆ ಆಚಾಪುರ. ಸಾಗರ. | 1 | 1 | 1 | 1 | 1 | 1 | 1 | | |
| 27 | ಹಾಜಿ. ಕೆ. ಎಂ. ಕೋಯಾ ಪ್ರೌಢಶಾಲೆ. ಬಿ.ಹೆಚ್.ರಸ್ತೆ ಸಾಗರ | 1 | 1 | 1 | 1 | 1 | 1 | 1 | | |
| 28 | ಸಪಪೂಕಾ(ಪ್ರೌ.ಶಾ.ವಿ) ಸಾಗರ | 1 | 2 | 1 | 1 | 1 | 1 | 1 | | |
| 29 | ಸ.ಬಾ.ಪಪೂಕಾ (ಪ್ರೌ.ಶಾ.ವಿ) ಆನಂದಪುರ, ಸಾಗರ. | 1 | 1 | 1 | 1 | 1 | 1 | 1 | | |
| 30 | ಸರ್ಕಾರಿ ಕಿ.ಪ್ರಾ.ಶಾಲೆ ಆನಂದಪುರಂ. ಸಾಗರ. | 1 | 1 | 1 | 1 | 1 | 1 | – | | |
| 31 | ಜ್ಞಾನ ಸಹ್ಯಾದ್ರಿ ಪ್ರೌಢಶಾಲೆ ಯಡೇಹಳ್ಳಿ. ಸಾಗರ. | 2 | 2 | 1 | 1 | 1 | 1 | – | | |
| 32 | ಸರ್ಕಾರಿ ಉರ್ದು ಹಿ.ಪ್ರಾ.ಶಾಲೆ ಆಚಾಪುರ. ಸಾಗರ. | 1 | 1 | 1 | 1 | 1 | 1 | 1 | | |
| 33 | ಸಾಗರ ಉರ್ದು ಹಿ.ಪ್ರಾ.ಶಾಲೆ. ಬಿ.ಹೆಚ್.ರಸ್ತೆ ಸಾಗರ | 1 | 1 | 1 | 1 | 1 | 1 | 1 | | |
| 34 | ಸಪಪೂಕಾ(ಪ್ರೌ.ಶಾ.ವಿ) ಸೊರಬ | 1 | 1 | 1 | 1 | 1 | 1 | – | | |
| 35 | ಸರ್ಕಾರಿ ಕಿ.ಪ್ರಾ.ಶಾಲೆ ಚನ್ನಾಪುರ ಸೊರಬ. | 1 | 1 | 1 | 2 | 1 | 1 | 1 | | |

| | | | | | | | | | | |
|---|---|---|---|---|---|---|---|---|---|---|
| 36 | ಶ್ರೀ ವೀರಭದ್ರೇಶ್ವರ ಗ್ರಾಮಾಂತರ ಪ್ರೌಢಶಾಲೆ ಬಿಳವಾಣಿ. ಸೊರಬ | 1 | 1 | 1 | 1 | 1 | 1 | – | | |
| 37 | ಶ್ರೀ ಉಮಾಮಹೇಶ್ವರ ಗ್ರಾಮಾಂತರ ಪ್ರೌಢಶಾಲೆ ಮಾವಲಿ. ಸೊರಬ | 1 | 1 | 1 | 1 | 2 | 1 | 1 | | |
| 38 | ಸರ್ಕಾರಿ ಹಿ.ಪ್ರಾ.ಶಾಲೆ ಮಾವಲಿ. ಸೊರಬ. | 1 | 1 | 1 | 1 | 1 | 1 | 1 | | |
| 39 | ಸರ್ಕಾರಿ ಹಿ.ಪ್ರಾ.ಶಾಲೆ ಬಿಳವಾಣಿ. ಸೊರಬ. | 1 | 1 | 1 | 1 | 1 | 1 | – | | |
| 40 | ಸರ್ಕಾರಿ ಕಿ.ಪ್ರಾ.ಶಾಲೆ ಶಿವಪುರ. ಸೊರಬ. | 1 | 1 | 1 | 1 | 1 | 1 | – | | |
| 41 | ಸರ್ಕಾರಿ ಪ್ರೌಢಶಾಲೆ, ಅರಸಾಳು, ಹೊಸನಗರ | 1 | 1 | 1 | 1 | 1 | 1 | – | | |
| 42 | ಸರ್ಕಾರಿ ಕಿ.ಪ್ರಾ.ಶಾಲೆ ಬೆನವಳ್ಳಿ. ಹೊಸನಗರ | 1 | 1 | 1 | 1 | 1 | 1 | 1 | | |
| 43 | ಸರ್ಕಾರಿ ಹಿ.ಪ್ರಾ.ಶಾಲೆ, ಅರಸಾಳು, ಹೊಸನಗರ | 1 | 1 | 1 | 1 | 1 | 1 | 1 | | |
| 44 | ಸರ್ಕಾರಿ ಕಿ.ಪ್ರಾ.ಶಾಲೆ, ಬಟಾಣಿಜೆಡ್ಡು. ಹೊಸನಗರ | 1 | 2 | 1 | 1 | 1 | 1 | 1 | | |
| 45 | ಸರ್ಕಾರಿ ಕಿ.ಪ್ರಾ.ಶಾಲೆ ಕೊಪ್ಪದಕೆರೆ. ಶಿಕಾರಿಪುರ. | 1 | 2 | 1 | 1 | 1 | 1 | 1 | | |
| 46 | ಸರ್ಕಾರಿ ಪ್ರೌಢಶಾಲೆ ಹಾರೋಗೊಪ್ಪ ಶಿಕಾರಿಪುರ. | 2 | 2 | 1 | 2 | 1 | 1 | 1 | | |
| 47 | ಸರ್ಕಾರಿ ಹಿ.ಪ್ರಾ.ಶಾಲೆ ಹಿರೇಕೊರಲಹಳ್ಳಿ. ಶಿಕಾರಿಪುರ. | 1 | 1 | 1 | 1 | 1 | 1 | – | | |
| 48 | ಡಾ॥ ರಾಜಕುಮಾರ್ ಪ್ರೌಢಶಾಲೆ ಅಂಜನಾಪುರ ಶಿಕಾರಿಪುರ. | 1 | 1 | 1 | 1 | 1 | 1 | 1 | | |
| 49 | ಸರ್ಕಾರಿ ಹಿ.ಪ್ರಾ.ಶಾಲೆ ಅಂಜನಾಪುರ. ಶಿಕಾರಿಪುರ. | 1 | 1 | 1 | 1 | 1 | 1 | 1 | | |
| 50 | ಸರ್ಕಾರಿ ಹಿ.ಪ್ರಾ.ಶಾಲೆ ಹಾರೋಗೊಪ್ಪ. ಶಿಕಾರಿಪುರ. | 1 | 1 | 1 | 1 | 1 | 1 | 1 | | |

## ಕೋಷ್ಟಕ – 6 **ವಿಶ್ಲೇಷಣೆ**

| ಪ್ರಶ್ನೆ ಸಂಖ್ಯೆ | 1 | 2 | 5 | 6 | 9 | 10 | 1 | ಒಟ್ಟು | ಶೇ. ಪ್ರಮಾಣ |
|---|---|---|---|---|---|---|---|---|---|
| ಹೌದು | 47 | 37 | 46 | 47 | 49 | 50 | 38 | | |
| ಇಲ್ಲ | 03 | 12 | 04 | 03 | 01 | – | – | | |
| ಉತ್ತರಿಸಿರುವುದಿಲ್ಲ. | – | 01 | – | – | – | – | 12 | | |
| ಒಟ್ಟು ಶೇ. ಪ್ರಮಾಣ | 94 | 74 | 92 | 94 | 98 | 100 | 76 | | 75.7 |

1. **'ನೋ ಬ್ಯಾಗ್ ಡೇ' ಕಾರ್ಯಕ್ರಮವನ್ನು ತಮ್ಮ ಶಾಲೆಯಲ್ಲಿ ಅಳವಡಿಸಿಕೊಳ್ಳಲು ಈ ಕಾರ್ಯಕ್ರಮವನ್ನು ಅಂಗೀಕರಿಸಿರುವ ಅನುಷ್ಠಾನಾಧಿಕಾರಿಗಳಾದ ಮುಖ್ಯೋಪಾಧ್ಯಾಯರನ್ನು ಗುರುತಿಸಲು** ನೀಡಿದ ಪ್ರಶ್ನಾವಳಿಯಲ್ಲಿ ಈ ಕೆಳಗಿನ ಪ್ರಶ್ನೆಗಳನ್ನು ಬಳಸಿಕೊಂಡು ಮಾಹಿತಿ ಸಂಗ್ರಹಿಸಿದೆ.

ಪ್ರಶ್ನೆ 2. 'ನೋ ಬ್ಯಾಗ್ ಡೇ' ಕಾರ್ಯಕ್ರಮವನ್ನು ಶಾಲಾ ವೇಳಾಪಟ್ಟಿಯಲ್ಲಿ ತೋರಿಸಲು ಸಾಧ್ಯವಾಗಿದೆಯೇ
ಪ್ರಶ್ನೆ 5. ಪಠ್ಯ ವಿಷಯಗಳನ್ನು 'ನೋ ಬ್ಯಾಗ್ ಡೇ' ದಿನಗಳಲ್ಲಿ ಅಳವಡಿಸಿಕೊಳ್ಳಲು ಸಾಧ್ಯವಾಗಿದೆಯೇ?
ಪ್ರಶ್ನೆ 6. 'ನೋ ಬ್ಯಾಗ್ ಡೇ' ದಿನದ ಕಾರ್ಯ ಚಟುವಟಿಕೆಗಳ ವರದಿ ನಿಮ್ಮ ಗಮನಕ್ಕೆ ತಂದಿದ್ದಾರೆಯೇ?
ಪ್ರಶ್ನೆ 9. 'ನೋ ಬ್ಯಾಗ್ ಡೇ' ಪರಿಕಲ್ಪನೆ ನಿಮಗೆ ಒಪ್ಪಿಗೆಯಾಯಿತೆ?
ಮುಕ್ತ ಅಭಿಪ್ರಾಯದ ಪ್ರಶ್ನೆ 11. ಮಗುವಿನ ಸುಪ್ತಪ್ರತಿಭೆಯ ಅನಾವರಣಕ್ಕೆ 'ನೋ ಬ್ಯಾಗ್ ಡೇ' ಒಂದು ವೇದಿಕೆ ಆಗಿದೆಯೇ? ನಿಮ್ಮ ಅನುಭವವನ್ನು ತಿಳಿಸಿರಿ.

ಈ ಪ್ರಶ್ನೆಗಳಲ್ಲಿ ಒಂದನೇ ಪ್ರಶ್ನೆಗೆ ಎಲ್ಲಾ 50 ಶಿಕ್ಷಕರಲ್ಲಿ ಒಟ್ಟು 47 ಜನ ಶಿಕ್ಷಕರು 'ಹೌದು' ಎಂದು ಉತ್ತರಿಸಿರುತ್ತಾರೆ. ತಮ್ಮ ಶಾಲೆಯ ಎಲ್ಲಾ ಶಿಕ್ಷಕರು ಈ 'ನೋ ಬ್ಯಾಗ್ ಡೇ' ಕಾರ್ಯಕ್ರಮವನ್ನು ಅಳವಡಿಸಿಕೊಂಡಿರುವುದು ತೃಪ್ತಿತಂದ ಅಂಶವಾಗಿದೆ. ಆದರೆ 03 ಜನ ಮೂಖ್ಯಶಿಕ್ಷಕರು ಮಾತ್ರ 'ಇಲ್ಲ' ಎಂದು ಉತ್ತರಿಸಿದ್ದಾರೆ. ಇನ್ನೂ ಈ ಶಾಲೆಗಳಲ್ಲಿ ನೋ ಬ್ಯಾಗ್ ಡೇ ಕಾರ್ಯಕ್ರಮವನ್ನು ಅಳವಡಿಸಿಕೊಳ್ಳಬೇಕಾಗಿದೆ.

ಎರಡನೇ ಪ್ರಶ್ನೆಗೆ ಎಲ್ಲಾ 50 ಜನ ಮುಖ್ಯಶಿಕ್ಷಕರುಗಳಲ್ಲಿ 37 ಜನ ಮುಖ್ಯೋಪಾಧ್ಯಾಯರು 'ಹೌದು' ಎಂದು ಉತ್ತರಿಸುವ ಮೂಲಕ ತಮ್ಮ ಶಾಲೆಯ ಸಾಮಾನ್ಯ ವೇಳಾಪಟ್ಟಿಯಲ್ಲಿ 'ನೋ ಬ್ಯಾಗ್ ಡೇ' ಕಾರ್ಯಕ್ರಮಕ್ಕೆ ಇಲಾಖೆ ನಿರ್ದೇಶನದಂತೆ ನಿಗದಿತವಾಗಿ ತೋರಿಸಿಕೊಂಡಿರುವುದಾಗಿ ಹೇಳಿರುತ್ತಾರೆ. ಉಳಿದಂತೆ 12 ಜನ ಮುಖ್ಯೋಪಾಧ್ಯಾಯರು 'ಇಲ್ಲ' ಎಮದು ಉತ್ತರಿಸುವ ಮೂಲಕ 'ನೋ ಬ್ಯಾಗ್ ಡೇ' ಕಾರ್ಯಕ್ರಮದ ಬಗ್ಗೆ ಅಗತ್ಯ ಸಿದ್ಧತೆಯನ್ನು ಹಾಗೂ ವೇಳಾಪಟ್ಟಿಯನ್ನು ಸಹ ಮಾಡಿಕೊಂಡಿರುವುದಿಲ್ಲ ಎಂಬ ಅಂಶ ಈ ಅಧ್ಯಯನದಿಂದ ಕಂಡುಬರುತ್ತದೆ. ಒಬ್ಬರು ಮಾತ್ರ ಯಾವುದೇ ಪ್ರತಿಕ್ರಿಯೆಯನ್ನು ನೀಡಿರುವುದಿಲ್ಲ.


ಮೂರನೇ ಪ್ರಶ್ನೆಗೆ ಒಟ್ಟು 50 ಜನ ಮುಖ್ಯಶಿಕ್ಷಕರುಗಳಲ್ಲಿ 46 ಜನ ಮುಖ್ಯಶಿಕ್ಷಕರು 'ಹೌದು' ಎಂದು ಉತ್ತರಿಸಿರುತ್ತಾರೆ, ಪಠ್ಯ ವಿಷಯಗಳನ್ನು 'ನೋ ಬ್ಯಾಗ್ ಡೇ' ಕಾರ್ಯಕ್ರಮದಲ್ಲಿ ತಮ್ಮ ಶಾಲೆಯ ಶಿಕ್ಷಕರು ಅಳವಡಿಸಿಕೊಂಡು, ತರಗತಿ ಕಲಿಕಾ ಪ್ರಕ್ರಿಯೆಗಳನ್ನು ನಡೆಸುತ್ತಿರುವ ಬಗ್ಗೆ ದೃಡಿಕರಿಸಿದ್ದಾರೆ. ಆದರೆ ಉಳಿದ 04 ಜನ ಮುಖ್ಯ ಶಿಕ್ಷಕರು 'ಇಲ್ಲ' ಎಂದು ತಮ್ಮ ಅಭಿಪ್ರಾಯವನ್ನು ತಿಳಿಸಿದ್ದಾರೆ.

ನಾಲ್ಕನೇ ಪ್ರಶ್ನೆಗೆ ಒಟ್ಟು 50 ಜನ ಮುಖ್ಯಶಿಕ್ಷಕರುಗಳಲ್ಲಿ 47 ಜನ ಮುಖ್ಯಶಿಕ್ಷಕರು 'ಹೌದು' ಎಂದು ಉತ್ತರಿಸಿರುತ್ತಾರೆ, 'ನೋ ಬ್ಯಾಗ್ ಡೇ' ದಿನದ ಕಾರ್ಯಚಟುವಟಿಕೆಗಳು ಮತ್ತು ಅದನ್ನು ನಡೆಸುತ್ತಿರುವ ಕ್ರಮ ಅದರ ಫಲಶೃತಿ ತಮ್ಮ ಗಮನಕ್ಕೆ ತರುತ್ತಿರುವುದಾಗಿ ದೃಢೀಕರಿಸಿರುತ್ತಾರೆ. ಆದರೆ ಉಳಿದ 03 ಜನ ಮುಖ್ಯ ಶಿಕ್ಷಕರು ಮಾತ್ರ 'ಇಲ್ಲ' ಎಂದು ತಮ್ಮ ಅಭಿಪ್ರಾಯವನ್ನು ತಿಳಿಸಿದ್ದಾರೆ. ಅಂದರೆ ಅವರ ಶಾಲೆಯಲ್ಲಿ ಈ ಕಾರ್ಯಕ್ರಮ ನಡೆಯುತ್ತಿಲ್ಲವೆಂಬ ಸುಳಿವನ್ನು ಇವರು ನೀಡಿದ್ದಾರೆ.

ಐದನೇ ಪ್ರಶ್ನೆಗೆ ಒಟ್ಟು 50 ಜನ ಮುಖ್ಯಶಿಕ್ಷಕರುಗಳಲ್ಲಿ 49 ಜನ ಮುಖ್ಯಶಿಕ್ಷಕರು 'ಹೌದು' ಎಂದು ಉತ್ತರಿಸಿರುತ್ತಾರೆ, 'ನೋ ಬ್ಯಾಗ್ ಡೇ' ಕಾರ್ಯಕ್ರಮದ ಬಗ್ಗೆ ತಮ್ಮಗೆ ಒಪ್ಪಿಗೆ ಇರುವುದಾಗಿ ದೃಡಿಕರಿಸಿದ್ದಾರೆ. ಆದರೆ ಉಳಿದ ಒಬ್ಬರು ಮಾತ್ರ 'ಇಲ್ಲ' ಎಂದು ತಮ್ಮ ಅಭಿಪ್ರಾಯವನ್ನು ಮುಕ್ತವಾಗಿ ತಿಳಿಸಿದ್ದಾರೆ. ಇವರಿಗೆ ನೋ ಬ್ಯಾಗ್ ಡೇ ಕಾರ್ಯಕ್ರಮದ ಉದ್ದೇಶ, ಗುರಿ, ಮಹತ್ವ ತಿಳಿದಿರುವಂತೆ ಕಾಣುವುದಿಲ್ಲ.

ಮುಕ್ತ ಅಭಿಪ್ರಾಯದ ಆರನೇ ಪ್ರಶ್ನೆಗೆ ಒಟ್ಟು 50 ಜನ ಮುಖ್ಯಶಿಕ್ಷಕರುಗಳಲ್ಲಿ 38 ಜನ ಮುಖ್ಯಶಿಕ್ಷಕರು ಸಕಾರಾತ್ಮಕ ಉತ್ತರವನ್ನು ನೀಡಿದ್ದು, ಮಕ್ಕಳಲ್ಲಿ ಅಡಗಿರುವ ಸುಪ್ತ ಪ್ರತಿಭೆಯ ಅನಾವರಣಕ್ಕೆ 'ನೋ ಬ್ಯಾಗ್ ಡೇ' ದಿನದ ಕಾರ್ಯಕ್ರಮಗಳು ಉತ್ತಮ ವೇದಿಕೆಯನ್ನು ಕಲ್ಪಿಸಿಕೊಡುತ್ತದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಆದರೆ ಉಳಿದ 12 ಜನ ಮುಖ್ಯ ಶಿಕ್ಷಕರು ಮಾತ್ರ ಯಾವುದೇ ರೀತಿಯ ಪ್ರತಿಕ್ರಿಯೆಯನ್ನು ನೀಡಿರುವುದಿಲ್ಲ. 'ನೋ ಬ್ಯಾಗ್ ಡೇ' ಕಾರ್ಯಕ್ರಮಗಳು ಆ 12 ಶಾಲೆಗಳಲ್ಲಿ ಅಳವಡಿಸಿಕೊಂಡಿರುವಂತೆ ಕಂಡುಬರುವುದಿಲ್ಲ. ಅಲ್ಲದೇ ತಮ್ಮ ಶಾಲೆಯಲ್ಲಿ ಈ ಕಾರ್ಯಕ್ರಮ ನಡೆಯುತ್ತಿಲ್ಲವೆಂಬ ಸುಳಿವನ್ನು ಸಹ ಇವರು ಈ ರೀತಿ ದೃಢೀಕರಿಸಿದ್ದಾರೆ.

ಒಟ್ಟಾರೆ ಅಂಶಗಳನ್ನು ಆಧರಿಸಿ 'ನೋ ಬ್ಯಾಗ್ ಡೇ' ಕಾರ್ಯಕ್ರಮವನ್ನು ಶಾಲೆಯಲ್ಲಿ ಮುಖ್ಯೋಪಾಧ್ಯಾಯರು ಅಂಗೀಕರಿಸಿ; ಅನುಷ್ಠಾನಗೊಳಿಸಲು ಪ್ರಯತ್ನಿಸಿದವರ ಶೇಕಡಾ ಪ್ರಮಾಣವು 75.7 % ರಷ್ಟು ಇರುವುದಾಗಿ ಕಂಡುಬಂದಿರುತ್ತದೆ.




## ವಿಶ್ಲೇಷಣೆಯ ಕೋಷ್ಟಕ – 3

ಅಧ್ಯಯನಕಾರರು ಶಾಲೆಗಳಿಗೆ ಭೇಟಿಮಾಡಿದಾಗ ಶಾಲೆಯಲ್ಲಿನ ಕಲಿಕಾ ಸ್ನೇಹಿ ವಾತಾವರಣವನ್ನು ನಿರ್ಮಿಸುವಲ್ಲಿ 'ನೋ ಬ್ಯಾಗ್ ಡೇ' ಕಾರ್ಯಕ್ರಮ ಹಾಗೂ ಅನುಷ್ಟಾನದ ಪರಿಣಾಮಕತ್ವದ ಅವಲೋಕನಕ್ಕಾಗಿ ಸಂದರ್ಶಕರ ಅವಲೋಕನಾ ಪಟ್ಟಿ ಮತ್ತು ಪ್ರಶ್ನಾವಳಿ ಆಧರಿಸಿ ಶಿಕ್ಷಕರುಗಳಿಗೆ ಮತ್ತು ವಿದ್ಯಾರ್ಥಿಗಳಿಗೆ ಕೇಳಿದಾಗ ಅವರುಗಳು ನೀಡಿದ ಅಭಿಪ್ರಾಯಗಳನ್ನು ಕ್ರೋಢೀಕರಿಸಿ ಈ ಕೆಳಕಂಡ ನಮೂನೆಯಲ್ಲಿ ನಮೂದಿಸಿಕೊಳ್ಳಲಾಯಿತು.

1. 'ನೋ ಬ್ಯಾಗ್ ಡೇ' ಕಾರ್ಯಕ್ರಮಕ್ಕೆ ಶಾಲೆಯಲ್ಲಿ ಮಾಡಿಕೊಂಡ ಸಿದ್ಧತೆ ಹಾಗೂ ಅನುಷ್ಠಾನದ' ಶೇಕಡಾ ಪ್ರಮಾಣ :

ಕೋಷ್ಟಕ – 7

| ಕ್ರ.ಸಂ | ಶಾಲೆಯ ಹೆಸರು ಮತ್ತು ವಿಳಾಸ | ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿದ ಕ್ರಮ– 1=ಹೌದು/ಒಪ್ಪುತ್ತೇನೆ 2=ಇಲ್ಲ/ಒಪ್ಪುವುದಿಲ್ಲ 3= ಗೊತ್ತಿಲ್ಲ/ಅಗತ್ಯವಿರಲಿಲ್ಲ | | | | | | | | |
|---|---|---|---|---|---|---|---|---|---|---|
| | | 1 | 2 | 3 | 4 | 5 | 6 | 7 | ಒಟ್ಟು | |
| 1 | ಸರ್ಕಾರಿ ಮಾದರಿ ಹಿ.ಪ್ರಾ.ಶಾಲೆ ತೀರ್ಥಹಳ್ಳಿ. | 2 | 2 | 2 | 2 | – | 2 | – | | |
| 2 | ಸಕಾರಿ ಪ್ರೌಢಶಾಲೆ, ತೂದೂರು, ತೀರ್ಥಹಳ್ಳಿ | 1 | 1 | 1 | 1 | 1 | 1 | 1 | | |

| | | | | | | | | | | |
|---|---|---|---|---|---|---|---|---|---|---|
| 3 | ಸಪಪೂಕಾ(ಪ್ರೌ.ಶಾ.ವಿ) ಮಾಳೂರು, ತೀರ್ಥಹಳ್ಳಿ | 2 | 2 | 2 | 2 | – | 2 | – | | |
| 4 | ಸರ್ಕಾರಿ ಪ್ರೌಢಶಾಲೆ, ಕುಡುಮಲ್ಲಿಗೆ. ತೀರ್ಥಹಳ್ಳಿ. | 1 | 1 | 1 | 1 | 1 | 1 | 1 | | |
| 5 | ಸಕಾರಿ ಹಿ.ಪ್ರಾ. ಶಾಲೆ, ತೂದೂರು, ತೀರ್ಥಹಳ್ಳಿ | 2 | 2 | 2 | 2 | – | 2 | – | | |
| 6 | ಸರ್ಕಾರಿ ಹಿ.ಪ್ರಾ.ಶಾಲೆ, ಕುಡುಮಲ್ಲಿಗೆ. ತೀರ್ಥಹಳ್ಳಿ. | 2 | 2 | 2 | 2 | – | 2 | – | | |
| 7 | ಸ.ಹಿ.ಪ್ರಾ.ಶಾಲೆ ನಾರಾಯಣಪುರ, ಸವಳಂಗ. ಶಿವಮೊಗ್ಗ. | 2 | 2 | 1 | 1 | – | – | – | | |
| 8 | ಸ.ಹಿ.ಪ್ರಾ.ಶಾಲೆ ಹಿಟ್ಟೂರು. ಸವಳಂಗ. ಶಿವಮೊಗ್ಗ. | 1 | 1 | 1 | 1 | 1 | 1 | 1 | | |
| 9 | ಸ.ಹಿ.ಪ್ರಾ.ಶಾಲೆ ರಾಮನಗರ. ಶಿವಮೊಗ್ಗ. | 2 | 2 | 2 | 2 | – | 2 | – | | |
| 10 | ಶ್ರೀ ತೀರ್ಥರಾಮೇಶ್ವರ ಪ್ರೌಢಶಾಲೆ ರಾಮನಗರ, ಶಿವಮೊಗ್ಗ. | 2 | 2 | 2 | 2 | – | 2 | – | | |
| 11 | ಸರ್ಕಾರಿ ಹಿ.ಪ್ರಾ.ಶಾಲೆ ಮಲ್ಲಾಪುರ. ಶಿವಮೊಗ್ಗ. | 2 | 2 | 2 | 2 | – | 2 | – | | |
| 12 | ಸ.ಕಿ.ಪ್ರಾ.ಶಾಲೆ. ಭೈರನಕೊಪ್ಪ. ಶಿವಮೊಗ್ಗ. | 2 | 1 | 1 | 1 | 1 | – | – | | |
| 13 | ಸ.ಉರ್ದು.ಕಿ.ಪ್ರಾ.ಶಾಲೆ. ರಾಮನಗರ. ಶಿವಮೊಗ್ಗ. | 2 | 1 | 1 | 1 | – | – | – | | |
| 14 | ಸ.ಹಿ.ಪ್ರಾ.ಶಾಲೆ ಬಸವಾಪುರ. ಭದ್ರಾವತಿ. | 2 | 2 | 2 | 2 | – | 2 | – | | |
| 15 | ಸ.ಕನ್ನಡ ಹಿ.ಪ್ರಾ.ಶಾಲೆ ಸಿರಿಯೂರು. ಭದ್ರಾವತಿ. | 1 | 1 | 1 | 1 | – | 1 | 1 | | |
| 16 | ಸ.ಹಿ.ಪ್ರಾ.ಶಾಲೆ. ಭಡಾರಹಳ್ಳಿ. ಭದ್ರಾವತಿ. | 2 | 2 | 2 | 1 | 1 | 1 | – | | |
| 17 | ಸ.ಉರ್ದು ಕಿ.ಪ್ರಾ.ಶಾಲೆ. ಭಡಾರಹಳ್ಳಿ. ಭದ್ರಾವತಿ. | 1 | 1 | 1 | 1 | 1 | – | – | | |
| 18 | ಸ.ಪ್ರೌಢಶಾಲೆ ಸನ್ಯಾಸಿಕೋಡಮಗ್ಗಿ. ಭದ್ರಾವತಿ. | 1 | 1 | 1 | 1 | 1 | 1 | 1 | | |
| 19 | ಸ.ಕಿ.ಪ್ರಾ.ಶಾಲೆ ವೀರಾಪುರ ಭದ್ರಾವತಿ. | 1 | 1 | 1 | 1 | 1 | 1 | 1 | | |
| 20 | ಸ. ಉರ್ದು.ಕಿ. ಪ್ರಾ. ಶಾಲೆ ಸನ್ಯಾಸಿಕೋಡಮಗ್ಗಿ. ಭದ್ರಾವತಿ | 2 | 2 | 2 | 2 | – | 2 | – | | |
| 21 | ಸ.ಪ.ಪೂ.ಕಾ (ಪ್ರೌ.ಶಾ.ವಿ) ಆನವೇರಿ, ಭದ್ರಾವತಿ | 2 | 2 | 2 | 2 | – | 2 | – | | |
| 22 | ಸ. ಹಿ. ಪ್ರಾ. ಶಾಲೆ ಸನ್ಯಾಸಿಕೋಡಮಗ್ಗಿ. ಭದ್ರಾವತಿ | 2 | 2 | 2 | 2 | – | 2 | – | | |
| 23 | ಸ. ಹಿ. ಪ್ರಾ. ಶಾಲೆ ಕಲ್ಲಹಳ್ಳಿ. ಭದ್ರಾವತಿ | 2 | 2 | 2 | 2 | – | 2 | – | | |

| | | | | | | | | | | |
|---|---|---|---|---|---|---|---|---|---|---|
| 24 | ಸರ್ಕಾರಿ ಹಿ.ಪ್ರಾ.ಶಾಲೆ ಆನಂದಪುರಂ. ಸಾಗರ. | 2 | 2 | 2 | 2 | – | 2 | – | | |
| 25 | ಜ್ಞಾನ ಸಹ್ಯಾದ್ರಿ ಹಿ.ಪ್ರಾ.ಶಾಲೆ ಆನಂದಪುರಂ. ಸಾಗರ. | 2 | 2 | 2 | 2 | – | 2 | – | | |
| 266 | ಸರ್ಕಾರಿ ಹಿ.ಪ್ರಾ.ಶಾಲೆ ಆಚಾಪುರ. ಸಾಗರ. | 1 | 1 | 1 | 1 | 1 | 1 | 1 | | |
| 27 | ಹಾಜಿ. ಕೆ. ಎಂ. ಕೋಯಾ ಪ್ರೌಢಶಾಲೆ. ಬಿ.ಹೆಚ್.ರಸ್ತೆ ಸಾಗರ | 1 | 1 | 1 | 1 | 1 | 1 | 1 | | |
| 28 | ಸಪಪೂಕಾ(ಪ್ರೌ.ಶಾ.ವಿ) ಸಾಗರ | 2 | 2 | 2 | 2 | – | 2 | – | | |
| 29 | ಸ.ಬಾ.ಪಪೂಕಾ (ಪ್ರೌ.ಶಾ.ವಿ) ಆನಂದಪುರ, ಸಾಗರ. | 2 | 2 | 2 | 2 | – | 2 | – | | |
| 30 | ಸರ್ಕಾರಿ ಕಿ.ಪ್ರಾ.ಶಾಲೆ ಆನಂದಪುರಂ. ಸಾಗರ. | 2 | 2 | 2 | 2 | – | 2 | – | | |
| 31 | ಜ್ಞಾನ ಸಹ್ಯಾದ್ರಿ ಪ್ರೌಢಶಾಲೆ ಯಡೇಹಳ್ಳಿ. ಸಾಗರ. | 2 | 2 | 2 | 2 | – | 2 | – | | |
| 32 | ಸರ್ಕಾರಿ ಉರ್ದು ಹಿ.ಪ್ರಾ.ಶಾಲೆ ಆಚಾಪುರ. ಸಾಗರ. | 2 | 2 | 2 | 2 | – | 2 | – | | |
| 33 | ಸಾಗರ ಉರ್ದು ಹಿ.ಪ್ರಾ.ಶಾಲೆ. ಬಿ.ಹೆಚ್.ರಸ್ತೆ ಸಾಗರ | 1 | 1 | 1 | 1 | 1 | – | – | | |
| 34 | ಸಪಪೂಕಾ(ಪ್ರೌ.ಶಾ.ವಿ) ಸೊರಬ | 2 | 2 | 2 | 2 | – | 2 | – | | |
| 35 | ಸರ್ಕಾರಿ ಕಿ.ಪ್ರಾ.ಶಾಲೆ ಚನ್ನಾಪುರ ಸೊರಬ. | 1 | 1 | 1 | 1 | 1 | 1 | 1 | | |
| 36 | ಶ್ರೀ ವೀರಭದ್ರೇಶ್ವರ ಗ್ರಾಮಾಂತರ ಪ್ರೌಢಶಾಲೆ ಬಿಳವಾಣಿ. ಸೊರಬ | 2 | 2 | 2 | 2 | – | 2 | – | | |
| 37 | ಶ್ರೀ ಉಮಾಮಹೇಶ್ವರ ಗ್ರಾಮಾಂತರ ಪ್ರೌಢಶಾಲೆ ಮಾವಲಿ. ಸೊರಬ | 2 | 2 | 2 | 2 | – | 2 | – | | |
| 38 | ಸರ್ಕಾರಿ ಹಿ.ಪ್ರಾ.ಶಾಲೆ ಮಾವಲಿ. ಸೊರಬ. | 1 | 1 | 1 | 1 | 1 | 2 | 1 | | |
| 39 | ಸರ್ಕಾರಿ ಹಿ.ಪ್ರಾ.ಶಾಲೆ ಬಿಳವಾಣಿ. ಸೊರಬ. | 1 | 1 | 1 | 1 | 1 | 1 | 1 | | |
| 40 | ಸರ್ಕಾರಿ ಕಿ.ಪ್ರಾ.ಶಾಲೆ ಶಿವಪುರ. ಸೊರಬ. | 1 | 1 | 1 | 1 | 1 | 1 | 1 | | |
| 41 | ಸರ್ಕಾರಿ ಪ್ರೌಢಶಾಲೆ, ಅರಸಾಳು, ಹೊಸನಗರ | 2 | 2 | 2 | 2 | – | 2 | – | | |
| 42 | ಸರ್ಕಾರಿ ಕಿ.ಪ್ರಾ.ಶಾಲೆ ಬೆನವಳ್ಳಿ. ಹೊಸನಗರ | 2 | 2 | 2 | 2 | – | 2 | – | | |
| 43 | ಸರ್ಕಾರಿ ಹಿ.ಪ್ರಾ.ಶಾಲೆ, ಅರಸಾಳು, ಹೊಸನಗರ | – | 1 | 1 | 1 | 1 | – | – | | |

| | | | | | | | | | | |
|---|---|---|---|---|---|---|---|---|---|---|
| 44 | ಸರ್ಕಾರಿ ಕಿ.ಪ್ರಾ.ಶಾಲೆ, ಬಟಾಣಿಜೆಡ್ಡು. ಹೊಸನಗರ | 2 | 2 | 2 | 2 | – | 2 | – | | |
| 45 | ಸರ್ಕಾರಿ ಕಿ.ಪ್ರಾ.ಶಾಲೆ ಕೊಪ್ಪದಕೆರೆ. ಶಿಕಾರಿಪುರ. | 2 | 2 | 2 | 2 | – | 2 | – | | |
| 46 | ಸರ್ಕಾರಿ ಪ್ರೌಢಶಾಲೆ ಹಾರೋಗೊಪ್ಪ ಶಿಕಾರಿಪುರ. | 2 | 2 | 2 | 2 | – | 2 | – | | |
| 47 | ಸರ್ಕಾರಿ ಹಿ.ಪ್ರಾ.ಶಾಲೆ ಹಿರೇಕೊರಲಹಳ್ಳಿ. ಶಿಕಾರಿಪುರ. | 2 | 2 | 2 | 2 | – | 2 | – | | |
| 48 | ಡಾ॥ ರಾಜಕುಮಾರ್ ಪ್ರೌಢಶಾಲೆ ಅಂಜನಾಪುರ ಶಿಕಾರಿಪುರ. | 2 | 2 | 2 | 2 | – | 2 | – | | |
| 49 | ಸರ್ಕಾರಿ ಹಿ.ಪ್ರಾ.ಶಾಲೆ ಅಂಜನಾಪುರ. ಶಿಕಾರಿಪುರ. | 2 | 2 | 2 | 2 | – | 2 | – | | |
| 50 | ಸರ್ಕಾರಿ ಹಿ.ಪ್ರಾ.ಶಾಲೆ ಹಾರೋಗೊಪ್ಪ. ಶಿಕಾರಿಪುರ. | 2 | 2 | 2 | 2 | – | 2 | – | | |

## ಕೋಷ್ಟಕ – 7 **ವಿಶ್ಲೇಷಣೆ**

| ಪ್ರಶ್ನೆ ಸಂಖ್ಯೆ | 1 | 2 | 3 | 4 | 5 | 6 | 7 | ಒಟ್ಟು | ಶೇ. ಪ್ರಮಾಣ |
|---|---|---|---|---|---|---|---|---|---|
| ಹೌದು | 12 | 16 | 16 | 18 | 14 | 11 | 09 | | |
| ಇಲ್ಲ | 37 | 34 | 34 | 32 | – | – | – | | |
| ಉತ್ತರಿಸಿರುವುದಿಲ್ಲ. | 01 | – | – | – | 36 | 39 | 41 | | |
| ಒಟ್ಟು ಶೇ. ಪ್ರಮಾಣ | 24 | 32 | 32 | 36 | 28 | 22 | 18 | | 27.4% |

'ನೋ ಬ್ಯಾಗ್ ಡೇ' ಕಾರ್ಯಕ್ರಮವನ್ನು ಶಿಕ್ಷಕರು ಹಾಗೂ ಅನುಷ್ಠಾನಾಧಿಕಾರಿಗಳು ಅಂಗೀಕರಿಸಿದ ರೀತಿ' ಯನ್ನು ಗುರುತಿಸಲು ಸಂದರ್ಶನಕಾರರ ಅವಲೋಕನ ಪಟ್ಟಿಯನ್ನು ಆಧರಿಸಿ ಶಿಕ್ಷಕರುಗಳು ಮತ್ತು ವಿದ್ಯಾರ್ಥಿಗಳ ಅಭಿಪ್ರಾಯವನ್ನು ಸಂಗ್ರಹಿಸಲು ನೀಡಿದ ಪ್ರಶ್ನಾವಳಿಯಲ್ಲಿ ಈ ಕೆಳಗಿನ ಪ್ರಶ್ನೆಗಳನ್ನು ಬಳಸಿಕೊಂಡು ಮಾಹಿತಿ ಸಂಗ್ರಹಿಸಿದೆ.

1. ಶಾಲೆಯ ಸಾಮಾನ್ಯ ವೇಳಾಪಟ್ಟಿಯಲ್ಲಿ 'ನೋ ಬ್ಯಾಗ್ ಡೇ'ದಿನವನ್ನು ಅಳವಡಿಸಿಕೊಂಡಿದ್ದಾರೆಯೇ?
2. 'ನೋ ಬ್ಯಾಗ್ ಡೇ' ಕಲಿಕಾ ಪ್ರಕ್ರಿಯೆಯ ಯೋಜನಾವಹಿ ತಯಾರಿಸಿದ್ದಾರೆಯೇ?
3. 'ನೋ ಬ್ಯಾಗ್ ಡೇ' ಕಾರ್ಯಾ ಚಟುವಟಿಕೆಗಳ ವರದಿಯನ್ನು ದಾಖಲಿಸಿದ್ದಾರೆಯೇ?

4. ‘ನೋ ಬ್ಯಾಗ್ ಡೇ’ ಕಾರ್ಯಾಕ್ರಮದಲ್ಲಿ ಅಳವಡಿಸಬಹುದಾದ ಚಟುವಟಿಕೆಗಳ ಪಟ್ಟಿಯನ್ನು ತಯಾರಿಸಿದ್ದಾರೆಯೇ?

5. ‘ನೋ ಬ್ಯಾಗ್ ಡೇ’ ದಿನ ನಡೆಸಿದ ಚಟುವಟಿಕೆಗಳ ಬಗ್ಗೆ ಸಹ ಶಿಕ್ಷಕರ ಅಭಿಪ್ರಾಯ.

6. ‘ನೋ ಬ್ಯಾಗ್ ಡೇ’ ದಿನ ನೀವು ಶಾಲೆಗೆ ಶಾಲಾ ಬ್ಯಾಗ್ ಮತ್ತು ಪಠ್ಯಪುಸ್ತಕಗಳನ್ನು ತೆಗೆದುಕೊಂಡು ಬರುತ್ತೀರಾ?

7. ‘ನೋ ಬ್ಯಾಗ್ ಡೇ’ ದಿನ ನಡೆಸುತ್ತಿರುವ ವಿವಿಧ ವಿಷಯಗಳಲ್ಲಿ ನಡೆಸುತ್ತಿರುವ ಚಟುವಟಿಕೆಗಳ ಬಗ್ಗೆ ಮಕ್ಕಳ ಅಭಿಪ್ರಾಯ.

ಸಂದರ್ಶಕರಾಗಿ ಶಾಲೆಗಳಿಗೆ ಬೇಟಿಮಾಡಿ ‘ನೋ ಬ್ಯಾಗ್ ಡೇ’ ಕಾರ್ಯಕ್ರಮ ಅನುಷ್ಟಾನದ ಸಿದ್ದತೆಗಳು ಮತ್ತು ದಾಖಲೆಗಳನ್ನು ಪರಿಶೀಲಿಸಿದಾಗ ಕಂಡುಬಂದ ನೈಜ ಸಂಗತಿಗಳು ಮತ್ತು ಸಹಶಿಕ್ಷಕರುಗಲಿಗೆ ಹಾಗೂ ಮಕ್ಕಳಿಗೆ ಕೇಳಿದ ಪ್ರಶ್ನೆಗಳಿಗೆ ಬಂದ ಉತ್ತರ ಆಧರಿಸಿ ಈ ರೀತಿ ವಿಮರ್ಶಿಸಲಾಗಿದೆ.

ಒಂದನೇ ಪ್ರಶ್ನೆಗೆ ಒಟ್ಟು 50 ಶಾಲೆಗಳಲ್ಲಿ ಕೇವಲ 12 ಶಾಲೆಗಳಲ್ಲಿ ಮಾತ್ರ ‘ಹೌದು’ ಎಂಬ ಉತ್ತರ ದಾಖಲಾಗಿರುತ್ತದೆ. ಈ ಶಾಲೆಗಳಲ್ಲಿ ಮಾತ್ರ ಸಾಮಾನ್ಯ ವೇಳಾಪಟ್ಟಿಯಲ್ಲಿ ‘ನೋ ಬ್ಯಾಗ್ ಡೇ’ ದಿನವನ್ನು ಅಳವಡಿಸಿಕೊಂಡಿದ್ದಾರೆ. ಉಳಿದ 38 ಶಾಲೆಗಳ ವೇಳಾಪಟ್ಟಿಯಲ್ಲಿ ಅಳವಡಿಸಿಕೊಂಡಿರುವುದಿಲ್ಲ.

ಎರಡನೇ ಪ್ರಶ್ನೆಗೆ ಒಟ್ಟು 50 ಶಾಲೆಗಳಲ್ಲಿ ಕೇವಲ 16 ಶಾಲೆಗಳಲ್ಲಿ ಮಾತ್ರ ‘ಹೌದು’ ಎಂಬ ಉತ್ತರ ದಾಖಲಾಗಿದ್ದು; ಈ ಶಾಲೆಗಳಲ್ಲಿ ಮಾತ್ರ ನೋ ಬ್ಯಗ್ ಡೇ ದಿನದ ಕಲಿಕಾ ಯೋಜನಾ ವಹಿಯನ್ನು ತಯಾರಿಸಿರುವುದು ಕಂಡುಬಂದಿರುತ್ತದೆ. ಉಳಿದ 34 ಶಾಲೆಗಳಲ್ಲಿ ಯಾವುದೇ ಯೋಜನಾ ವಹಿ ತಯಾರಿಸಿಕೊಂಡಿರುವ ಬಗ್ಗೆ ಮಾಹಿತಿ ಲಭ್ಯವಾಗಿರುವುದಿಲ್ಲ.

ಮೂರನೇ ಪ್ರಶ್ನೆಗೆ ಒಟ್ಟು 50 ಶಾಲೆಗಳಲ್ಲಿ ಕೇವಲ 16 ಶಾಲೆಗಳಲ್ಲಿ ಮಾತ್ರ ‘ಹೌದು’ ಎಂಬ ಉತ್ತರ ನೀಡುವ ಮೂಲಕ ಅಗತ್ಯ ದಾಖಲೆಗಳನ್ನು ನಿವಹಿಸಿದ್ದಾರೆ. ಉಳಿದ 34 ಶಾಲೆಗಳಲ್ಲಿ ನೋ ಬ್ಯಾಗ್ ಡೇ ಕಾರ್ಯಕ್ರಮದಲ್ಲಿನ ಚಟುವಟಿಕೆಗಳ ಯಾವರೀತಿ ವರದಿಗಳು ಸಹ ಇರುವುದಿಲ್ಲ.


ನಾಲ್ಕನೇ ಪ್ರಶ್ನೆಗೆ ಒಟ್ಟು 50 ಶಾಲೆಗಳಲ್ಲಿ ಕೇವಲ 18 ಶಾಲೆಗಳಲ್ಲಿ ಮಾತ್ರ ‘ಹೌದು’ ಎಂಬ ಉತ್ತರ ದಾಖಲಾಗಿದ್ದು; ಈ ಶಾಲೆಗಳಲ್ಲಿ ಮಾತ್ರ ನೋ ಬ್ಯಾಗ್ ಡೇ ದಿನದಲ್ಲಿ ನಡೆಸಬಹುದಾದ ವಿಷಯವಾರು ಕಲಿಕಾ ಚಟುವಟಿಕೆಗಳ ಪಟ್ಟಿಯನ್ನು ತಯಾರಿಸಿರುವುದು ಕಂಡುಬಂದಿರುತ್ತದೆ. ಉಳಿದ 32 ಶಾಲೆಗಳಲ್ಲಿ ಯಾವುದೇ ವಿಷಯವಾರು ಚಟುವಟಿಕೆಗಳ ಬಗ್ಗೆ ಮಾಹಿತಿ ಲಭ್ಯವಾಗಿರುವುದಿಲ್ಲ.

ಮುಕ್ತ ಅಭಿಪ್ರಾಯದ ಐದನೇ ಪ್ರಶ್ನೆಗೆ ಒಟ್ಟು 50 ಶಾಲೆಗಳಲ್ಲಿ ಕೇವಲ 14 ಶಾಲೆಗಳಲ್ಲಿ ಮಾತ್ರ ಸಹಶಿಕ್ಷಕರು ಪೂರಕವಾದ ಉತ್ತರವನ್ನು ದಾಖಲಿಸಿದ್ದು, ನೋ ಬ್ಯಾಗ್ ಡೇ ಕರ್ಯಕ್ರಮದ ಬಗ್ಗೆ ಉತ್ತಮ ಅಭಿಪ್ರಾಯವನ್ನು ನಿಡಿರುತ್ತಾರೆ. ಉಳಿದ 36 ಶಾಲೆಗಳಲ್ಲಿ ಸಹ ಶಿಕ್ಷಕರು ನೋ ಬ್ಯಾಗ್ ಡೇ ಕಾರ್ಯಕ್ರಮದಲ್ಲಿನ ಚಟುವಟಿಕೆಗಳ ಕುರಿತು ಮಾವುದೇ ಸ್ಪಷ್ಟ ಮಾಹಿತಿಯನ್ನು ನೀಡಿರುವುದಿಲ್ಲ.

ಆರನೇ ಪ್ರಶ್ನೆಗೆ ಒಟ್ಟು 50 ಶಾಲೆಗಳಲ್ಲಿ ಕೇವಲ 11 ಶಾಲೆಗಳಲ್ಲಿ ಮಾತ್ರ 'ಹೌದು' ಎಂಬ ಉತ್ತರ ದಾಖಲಾಗಿದ್ದು; ಈ ಶಾಲೆಗಳಲ್ಲಿ ಮಾತ್ರ ನೋ ಬ್ಯಾಗ್ ಡೇ ದಿನದಲ್ಲಿ ಮಕ್ಕಳು ಪಠ್ಯಪುಸ್ತಕಗಳನ್ನು ಮತ್ತು ಶಾಲಾ ಬ್ಯಾಗ್ ತರುವುದಿಲ್ಲವೆಂದು ದೃಢೀಕರಿಸಿರುತ್ತಾರೆ. ಉಳಿದಂತೆ 39 ಶಾಲೆಗಳಲ್ಲಿ ಮಕ್ಕಳು ಪ್ರತೀ ದಿನವೂ ಪಠ್ಯಪುಸ್ತಕಗಳನ್ನು ಮತ್ತು ಶಾಲಾ ಬ್ಯಾಗ್ ಅನ್ನು ತರುತ್ತಿರುವುದಾಗಿ ತಿಳಿಸಿರುತ್ತಾರೆ.

ಮುಕ್ತ ಅಭಿಪ್ರಾಯದ ಮಕ್ಕಳ ಪ್ರಶ್ನೆಗೆ ಒಟ್ಟು 50 ಶಾಲೆಗಳಲ್ಲಿ ಕೇವಲ 09 ಶಾಲೆಗಳಲ್ಲಿ ಮಾತ್ರ ವಿದ್ಯಾರ್ಥಿಗಳು ಪೂರಕವಾಗಿ ಉತ್ತರಿಸಿದ್ದು, ನೋ ಬ್ಯಾಗ್ ಡೇ ದಿನದಲ್ಲಿ ನಡೆಸುತ್ತಿರುವ ಚಟುವಟಿಕೆಗಳ ವಿವರವನ್ನು ನೀಡಿರುತ್ತಾರೆ ಆದರೆ ಉಳಿದ 41 ಶಾಲೆಗಳಲ್ಲಿ ಮಕ್ಕಳು ನೋ ಬ್ಯಾಗ್ ಡೇ ದಿನದ ಕಲಿಕಾ ಚಟುವಟಿಕೆಗಳ ಬಗ್ಗೆ ಯಾವುದೇ ಪ್ರತಿಕ್ರಿಯೆ ನೀಡಿರುವುದಿಲ್ಲ.

ಒಟ್ಟಾರೆ ಶಿವಮೊಗ್ಗಾ ಜಿಲ್ಲೆಯಾದ್ಯಂತ ಅನುಷ್ಠಾನಗೊಂಡಿರುವ ನೋ ಬ್ಯಾಗ್ ಡೇ ಕಾರ್ಯಕ್ರಮದ ಅಧ್ಯಯನದ ಉದ್ದೇಶದಿಂದ ಶಾಲೆಗಳಿಗೆ ಭೇಟಿ ಮಾಡಿದ ಸಂದರ್ಶಕರಿಗೆ ಕಂಡುಬಂದ ಸಂಗತಿಗಳನ್ನು ವಿಶ್ಲೇಷಿಸಿದಾಗ, ಈ ಕಾರ್ಯಕ್ರಮದ ಸಿದ್ದತೆ ಹಗೂ ಅನುಷ್ಠಾನದ ಶೇಕಡಾ ಪ್ರಮಾಣವು 27.4 ರಷ್ಟು ಇರುವುದಾಗಿ ಕಂಡುಬಂದಿರುತ್ತದೆ.



## ಅಧ್ಯಯನದ ಫಲಿತಾಂಶ ಹಾಗೂ ತತ್ಸಂಬಂಧಿತ ಚರ್ಚೆ

ಶಾಲಾಮಕ್ಕಳ ಹೊರೆಯನ್ನು ಕಡಿಮೆಗೊಳಿಸುವ ಹಾಗೂ ವಾರದಲ್ಲಿ ಒಂದು ದಿನವನ್ನು 'ಸೃಜನಾತ್ಮಕ ದಿನ' ವನ್ನಾಗಿಸುವ ಉದ್ದೇಶದಿಂದ ಇಲಾಖೆ 'ನೋ ಬ್ಯಾಗ್ ಡೇ' ಕಾರ್ಯಕ್ರಮವನ್ನು ಜಾರಿಗೆ ತಂದಿದೆ ಆದರೆ ಸರ್ಕಾರದ ಯೋಜನೆಗಳು ಸಾಕಾರಗೊಳ್ಳುವುದು ಅದನ್ನು ಶಾಲೆಗಳಲ್ಲಿ ಅಳವಡಿಸಿಕೊಂಡು ಅನುಷ್ಠಾನಗೊಳಿಸಿದಾಗ ಮಾತ್ರ ಸಾಧ್ಯ ಎಂಬ ಮಾತು ಎಲ್ಲರೂ ಒಪ್ಪುವಂತಹದು. ಈ ನೋ ಬ್ಯಾಗ್ ಡೇ ಮೂಲಕ ಪಠ್ಯಪುಸ್ತಕ ಮತ್ತು ಶಾಲಾ ಬ್ಯಾಗ್ ಇಲ್ಲದೆಯೆ ಕಲಿಕಾ ಪ್ರಕ್ರಿಯೆಯಲ್ಲಿ ಮಕ್ಕಳನ್ನು ತೊಡಗಿಸುವ ತಂತ್ರಗಾರಿಕೆಯನ್ನು ಪರಿಚಯಿಸಲಾಗುತ್ತದೆ. ಸ್ವ ಕಲಿಕೆ ಮತ್ತು ಸಹವರ್ತಿ ಕಲಿಕೆಯ ತರಗತಿ ನಿರ್ವಹಣೆಯ ಬಗ್ಗೆ ವಿಶೇಷವಾಗಿ ಗಮನಹರಿಸಲಾಗಿದೆ. ಪಠ್ಯಪುಸ್ತಕದ ಹೊರತಾಗಿಯೂ ಕಲಿಕೆಯ ಉದ್ದೇಶ ಮತ್ತು ಸ್ವರೂಪವನ್ನು ಆಧರಿಸಿ ತರಗತಿಗಳನ್ನು ನಡೆಸಲು ಆದ್ಯತೆ ನೀಡಲಾಗಿದೆ. ಪ್ರಸ್ತುತ ಒಂದನೇ ತರಗತಿಯಿಂದ ಹತ್ತನೇ ತರಗತಿಯ ಭಾಷೆಗಳು, ಗಣಿತ, ವಿಜ್ಞಾನ, ಪರಿಸರ ಅಧ್ಯಯನ ಮತ್ತು ಸಮಾಜ ವಿಜ್ಞಾನ ಪಠ್ಯ ಪುಸ್ತಕಗಳಲ್ಲಿರುವ ಪ್ರಮುಖ ಅಂಶಗಳನ್ನು ಆಧರಿಸಿ, ಕಲಿಕಾ ಚಟುವಟಿಕೆಗಳನ್ನು ವೈಶಿಷ್ಟ್ಯಪೂರ್ಣವಾಗಿ ನಡೆಸಲಾಗುತ್ತದೆ. ಈ ನೋ ಬ್ಯಾಗ್ ಡೇ ಕಾರ್ಯಕ್ರಮದ ಅನುಷ್ಠಾನವನ್ನು ತಿಳಿದುಕೊಳ್ಳುವ ಉದ್ದೇಶದಿಂದ ಕೈಗೊಂಡ ಈ ಅಧ್ಯಯನವು. ಪ್ರಶ್ನಾವಳಿಗಳಲ್ಲಿರುವ ಪ್ರಶ್ನೆಗಳಿಗೆ ಅವರು ನೀಡಿರುವ ಉತ್ತರಗಳನ್ನು ವಿವಿಧ ದೃಷ್ಟಿಕೋನಗಳಲ್ಲಿ ಈ ಕೆಳಗಿನಂತೆ ವಿಶ್ಲೇಷಿಸಲಾಗಿದೆ.

ಅಧ್ಯಯನದಲ್ಲಿ ಒಟ್ಟು ಮೂರು ಪ್ರಧಾನ ನಿಹಿತಾರ್ಥಗಳನ್ನು ಅಳವಡಿಸಿಕೊಂಡಿದ್ದು, ಅವುಗಳನ್ನು ಆಧರಿಸಿ ಶಿಕ್ಷಕರುಗಳ ಅಧ್ಯಯನವನ್ನು ನಡೆಸಲಾಯಿತು. ಇದರಲ್ಲಿ ಶಿಕ್ಷಕರುಗಳಿಗೆ ಒಂದು ಪ್ರಶ್ನಾವಳಿ, ಮುಖ್ಯಶಿಕ್ಷಕರುಗಳಿಗೆ ಒಂದು ಪ್ರಶ್ನಾವಳಿ ಹಾಗೂ ವಿದ್ಯಾರ್ಥಿಗಳಿಗೆ ಒಂದು ಪ್ರಶ್ನಾವಳಿಗಳನ್ನು ನೀಡಲಾಯಿತು. ಅವುಗಳನ್ನು ಆಧರಿಸಿ, ಮಾಹಿತಿಗಳನ್ನು ದಾಖಲಿಸಿ, ವಿಶ್ಲೇಃಣೆಗೆ ಒಳಪಡಿಸಿ ಈ ಕೆಳಗಿನಂತೆ ಕ್ರೂಢೀಕರಿಸಲಾಯಿತು.

**ನಿಹಿತಾರ್ಥ :** 1. 'ನೋ ಬ್ಯಾಗ್ ಡೇ' ಕಾರ್ಯಕ್ರಮದ ಪರಿಕಲ್ಪನೆಯನ್ನು ಅರ್ಥೈಸಿಕೊಂಡಿರುವ ರೀತಿ

2. ಶಾಲಾ ಮಕ್ಕಳ ಪಠ್ಯಪುಸ್ತಕದ ಹೊರೆಯನ್ನ ಒಂದು ದಿನದಮಟ್ಟಿಗಾದರೂ ಕಡಿಮೆಗೊಳಿಸುವ ಹಾಗೂ ಕಲಿಕಾ ಸ್ನೇಹಿ ವಾತಾವರಣವನ್ನು ನಿರ್ಮಾಣಮಾಡುವಲ್ಲಿ ಶಿಕ್ಷಕರುಗಳ ಹಾಗೂ ಮುಖ್ಯಶಿಕ್ಷರುಗಳ ಸಹಭಾಗಿತ್ವ.

3. ಶಾಲೆಗಳಲ್ಲಿ 'ನೋ ಬ್ಯಾಗ್ ಡೇ' ಕಾರ್ಯಕ್ರಮವು ಅನುಷ್ಠಾನಗೊಂಡ ರೀತಿ.

## ಅಧ್ಯಯನದ ವಿಶ್ಲೇಷಣೆಯ ಮುಖ್ಯಾಂಶಗಳು :

* 'ನೋ ಬ್ಯಾಗ್ ಡೇ' ಕಾರ್ಯಕ್ರಮದ ಪರಿಕಲ್ಪನೆಯನ್ನು ಅನುಷ್ಠಾನಾಧಿಕಾರಿಗಳು ಅಂಗೀಕರಿಸಿರುವ ರೀತಿ.

1. ನೋ ಬ್ಯಾಗ್ ಡೇ ಕಾರ್ಯಕ್ರಮವನ್ನು ಶೇಕಡಾ 89.5 ರಷ್ಟು ಶಿಕ್ಷಕರು ಅಂಗೀಕರಿಸಿರುವುದು ಕಂಡುಬರುತ್ತದೆ.
2. 'ನೋ ಬ್ಯಾಗ್ ಡೇ' ಕಾರ್ಯಕ್ರಮದ ಪರಿಕಲ್ಪನೆಯನ್ನು ಭಾಗೀದಾರರಾದ ಶಿಕ್ಷಕರು ಅರ್ಥೈಸಿಕೊಂಡಿರುವ ಶೇಕಡಾ ಪ್ರಮಾಣ 65.2% ರಷ್ಟು ಮತ್ರ ಇರುವುದು ಕಂಡುಬರುತ್ತಿದೆ.
3. 'ನೋ ಬ್ಯಾಗ್ ಡೇ' ದಿನ ಕೈಗೊಳ್ಳಬಹುದಾದ ನಾವಿನ್ಯ ಚಟುವಟಿಕೆಗಳನ್ನು ರೂಪಿಸಿ ಕಲಿಕಾ ಪ್ರಕ್ರಿಯೆಯಲ್ಲಿ ಅನುಷ್ಠಾನಗೊಳಿಸಿಕೊಳ್ಳುವ, ಸಕಾರಾತ್ಮಕ ಮನೋಧೋರಣೆ ಹೊಂದಿದ ಶಿಕ್ಷಕರ ಶೇಕಡಾ ಪ್ರಮಾಣವು 85.6% ರಷ್ಟು ಇರುವುದಾಗಿ ಗುರುತಿಸಲಾಗಿದೆ.
4. 'ನೋ ಬ್ಯಾಗ್ ಡೇ' ಕಾರ್ಯಕ್ರಮದ ಅನುಷ್ಟಾನಕ್ಕೆ ಅಗತ್ಯ ಸಿದ್ದತೆಗಳನ್ನು ಮಾಡಿಕೊಂಡಿರುವ ಶಿಕ್ಷಕರ ಶೇಕಡಾ ಪ್ರಮಾಣವು 90% ರಷ್ಟು ಇರುತ್ತದೆ.

6. ' ನೋ ಬ್ಯಾಗ್ ಡೇ' ಕಾರ್ಯಕ್ರಮ ಅನುಷ್ಟಾನದ ಪರಿಣಾಮಕತ್ವದ ವಸ್ತುಸ್ಥಿತಿ ಶೇಕಡಾ ಪ್ರಮಾಣವು 89% ರಷ್ಟು ಇರುವುದಾಗಿ ಕಂಡುಬಂದಿದೆ.

* **'ನೋ ಬ್ಯಾಗ್ ಡೇ' ಕಾರ್ಯಕ್ರಮವನ್ನು ತಮ್ಮ ಶಾಲೆಯಲ್ಲಿ ಅಳವಡಿಸಿಕೊಳ್ಳಲು ಅನುಷ್ಠಾನಾಧಿಕಾರಿಗಳಾದ ಮುಖ್ಯೋಪಾಧ್ಯಾಯರು**

1. 'ನೋ ಬ್ಯಾಗ್ ಡೇ' ಕಾರ್ಯಕ್ರಮವನ್ನು ಶಾಲೆಯಲ್ಲಿ ಮುಖ್ಯೋಪಾಧ್ಯಾಯರು ಅಂಗೀಕರಿಸಿ ; ಅನುಷ್ಠಾನಗೊಳಿಸಿದವರ ಶೇಕಡಾ ಪ್ರಮಾಣವು 75.7 % ರಷ್ಟು ಇರುವುದಾಗಿ ಕಂಡುಬಂದಿರುತ್ತದೆ.

* 'ನೋ ಬ್ಯಾಗ್ ಡೇ' ಕಾರ್ಯಕ್ರಮವನ್ನು ಶಾಲೆಗಳಲ್ಲಿ ಅನುಷ್ಠಾನಗೊಳಿಸಿರುವುದನ್ನು


ಅಧ್ಯಯನಕಾರರಾದ ಸಂದರ್ಶನಕಾರರು ಗ್ರಹಿಸಿದ ಮಾಹಿತಿ :

1. 'ನೋ ಬ್ಯಾಗ್ ಡೇ' ಕಾರ್ಯಕ್ರಮಕ್ಕೆ ಅಗತ್ಯ ಸಿದ್ದತೆ ಹಾಗೂ ಶಾಲೆಗಳಲ್ಲಿ ಅನುಷ್ಠಾನದ ಶೇಕಡಾ ಪ್ರಮಾಣ 27.4% ರಷ್ಟು ಇರುವುದಾಗಿ ಕಂಡುಬಂದಿರುತ್ತದೆ.

**"ಶಿವಮೊಗ್ಗ ಜಿಲ್ಲೆಯಾದ್ಯಂತ ಅನುಷ್ಠಾನಗೊಂಡಿರುವ 'ನೋ ಬ್ಯಾಗ್ ಡೇ' ಕಾರ್ಯಾಕ್ರಮದ ಪರಿಣಾಮಕತ್ವ" ಶೇಕಡ ಪ್ರಮಾಣ**

ಕೋಷ್ಟಕ – 8

| ಕ್ರ.ಸಂ. | ಅಧ್ಯಯನದ ಮುಖ್ಯಾಂಶಗಳು | ಶೇಕಡಾ ಪ್ರಮಾಣ | ಷರಾ |
|---|---|---|---|
| 1 | 'ನೋ ಬ್ಯಾಗ್ ಡೇ' ಕಾರ್ಯಕ್ರಮವನ್ನು ಶಿಕ್ಷಕರು ಹಾಗೂ ಅನುಷ್ಠಾನಾಧಿಕಾರಿಗಳು ಅಂಗೀಕರಿಸಿದ ರೀತಿ. | 89.5 | |
| 2. | 'ನೋ ಬ್ಯಾಗ್ ಡೇ' ಕಾರ್ಯಕ್ರಮದ ಪರಿಕಲ್ಪನೆಯನ್ನು ಭಾಗೀದಾರರು ಅರ್ಥೈಸಿಕೊಂಡ ರೀತಿ. | 65.2 | |
| 3 | ಕಲಿಕಾಂಶಗಳನ್ನು ಮತ್ತು ಭಾಷಾ ಕೌಶಲಗಳನ್ನು ಬೆಳೆಸಿಕೊಳ್ಳಲು 'ನೋ ಬ್ಯಾಗ್ ಡೇ' ದಿನ ಕೈಗೊಳ್ಳಬಹುದಾದ ನಾವಿನ್ಯ ಚಟುವಟಿಕೆಗಳನ್ನು ರೂಪಿಸಿ, ಅನುಷ್ಟಾನಗೊಳಿಸುವಲ್ಲಿ ಶಿಕ್ಷಕರ ಮನೋಧೋರಣೆ ರೀತಿ. | 85.6 | |
| 4 | ಮಕ್ಕಳ ಶಾಲಾ ಬ್ಯಾಗ್ ಹೊರೆಯನ್ನು ತಗ್ಗಿಸಲು, ಅವರನ್ನು ಹೆಚ್ಚು ಚಟುವಟಿಕೆಯಲ್ಲಿ ಇರಿಸಿಕೊಳ್ಳಲು, ಕೈಗೊಳ್ಳಬಹುದಾದ ನಾವಿನ್ಯ ಚಟುವಟಿಕೆಗಳಲ್ಲಿ 'ನೋ ಬ್ಯಾಗ್ ಡೇ' ಕಾರ್ಯಕ್ರಮದ ಪರಿಣಾಮಕತ್ವದ ವಸ್ತುಸ್ಥಿತಿ. | 90 | |
| 5 | 'ನೋ ಬ್ಯಾಗ್ ಡೇ' ಕಾರ್ಯಕ್ರಮ ಅನುಷ್ಟಾನದ ವಸ್ತುಸ್ಥಿತಿ. | 89.2 | |
| 6 | 'ನೋ ಬ್ಯಾಗ್ ಡೇ' ಕಾರ್ಯಕ್ರಮವನ್ನು ಶಾಲೆಯಲ್ಲಿ ಮುಖ್ಯೋಪಾಧ್ಯಾಯರು ಅಂಗೀಕರಿಸಿ ; ಅನುಷ್ಠಾನಗೊಳಿಸಿದವರು. | 75.7 | |
| 7 | ಅಧ್ಯಯನಕಾರರಾದ ಸಂದರ್ಶನಕಾರರಾಗಿ ಗ್ರಹಿಸಿದ ಮಾಹಿತಿ : 'ನೋ ಬ್ಯಾಗ್ ಡೇ' ಕಾರ್ಯಕ್ರಮಕ್ಕೆ ಅಗತ್ಯ ಸಿದ್ಧತೆ ಹಾಗೂ ಶಾಲೆಗಳಲ್ಲಿ ಅನುಷ್ಠಾನದ ವಸ್ತುಸ್ಥಿತಿ : | 27.4 | |
| | **ಒಟ್ಟು ಶೇಕಡಾ** | **74.7** | |




# ಅಧ್ಯಯನದ ಸಾರಾಂಶ

ಶಾಲಾ ಮಕ್ಕಳಿಗೆ ಮಣಭಾರದ ಬ್ಯಾಗ್ ಹೊತ್ತುಕೊಂಡು ಶಾಲೆಗೆ ಹೋಗೋದಂದ್ರೆ ದೈಹಿಕ ಮತ್ತು ಮಾನಸಿಕ ಹಿಂಸೆಯೇ ಸರಿ. ಪುಸ್ತಕಗಳಿಲ್ಲದೇ ಬರಿಗೈಯಲ್ಲಿ ಆನಂದದಾಯಕವಾಗಿ ಶಾಲೆಗೆ ಬರುವುದೇ 'ನೋ ಬ್ಯಾಗ್ ಡೇ' ಕಾರ್ಯಕ್ರಮವಾಗಿದೆ. ಮಗು ತನ್ನ ಪರಿಸರದಲ್ಲಿ ಅನುಭವಗಳಿಂದ ಜ್ಞಾನವನ್ನು ಸಂರಚಿಸಿಕೊಳ್ಳುತ್ತದೆ. ಈ ರಚನೆಗಳನ್ನು ಶಾಲೆಗಳಲ್ಲಿ ಭೌತಿಕವಾಗಿ ಪುನಾರಚಿಸುವ ಅವಕಾಶ ಮತ್ತು ಸಹಾಯಬೇಕಾಗುತ್ತದೆ. ನೋ ಬ್ಯಾಗ್ ಡೇ ಪದ್ದತಿಯು ಈ ಅನುಭವಗಳನ್ನು ಮುಕ್ತವಾಗಿ ಹಂಚಿಕೊಳ್ಳಲು ಅವಕಾಶವನ್ನು ಒದಗಿಸಿ ಕೊಡುತ್ತದೆ. ಇಲ್ಲಿ ವಿದ್ಯಾರ್ಥಿಗಳಿಗೆ ಹೆಚ್ಚು ಸ್ವಾತಂತ್ರ್ಯವಿದ್ದು ತನ್ನ ಸ್ನೇಹಿತರೊಂದಿಗೆ ಸಹಭಾಗಿತ್ವದ ಕಲಿಕೆ ಸಾದ್ಯವಾಗುತ್ತದೆ. ಆದರೆ ಪಠ್ಯಪುಸ್ತಕವಿಲ್ಲದೆ ಮುಕ್ತವಾಗಿ ಚಟುವಟಿಕೆಗಳನ್ನು ರೂಪಿಸಿ ಪಾಲ್ಗೊಳ್ಳುವಂತೆ ಮಾಡಲು ವಿಶೇಷವಾದ ಕೌಶಲ ಶಿಕ್ಷಕರಿಗೆ ಅಗತ್ಯವಿದೆ.

ಈ ಉದ್ದೇಶಗಳ ಈಡೇರಿಕೆಗಾಗಿ 'ನೋ ಬ್ಯಾಗ್ ಡೇ' ಕಾರ್ಯಕ್ರಮವನ್ನು ಶಾಲೆಗಳಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಅಗತ್ಯ ಪ್ರೇರಣೆಯನ್ನು ನೀಡುವುದು ಸಹ ಈ ಅಧ್ಯಯನದ ಉದ್ದೇಶವಾಗಿದೆ. ಅಲ್ಲದೆ ಇಲಾಖೆಯ ಆದೇಶದನ್ವಯ ಶಿವಮೊಗ್ಗ ಜಿಲ್ಲಾ ವ್ಯಾಪ್ತಿಯಲ್ಲಿ 'ನೋ ಬ್ಯಾಗ್ ಡೇ' ಕಾರ್ಯಕ್ರಮ ಅನುಷ್ಟಾನಗೊಂಡಿರುವ ಬಗ್ಗೆ ಅವಲೋಕಿಸುವುದು ನಮ್ಮ ಜವಬ್ದಾರಿಯು ಸಹ ಆಗಿದೆ. 'ನೋ ಬ್ಯಾಗ್ ಡೇ' ಕಾರ್ಯಕ್ರಮದ ಕಲಿಕಾ ಚಟುವಟಿಕೆಗಳ ಬಗ್ಗೆ ಶಿಕ್ಷಕರಿಗೆ ಮನನ ಮಾಡಿಸುವುದು ಹಾಗೂ ಶಾಲೆಗಳಲ್ಲಿ ಇಲಾಖೆಯ ನಿರೀಕ್ಷೆಯಂತೆ ಕಾರ್ಯನಿರ್ವಹಿಸುತ್ತಿರುವ ಬಗ್ಗೆ ಸೂಕ್ಷ್ಮವಾಗಿ ಹಾಗೂ ವಸ್ತುನಿಷ್ಠವಾಗಿ ಅವಲೋಕಿಸುವುದು ಅನಿವಾರ್ಯವೆನಿಸುತ್ತದೆ. ಈ ಪ್ರಯತ್ನದಲ್ಲಿ ನಾವು 'ನೋ ಬ್ಯಾಗ್ ಡೇ' ಕಾರ್ಯಕ್ರಮ ಅನುಷ್ಟಾನದ ಪರಿಣಾಮಕತ್ವದ ಅಧ್ಯಯನಕ್ಕೆ ಮುಂದಾಗಿದ್ದೇವೆ.

ಈ ಹಿನ್ನೆಲೆಯಲ್ಲಿ ಅಧ್ಯಯನವನ್ನು ನಡೆಸುವಂತೆ ಉಪನಿರ್ದೇಶಕರು(ಅಭಿವೃದ್ಧಿ) ಹಾಗೂ ಪ್ರಾಂಶುಪಾಲರು ಡಯಟ್ ಶಿವಮೊಗ್ಗ ಇವರು ಆದೇಶಿಸಿದ್ದರು. ಶ್ರೀಯುತರ ಮಾರ್ಗದರ್ಶನದಂತೆ ಸೂಕ್ತ ಸಿದ್ದತೆಗಳೊಂದಿಗೆ **"ಶಿವಮೊಗ್ಗ ಜಿಲ್ಲೆಯಾದ್ಯಂತ ಅನುಷ್ಠಾನಗೊಂಡಿರುವ 'ನೋ ಬ್ಯಾಗ್ ಡೇ' ಕಾರ್ಯಾಕ್ರಮದ ಪರಿಣಾಮಕತ್ವ ಕುರಿತು ಅಧ್ಯಯನ."** ವನ್ನು ಕೈಗೊಳ್ಳಲಾಗಿದೆ. ಶಿವಮೊಗ್ಗ ಜಿಲ್ಲೆಯ ಸರ್ಕಾರಿ ಮತ್ತು ಅನುದಾನಿತ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಯಾದೃಚ್ಛಿಕವಾಗಿ ಪ್ರತೀ ತಾಲ್ಲೂಕುಗಳಿಂದ ಕಿರಿಯ ಪ್ರಾಥಮಿಕ, ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಂತೆ ಒಟ್ಟು 50 ಶಾಲೆಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಈ ಆಯ್ದ 50 ಶಾಲೆಗಳ ಮುಖ್ಯೋಪಾಧ್ಯಯರು, ಸಹಶಿಕ್ಷಕರು ಹಾಗೂ ಮಕ್ಕಳಿಗೆ 'ನೋ ಬ್ಯಾಗ್ ಡೇ' ಕಾರ್ಯಕ್ರಮದಲ್ಲಿ ಚರ್ಚಿಸಿರುವ ವಿಷಯಾಂಶಗಳನ್ನು ಆಧರಿಸಿ, ನಿಗಧಿತ ಪ್ರಶ್ನಾವಳಿಗಳನ್ನು ನೀಡಿ ಅವರುಗಳಿಂದ ಮಾಹಿತಿ ಮತ್ತು ಅಭಿಪ್ರಾಯಗಳನ್ನು ಪಡೆದು ಈ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

ಪ್ರಸ್ತುತ ಅಧ್ಯಯನದಿಂದ ಕಂಡುಕೊಳ್ಳಲು ಉದ್ದೇಶಿಸಿದ್ದ **ಶಿವಮೊಗ್ಗ ಜಿಲ್ಲೆಯಾದ್ಯಂತ ಅನುಷ್ಠಾನಗೊಂಡಿರುವ 'ನೋ ಬ್ಯಾಗ್ ಡೇ' ಕಾರ್ಯಾಕ್ರಮದ ಪರಿಣಾಮಕತ್ವ** ಬಗ್ಗೆ ಅವಲೋಕಿಸಿದಾಗ ನಮಗೆ ಹಲವಾರು ಮುಖ್ಯ ಅಂಶಗಳು ಕಂಡುಬಂದವು. 'ನೋ ಬ್ಯಾಗ್ ಡೇ' ಕಾರ್ಯಕ್ರಮವನ್ನು ಶಿಕ್ಷಕರು ಹಾಗೂ ಅನುಷ್ಠಾನಾಧಿಕಾರಿಗಳು ಅಂಗೀಕರಿಸಿದ ರೀತಿ' ಯನ್ನು ಗುರುತಿಸಲು ಪ್ರಯತ್ನಿಸಿದಾಗ ನಮಗೆ ಶೇಕಡಾ 89.5 ರಷ್ಟು ಶಿಕ್ಷಕರು ಅಂಗೀಕರಿಸಿರುವುದು ಕಂಡುಬರುತ್ತದೆ. ಅದೇರೀತಿ 'ನೋ ಬ್ಯಾಗ್ ಡೇ' ಕಾರ್ಯಕ್ರಮದ ಪರಿಕಲ್ಪನೆಯನ್ನು ಭಾಗೀದಾರರು ಅರ್ಥೈಸಿಕೊಂಡ ರೀತಿಯನ್ನು ಗುರುತಿಸಲು ಪ್ರಯತ್ನಿಸಿದಾಗ ಶೇಕಡಾ ಪ್ರಮಾಣ 65.2% ರಷ್ಟು ಮಾತ್ರ ಇರುವುದು ಕಂಡುಬರುತ್ತಿದೆ. ಮಕ್ಕಳ ಶಾಲಾ ಬ್ಯಾಗ್ ಹೊರೆಯನ್ನು ತಗ್ಗಿಸಲು, ಅವರನ್ನು ಹೆಚ್ಚು ಚಟುವಟಿಕೆಯಲ್ಲಿ ಇರಿಸಿಕೊಳ್ಳಲು, ಕೈಗೊಳ್ಳಬಹುದಾದ ನಾವಿನ್ಯ ಚಟುವಟಿಕೆಗಳಲ್ಲಿ 'ನೋ ಬ್ಯಾಗ್ ಡೇ' ದಿನಕ್ಕೆ ಮಾಡಿಕೊಂಡಿರುವ ಸಿದ್ಧತೆ ಬಗ್ಗೆ ತಿಳಿಯುವುದಕ್ಕೆ ಪ್ರಯತ್ನಿಸಿದಾಗ ಶೇಕಡಾ 90% ರಷ್ಟು ಇರುವುದು ಕಂಡುಬಂದಿರುತ್ತದೆ. ' ನೋ ಬ್ಯಾಗ್ ಡೇ' ಕಾರ್ಯಕ್ರಮ ಅನುಷ್ಟಾನದ ವಸ್ತುಸ್ಥಿತಿ ಗಮನಿಸಿದಾಗ ಅದು ಶೇಕಡಾ 89% ರಷ್ಟು ಇರುವುದಾಗಿ ಕಂಡುಬಂದಿದೆ. ಈ ಎಲ್ಲ ಮಾಹಿತಿಗಳನ್ನು ಶಾಲಾ ಶಿಕ್ಷಕರು ನೀಡಿದ ಅಭಿಪ್ರಾಯವನ್ನು ಆಧರಿಸಿ ವಿಶ್ಲೇಷಿಸಿರುವ ಅಂಶವಾಗಿದೆ.

ಇದೇ ಅಧ್ಯಯನದ ಮೇಲೆ ಬೆಳಕು ಚೆಲ್ಲಲು ಆಯಾಯ ಶಾಲೆಗಳ ಮುಖ್ಯೋಪಾಧ್ಯಾರರುಗಳಿಂದಲೂ ಸಹ ಅಭಿಪ್ರಯ ಸಂಗ್ರಹಿಸಿದ್ದು; ಅದರ ಪ್ರಕಾರ 'ನೋ ಬ್ಯಾಗ್ ಡೇ' ಕಾರ್ಯಕ್ರಮವನ್ನು ಶಾಲೆಯಲ್ಲಿ ಮುಖ್ಯೋಪಾಧ್ಯಾಯರು ಅಂಗೀಕರಿಸಿ, ಅನುಷ್ಠಾನಗೊಳಿಸಲು ಪ್ರಯತ್ನಿಸಿದವರ ಶೇಕಡಾ ಪ್ರಮಾಣವು 75.7 % ರಷ್ಟು ಇರುವುದಾಗಿ ಕಂಡುಬಂದಿರುತ್ತದೆ.

ಇದರ ಜೊತೆಯಲ್ಲಿ ಅಧ್ಯಯನಕಾರರೇ ಶಾಲೆಗಳಿಗೆ ಭೇಟಿನೀಡಿ, ಅವಲೋಕಿಸಿ ಸಂಗ್ರಹಿಸಿರುವ ಅಂಶಗಳ ಪ್ರಕಾರ ಕಂಡುಬಂದ ಸಂಗತಿಗಳನ್ನು ವಿಶ್ಲೇಷಿಸಿದಾಗ, ಈ ಕಾರ್ಯಕ್ರಮದ ಸಿದ್ದತೆ ಹಾಗೂ ಅನುಷ್ಠಾನದ ಶೇಕಡಾ ಪ್ರಮಾಣವು 27.4 ರಷ್ಟು ಮಾತ್ರ ಇರುವುದಾಗಿ ಕಂಡುಬಂದಿರುತ್ತದೆ. ಒಂದೇ ಅಧ್ಯಯನಕ್ಕೆ ಈ ರೀತಿ ಬೇರೆ ಬೇರೆ ಅಂಕಿ–ಅಂಶಗಳು ಲಭ್ಯವಾಗಿದ್ದು, ಮಾಹಿತಿ ನೀಡುವ ಭಾಗಿದಾರರ ಪ್ರಾಮಾಣಿಕತೆಯನ್ನು ಗಮಮನಿಸಬೇಕಾಗುತ್ತದೆ. ಕೆಲವು ಶಾಲೆಗಳಲ್ಲಿ ನೋ ಬ್ಯಾಗ್ ಡೇ ದಿನವನ್ನು ಕೇವಲ ಸಾಂಕೇತಿಕವಾಗಿಯೂ ಸಹ ನಡೆಸಿರಬಹುದೆಂಬ ಅಂಶ ಕಂಡುಬರುತ್ತದೆ.

ಒಟ್ಟಾರೆ ಪ್ರಸ್ತುತ ಅಧ್ಯಯನದಲ್ಲಿ ಬಳಸಿದ ವಸ್ತುನಿಷ್ಠ ತಂತ್ರಗಳು ಮತ್ತು ಸಾಧನಗಳ ಮೂಲಕ **"ಶಿವಮೊಗ್ಗ ಜಿಲ್ಲೆಯಾದ್ಯಂತ ಅನುಷ್ಠಾನಗೊಂಡಿರುವ 'ನೋ ಬ್ಯಾಗ್ ಡೇ' ಕಾರ್ಯಾಕ್ರಮದ ಪರಿಣಾಮಕತ್ವವನ್ನು**

ಅವಲೋಕಿಸಿದಾಗ **ಶೇಕಡಾ 74.7** ರಷ್ಟು ಇರುವುದು ಕಂಡು ಬಂದಿರುತ್ತದೆ. ಅಂದರೆ ಸರ್ಕಾರ ಹಾಗೂ ಇಲಾಖೆ ಯಾವುದೇ ವಿನೂತನ ಕಾರ್ಯಕ್ರಮವನ್ನು ಜಾರಿಗೆ ತಂದರೂ ಸಹ ಅದನ್ನು ಪರಿಣಾಮಕಾರಿಯಾಗಿ ಅನುಷ್ಠಾನ ಮಾಡಬೇಕಾದವರು ಅನುಷ್ಠಾನಾಧಿಕಾರಿಗಳ ಮತ್ತು ಶಿಕ್ಷಕರ ಕಾರ್ಯಕ್ಷಮತೆಯನ್ನು ಅವಲಂಭಿಸಿರುತ್ತದೆ ಎಂಬುದು ಮತ್ತೊಮ್ಮೆ ದೃಢಪಟ್ಟಿದೆ. ನಿರೀಕ್ಷಿತ ಫಲ ದೊರೆಯಬೇಕೆಂದರೆ ಸಹ ಪಾಲುದಾರರು ಸಕ್ರೀಯವಾಗಿ ತೊಡಗಿಸಿಕೊಳ್ಳುವುದು ಅತ್ಯಂತ ಅಗತ್ಯವಾಗಿದೆ.

## ಅಧ್ಯಯನದಿಂದ ನೀಡಬಹುದಾದ ಸಲಹೆಗಳು

ಎ) ಶಿಕ್ಷಕರಿಗೆ :

1. ತಮ್ಮ ವಿಷಯದಲ್ಲಿ ಪ್ರಭುತ್ವವನ್ನು ಹೊಂದಿದ್ದು ಬೋಧನೆಯು ಪಠ್ಯಪುಸ್ತಕವನ್ನು ಮೀರಿನಿಲ್ಲುವಂತಿರಬೇಕು.
2. ತಮ್ಮ ಬೋಧನಾ ಕೌಶಲ್ಯವನ್ನು ಅಭಿವೃದ್ಧಿ ಪಡಿಸಿಕೊಳ್ಳುವುದು ಹಾಗೂ ಮಗುವಿನ ಸ್ವಕಲಿಕೆಗೆ ಅಗತ್ಯ ಸುಗಮಗಾರಿಕೆಯನ್ನು ನೀಡುವಂತಿರಬೇಕು.
3. ಬೋಧನಾ ಕ್ಷೇತ್ರದಲ್ಲಿನ ಬದಲಾವಣೆಗಳಿಗೆ ಮುಕ್ತ ಮನಸ್ಸಿನಿಂದ ಒಗ್ಗಿಕೊಳ್ಳುವ ಮನೋಭಾವವನ್ನು ಹೊಂದಿದ್ದು,

   ನಾವಿನ್ಯ ವಿಧಾನಗಳನ್ನು ಅಳವಡಿಸಿಕೊಳ್ಳಬೇಕು.
4. ಮಕ್ಕಳ ಕಲಿಕಾ ಪ್ರಕ್ರಿಯೆಯಲ್ಲಿ ಸ್ವಕಲಿಕೆ,, ಸಹವರ್ತಿ ಕಲಿಕೆ, ಗುಂಪುಕಲಿಕೆಗೆಅವಕಾಶ ಕಲ್ಪಿಸಬೇಕು.
5. ಕೇವಲ ಬೋಧಕರಾಗದೆ ಸುಗಮಕಾರರಾಗಿ ಸೃಜನಶೀಲ, ಸ್ವ ಅವಲೋಕನ, ಸ್ವ ಮೌಲ್ಯಮಾಪನ ಮಾಡಿಕೊಳ್ಳುವಂತೆ

   ಮಾರ್ಗದರ್ಶನ ನೀಡಬೇಕು.
6. ಪ್ರತಿ ಶಾಲೆಯಲ್ಲಿಯೂ ಸಹ ಮಾಸಿಕ ಅಥವಾ ಪಾಕ್ಷಿಕ ಒಂದು ದಿನ'ನೋ ಬ್ಯಾಗ್ ಡೇ' (ಸೃಜನಶೀಲ ದಿನ) ಅಳವಡಿಸಿಕೊಂಡು ಮಕ್ಕಳಿಗೆ ಸ್ವತಂತ್ರ ಕಲಿಕೆಗೆ ಅವಕಾಶ ಕಲ್ಪಿಸಿಕೊಡಬೇಕು

ಬಿ) ಮುಖ್ಯೋಪಾಧ್ಯಾಯರುಗಳಿಗೆ :

1. ತರಗತಿಯಲ್ಲಿನ ಕಲಿಕಾ ಪ್ರಕ್ರಿಯೆಗೆ ಅಗತ್ಯ ಸೌಲಭ್ಯಗಳನ್ನು ಒದಗಿಸುವ ಮನೋಭಾವವನ್ನು ಹೊಂದಿರಬೇಕು.
2. ಶಿಕ್ಷಕರ ಬೋಧನಾ ಚಟುವಟಿಕೆಗಳನ್ನು ಸಲಹೆ ಹಾಗೂ ಮಾರ್ಗದರ್ಶಿತ್ವದ ಹಿನ್ನೆಲೆಯಲ್ಲಿ ವೀಕ್ಷಣೆ ಮಾಡುವಂತಿರಬೇಕು.
3. ಮಾಸಿಕ ಅಥವಾ ಪಾಕ್ಷಿಕ ಒಂದು ದಿನ'ನೋ ಬ್ಯಾಗ್ ಡೇ' (ಸೃಜನಶೀಲ ದಿನ) ಅಳವಡಿಸಿಕೊಂಡು, ಮಕ್ಕಳಿಗೆ ಸ್ವತಂತ್ರ ಕಲಿಕೆಗೆ ಅವಕಾಶ ಕಲ್ಪಿಸಿಕೊಡಬೇಕು

ಸಿ) ಆಡಳಿತಗಾರರು :

1. ಇಲಾಖೆ ನೀಡಿದ ಸೂಚನೆಗಳು, ಶೈಕ್ಷಣಿಕವಾದ ಹೊಸ ಪ್ರಯೋಗಗಳನ್ನು ಹಾಗೂ ಮಾರ್ಗಧರ್ಶನಗಳು ಅನುಷಾನಗೋಳಿಸಬೇಕು.
2. ತಾವು ನೀಡಿದ ಮಾರ್ಗದರ್ಶನಗಳು, ನಿರ್ದೇಶನಗಳು ಯಥಾವತ್ತು ಅನುಷ್ಠಾನ ಗೊಳ್ಳುವಂಥಹ ಅವಲೋಕನ

   ಹಾಗೂ ಪರಿಶೀಲನೆ ನಡೆಸಬೇಕು.

3. ‘ನೋ ಬ್ಯಾಗ್ ಡೇ ದಿನದಲ್ಲಿ ನಡೆಸಬಹುದಾದ ಸಾಮಾನ್ಯ ವಿಷಯವಾರು ಚಟುವಟಿಕೆಗಳನ್ನು ಪರಿಚಯಿಸಬೇಕು.

4. ಶಿಕ್ಷಕರಿಗೆ ಎದುರಾಗು ಅಡೆತಡೆಗಳನ್ನು ನಿವಾರಿಸಿಕೊಳ್ಳುವಂತಹ ಸಾಮರ್ಥ್ಯ ಬೆಳೆಸುವ ತರಬೇತಿಗಳನ್ನು ನೀಡಬೇಕು.

ಡಿ) ಕಾರ್ಯನೀತಿ ರೂಪಿಸುವವರು :

1. ಸುಲಲಿತ ಕಲಿಕಾ ಚಟುವಟಿಕೆಗಳನ್ನು ರೂಪಿಸಿ ಅನುಷ್ಠಾನಗೊಳಿಸಲು ಪೂರಕ ಸಾಹಿತ್ಯವನ್ನು ರಚಿಸುವುದು ಹಾಗೂ ಶಾಲಾ ಗ್ರಂಥಾಲಯಗಳಿಗೆ ಒದಗಿಸುವುದು ಅಗತ್ಯವಾಗಿದೆ.

2. ಶಿಕ್ಷಣದಲ್ಲಿ ಆಗುತ್ತಿರುವ ಆಧುನಿಕತೆಗೆ ತಕ್ಕಂತಹ ಡಿಜಿಟಲ್ ತಂತ್ರಾಂಶಗಳನ್ನು ಒದಗಿಸುವ ಯೋಜನೆಗಳನ್ನು ರೂಪಿಸಬೇಕು.

ಇ) ವಿದ್ಯಾರ್ಥಿಗಳಿಗೆ :

1. ಕಲಿಕಾ ಸ್ನೇಹಿ ವಾತಾವರಣವನ್ನು ನಿರ್ಮಿಸುವಲ್ಲಿ ಶಿಕ್ಷಕರು ರಚಿಸುವ ಎಲ್ಲ ಚಟುವಟಿಕೆಗಳಲ್ಲಿ ಸಕ್ರೀಯವಾಗಿ ಭಾಗವಹಿಸಬೇಕು.

2. ಯಾವುದೆ ಕಲಿಕಾ ಚಟುವಟಿಕೆಗಳಲ್ಲಿ ಸಕ್ರೀಯವಾಗಿ ಪಾಲ್ಗೊಳ್ಳಬೇಕು ಅಗತ್ಯ ಪರಿಹಾ ಪಡೆಯಬೇಕು.

## ಅಧ್ಯಯನಕಾರರು ಕ್ಷೇತ್ರ ಭೇಟಿಮಾಡಿದ ಛಾಯಾ ಚಿತ್ರಗಳು :



ಮುಖ್ಯ ಶಿಕ್ಷಕರೊಂದಿಗೆ ಪ್ರಶ್ನಾವಳಿ ಚರ್ಚೆಯಲ್ಲಿ ತೊಡಗಿರುವ ಅಧ್ಯಯನಕಾರರು.



ಮಕ್ಕಳೊಂದಿಗೆ ಪ್ರಶ್ನಾವಳಿ ಚರ್ಚೆಯಲ್ಲಿ ತೊಡಗಿರುವ ಅಧ್ಯಯನಕಾರರು.



ಮುಖ್ಯ ಶಿಕ್ಷಕರೊಂದಿಗೆ ಪ್ರಶ್ನಾವಳಿ ಚರ್ಚೆಯಲ್ಲಿ ತೊಡಗಿರುವ ಅಧ್ಯಯನಕಾರರು. ಚಿತ್ರ 1 ಮತ್ತು 2.



# ಗ್ರಂಥ ಋಣ


1. ಡಿ.ಎಸ್.ಇ.ಆರ್.ಟಿ. ಬೆಂಗಳೂರು. ಕರ್ನಾಟಕ ಸರ್ಕಾರ, ನಿರಂತರ.ಶಿಕ್ಷಕರ ಸಂ ಸಾಹಿತ್ಯ. 2011

2. ಪ್ರಯೋಗಾಲಯ ಕ್ಷೇತ್ರ ಚಟುವಟಿಕೆಗಳು ಮತ್ತು ಮಗುಕೇಂದ್ರಿತ ಅಧ್ಯಯನಗಳು ತರಬೇತಿ ಸಾಹಿತ್ಯ.

– ಡಿ.ಎಸ್.ಇ.ಆರ್.ಟಿ. ಬೆಂಗಳೂರು.

3. ಕ್ರಿಯಾ ಸಂಶೋಧನೆ ಕೈಪಿಡಿ.

– ಡಿ.ಎಸ್.ಇ.ಆರ್.ಟಿ. ಬೆಂಗಳೂರು.

4. ಡಾಸನ್ ಆರ್. ಪಿಯರಿ, ಕಲ್ಚರ್ ಅಂಡ್ ಕಾಗ್ನಿಟೀವ್ ಡೆವಲಪ್‌ಮೆಂಟ್ ಫ್ರಮ್ ಪಿಯಾಜೆಯನ್ ಪರ್ಸ್ ಪೆಕ್ಟಿವ್, ಪಿಯಾಜೆಯನ್ ಸೈಕಾಲಜಿ, ಹಾಲಸ್ಟಡ್/ ವಿಲೇ ಗಾರ್ಡನರ್ ನ್ಯೂಯಾರ್ಕ 1977.

5. 8, 9, 10ನೇ ತರಗತಿಯ ಪಠ್ಯಪುಸ್ತಕಗಳು. –ಕರ್ನಾಟಕ ಪಠ್ಯಪುಸ್ತಕ ಸಂಘ (ರಿ) ಬೆಂಗಳೂರು.

6. ಎನ್.ಸಿ.ಎಫ್.2005 ರ ಪ್ರತಿ.

7. ನೋ ಬ್ಯಾಗ್ ಡೇ ಕಾರ್ಯಕ್ರಮದ ಆದೇಶ. ದಿಣಾಂಕ 05.10.2018

8. 25 ಕ್ಕೂ ಹೆಚ್ಚು ಮಕ್ಕಳಿರುವ ನಲಿ–ಕಲಿ ಘಟಕಗಳ್ಲಿ ವಿದ್ಯಾರ್ಥಿಗಳು ಕಲಿಯಲು ಕಾಯುವ ಸಮಯದ ಕುರಿತು ಅಧ್ಯಯನ ವರದಿ. ಶ್ರೀ ಹರಿಪ್ರಸಾದ್. ಜಿ.ವಿ. ಡಯಟ್. ಶಿವಮೊಗ್ಗ

9. ನೋ ಬ್ಯಾಗ್ ಡೇ ಕೈಪಿಡಿ– ಸ.ಹಿ.ಪ್ರಾ.ಶಾಲೆ. ನೀರಲಗಿ ಗದಗ ಜಿಲ್ಲೆ.

ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಶಿವಮೊಗ್ಗ.

***ಶಿವಮೊಗ್ಗ ಜಿಲ್ಲೆಯಾದ್ಯಂತ ಅನುಷ್ಠಾನಗೊಂಡಿರುವ 'ನೋ ಬ್ಯಾಗ್ ಡೇ' ಕಾರ್ಯಕ್ರಮದ ಪರಿಣಾಮಕತ್ವ – ಒಂದು ಅಧ್ಯಯನ.***

**ಶಿಕ್ಷಕರ ಅಭಿಪ್ರಾಯಾವಳಿ**

**ಈ ಕೆಳಗಿನ ಹೇಳಿಕೆಗಳಿಗೆ ನಿರೀಕ್ಷಿತ ಉತ್ತರಗಳನ್ನು ನೀಡಿದೆ.**

**ನಿಮಗೆ ಸರಿ ಎನಿಸಿದ ಅಭಿಪ್ರಾಯಕ್ಕೆ ಸರಿ ( ) ಗುರುತಿನಿಂದ ತಿಳಿಸಿ.**

1. ಶಾಲಾ ಮಕ್ಕಳ ಪುಸ್ತಕದ ಹೊರೆ ತಪ್ಪಿಸಲು ಒಂದು ವಿನೂತನ ಕಾರ್ಯಕ್ರಮ 'ನೋ ಬ್ಯಾಗ್ ಡೇ'?

***ಹೌದು/ ಇಲ್ಲ/ ಗೊತ್ತಿಲ್ಲ***

2. 'ನೋ ಬ್ಯಾಗ್ ಡೇ' ಪರಿಕಲ್ಪನೆಗಳನ್ನು ನಿಮ್ಮ ಬೋಧನಾ – ಕಲಿಕಾ ಪ್ರಕ್ರಿಯೆಯಲ್ಲಿ ಅಳವಡಿಸಿಕೊಂಡಿದ್ದೀರಾ?

***ಹೌದು/ ಇಲ್ಲ/ ಗೊತ್ತಿಲ್ಲ***

3. 'ನೋ ಬ್ಯಾಗ್ ಡೇ'ದಿನದ ಕಲಿಕೆಯ ಪರಿಕಲ್ಪನೆಗಳನ್ನು ಗುರುತಿಸಿಕೊಂಡಿದ್ದೀರಾ?.

***ಹೌದು/ ಇಲ್ಲ/ ಗೊತ್ತಿಲ್ಲ***

4. 'ನೋ ಬ್ಯಾಗ್ ಡೇ'ದಿನದ ಕಲಿಕಾ ಪ್ರಕ್ರಿಯೆಯ ಕುರಿತು ನಿಮ್ಮ ಮೇಲಾಧಿಕಾರಿಗಳು ಭೇಟಿ ಮಾಡಿದ್ದಾರಯೇ?

***ಹೌದು/ ಇಲ್ಲ/ ಗೊತ್ತಿಲ್ಲ***

5. 'ನೋ ಬ್ಯಾಗ್ ಡೇ'ದಿನದ ಕಲಿಕಾ ಪ್ರಕ್ರಿಯೆಯ ಕುರಿತು ನಿಮಗೆ ಯಾರಾದರು ಮಾರ್ಗದರ್ಶನ ಮಾಡಿದ್ದಾರಯೇ?

***ಹೌದು/ ಇಲ್ಲ/ ಗೊತ್ತಿಲ್ಲ***

6. ಸಹಪಠ್ಯ ಚಟುವಟಿಕೆಗಳ ಅವಧಿಗಳನ್ನು ಕ್ರೋಢಿಕರಿಸಿಕೊಂಡು 'ನೋ ಬ್ಯಾಗ್ ಡೇ' ನಡೆಸಲು ಅವಕಾಶವಿದೆಯೇ?

***ಹೌದು/ ಇಲ್ಲ/ ಗೊತ್ತಿಲ್ಲ***

7. 'ನೋ ಬ್ಯಾಗ್ ಡೇ'ನಡೆಸಲು ಪಾಕ್ಷಿಕ ಅಥವ ಮಾಸಿಕ ಒಂದು ಶನಿವಾರ ನಿಗಧಿಪಡಿಸಬಹುದೆ?

***ಹೌದು/ ಇಲ್ಲ/ ಗೊತ್ತಿಲ್ಲ***

8. 'ನೋ ಬ್ಯಾಗ್ ಡೇ' ದಿನದಿಂದ 'ಸ್ವಕಲಿಕೆ, ಸಹವರ್ತಿ ಕಲಿಕೆ ಮತ್ತು ಅನುಭವದ ಕಲಿಕೆ' ಸಾಧ್ಯವೇ?

***ಹೌದು/ ಇಲ್ಲ***

9. 'ನೋ ಬ್ಯಾಗ್ ಡೇ' ಒಂದು ಸೃಜನಶೀಲ ದಿನವನ್ನಾಗಿ ಪರಿವರ್ತಿಸಿಕೊಳ್ಳಲು ನಿಮಗೆ ಸಾಧ್ಯವಾಗಿದೆಯೇ?

***ಹೌದು/ ಇಲ್ಲ***

10. ಪಠ್ಯ ವಿಷಯಗಳನ್ನು 'ನೋ ಬ್ಯಾಗ್ ಡೇ' ದಿನಗಳಲ್ಲಿ ಅಳವಡಿಸಿಕೊಳ್ಳಲು ಸಾಧ್ಯವಾಗಿದೆಯೇ?

***ಹೌದು/ ಇಲ್ಲ***

11. 'ನೋ ಬ್ಯಾಗ್ ಡೇ'ನಿಮ್ಮ ಬೋಧನಾ ಕಾರ್ಯದ ನಾವಿನ್ಯತೆಗೆ ಸಾಧ್ಯವಾಗುತ್ತದೆಯೇ?

***ಹೌದು/ ಇಲ್ಲ***

12. 'ನೋ ಬ್ಯಾಗ್ ಡೇ' ಪರಿಕಲ್ಪನೆ ನಿಮಗೆ ಒಪ್ಪಿಗೆಯಾಯಿತೆ?

***ಹೌದು/ ಇಲ್ಲ***

13. 'ನೋ ಬ್ಯಾಗ್ ಡೇ'ಅನುಷ್ಟಾನದಿಂದ ನಿಮ್ಮ ಬೋಧನಾ ಅವಧಿ ಕಡಿಮೆಯಾಗಿದೆ ಎನಿಸುವುದೆ?

***ಹೌದು/ ಇಲ್ಲ***

14. 'ನೋ ಬ್ಯಾಗ್ ಡೇ'ಅನುಷ್ಟಾನದಿಂದ ನಿಮ್ಮ ಪಠ್ಯವಿಷಯಗಳು ಹಿಂದುಳಿಯುವುದೆಂಬ ಆತಂಕ ಇದೆಯೇ?

***ಹೌದು/ ಇಲ್ಲ***

15. 'ನೋ ಬ್ಯಾಗ್ ಡೇ' ಬಳಸಿಕೊಂಡರೆ ಉತ್ತಮ ಕಲಿಕೆ ಸಾಧ್ಯ ಎಂದು ನಿಮಗೆ ಅನ್ನಿಸುತ್ತದೆಯೇ?

***ಹೌದು/ ಇಲ್ಲ***

16. 'ನೋ ಬ್ಯಾಗ್ ಡೇ'ಮಗುವಿನ ಸಭಾ ಕಂಪನ ಕಳೆಯಲು, ಮಂಡನಾ ಕೌಶಲ ಬೆಳೆಸಲು ವೇದಿಕೆಯಾಗಬಹುದೇ?

***ಹೌದು/ ಇಲ್ಲ***

17. 'ನೋ ಬ್ಯಾಗ್ ಡೇ'ಅನುಷ್ಟಾನಗೊಳಿಸಲು ಇಲಾಖೆಯಿಂದ ಒತ್ತಡ ಇದೆಯೇ?

***ಹೌದು/ ಇಲ್ಲ***

18. 'ನೋ ಬ್ಯಾಗ್ ಡೇ'ಕಲಿಕಾ ಪ್ರಕ್ರಿಯೆಯಲ್ಲಿ ಬಳಸಿಕೊಂಡರೆ ಸಂತಸದಾಯಕ ಕಲಿಕೆ ಸಾಧ್ಯವಾಗುತ್ತದೆ. ನಿಮ್ಮ ಅನಿಸಿಕೆ.

***ಒಪ್ಪುತ್ತೇನೆ/ ಒಪ್ಪುವುದಿಲ್ಲ/ ಅಗತ್ಯವಿರಲ್ಲಿಲ್ಲ.***

19. 'ನೋ ಬ್ಯಾಗ್ ಡೇ' ವಿಷಯಗಳನ್ನು ಕಲಿಕಾ ಪ್ರಕ್ರಿಯೆಯಲ್ಲಿ ಅಳವಡಿಸಿಕೊಳ್ಳಲು ನಿಮಗೆ ಒಪ್ಪಿಗೆ ಇದೆಯೇ?

***ಒಪ್ಪುತ್ತೇನೆ/ ಒಪ್ಪುವುದಿಲ್ಲ/ ಅಗತ್ಯವಿರಲ್ಲಿಲ್ಲ.***

20. ಜ್ಞಾನವನ್ನು ಮಗು ಅನುಭವದಿಂದ ಕಟ್ಟಿಕೊಳ್ಳುವುದರಿಂದ, ಪಠ್ಯಪುಸ್ತಕ ರಹಿತ ಚಟುವಟಿಕೆಗಳನ್ನು ರೂಪಿಸಲು ನಿಮಗೆ ಒಪ್ಪಿಗೆ ಇದೆಯೇ?

***ಒಪ್ಪುತ್ತೇನೆ/ ಒಪ್ಪುವುದಿಲ್ಲ/ ಅಗತ್ಯವಿರಲ್ಲಿಲ್ಲ.***

21. 'ನೋ ಬ್ಯಾಗ್ ಡೇ' ಚಟುವಟಿಕೆಗಳು ಮಕ್ಕಳಲ್ಲಿ ಅಭಿವ್ಯಕ್ತಿ ಸಾರ್ಮಥ್ಯವನ್ನು ಬೆಳೆಸಲು ಸಹಾಯವಾಗಬಹುದೆಂದು ನೀವು ಭಾವಿಸುತ್ತೀರಾ?

***ಒಪ್ಪುತ್ತೇನೆ/ ಒಪ್ಪುವುದಿಲ್ಲ/ ಅಗತ್ಯವಿರಲ್ಲಿಲ್ಲ.***

**ಈ ಕೆಳಗಿನ ಹೇಳಿಕೆಗಳಿಗೆ ಸಂಕ್ಷಿಪ್ತವಾಗಿ ನಿಮ್ಮ ಅಭಿಪ್ರಾಯವನ್ನು ಬರೆಯಿರಿ.**

22. ಎನ್.ಸಿ.ಎಫ್–2005 ಪ್ರಕಾರ ಮಕ್ಕಳ ಅಮೂಲ್ಯ ಬಾಲ್ಯವನ್ನು ಮತ್ತಷ್ಟು ಸಹ್ಯವಾಗಿಸಲು 'ನೋ ಬ್ಯಾಗ್ ಡೇ' ಪೂರಕ ಕಲ್ಪನೆಯಾಗಿದೆಯೇ? ಸ್ಪಷ್ಟೀಕರಿಸಿರಿ.

23. ಮಗು ಜ್ಞಾನವನ್ನು ಕಟ್ಟಿಕೊಳ್ಳುವ ಪ್ರಕ್ರಿಯೆಯಲ್ಲಿ 'ನೋ ಬ್ಯಾಗ್ ಡೇ' ದಿನದ ಪಾತ್ರವನ್ನು ವಿವರಿಸಿರಿ.

24. ತರಗತಿ ಕಲಿಕಾ ಪ್ರಕ್ರಿಯೆಗೆ ಅಗತ್ಯ ಹೆಚ್ಚುವರಿ ಮಾಹಿತಿಯನ್ನು 'ನೋ ಬ್ಯಾಗ್ ಡೇ' ದಿನದಲ್ಲಿ ಹೇಗೆ ಪಡೆದುಕೊಳ್ಳಬಹುದು?

25. 'ನೋ ಬ್ಯಾಗ್ ಡೇ' ದಿನದ ಕಲಿಕಾ ಪ್ರಕ್ರಿಯೆಯ ಬಗ್ಗೆ ನಿಮ್ಮ ಅನುಭವವನ್ನು ತಿಳಿಸಿರಿ.

ಶಿಕ್ಷಕರ ಸಹಿ

ಮತ್ತು ಶಾಲಾ ವಿಳಾಸ

**ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಶಿವಮೊಗ್ಗ.**

*ಶಿವಮೊಗ್ಗ ಜಿಲ್ಲೆಯಾದ್ಯಂತ ಅನುಷ್ಠಾನಗೊಂಡಿರುವ 'ನೋ ಬ್ಯಾಗ್ ಡೇ' ಕಾರ್ಯಕ್ರಮದ ಪರಿಣಾಮಕತ್ವ – ಒಂದು ಅಧ್ಯಯನ.*

**ಮುಖ್ಯೋಪಾಧ್ಯಾರ ಅಭಿಪ್ರಾಯಾವಳಿ**

**ಈ ಕೆಳಗಿನ ಹೇಳಿಕೆಗಳಿಗೆ ನಿರೀಕ್ಷಿತ ಉತ್ತರಗಳನ್ನು ನೀಡಿದೆ.**

**ನಿಮಗೆ ಸರಿ ಎನಿಸಿದ ಅಭಿಪ್ರಾಯಕ್ಕೆ ಸರಿ (   ) ಗುರುತಿನಿಂದ ತಿಳಿಸಿ.**

1. ನಿಮ್ಮ ಶಾಲೆಯಲ್ಲಿ 'ನೋ ಬ್ಯಾಗ್ ಡೇ'ದಿನವನ್ನು ನಿಮ್ಮ ಶಿಕ್ಷಕರು ಅಳವಡಿಸಿಕೊಂಡಿದ್ದಾರೆಯೇ?

   ***ಹೌದು/ ಇಲ್ಲ/ ಗೊತ್ತಿಲ್ಲ***

2. 'ನೋ ಬ್ಯಾಗ್ ಡೇ' ಕಾರ್ಯಕ್ರಮವನ್ನು ಶಾಲಾ ವೇಳಾಪಟ್ಟಿಯಲ್ಲಿ ತೋರಿಸಲು ಸಾಧ್ಯವಾಗಿದೆಯೇ?

   ***ಹೌದು/ ಇಲ್ಲ***

3. 'ನೋ ಬ್ಯಾಗ್ ಡೇ' ಪರಿಕಲ್ಪನೆಗಳನ್ನು ಚರ್ಚಿಸಿ, ಮನನ ಮಾಡಿಸಿ ಅನುಷ್ಟಾನ ಸಾಧ್ಯವಾಗಿದೆಯೇ?

   ***ಹೌದು/ ಇಲ್ಲ/ ಗೊತ್ತಿಲ್ಲ***

4. 'ನೋ ಬ್ಯಾಗ್ ಡೇ' ಒಂದು ಸೃಜನಶೀಲ ದಿನವನ್ನಾಗಿಸಿ ನಿಮ್ಮ ಶಿಕ್ಷಕರು ಸಮರ್ಥವಾಗಿ ನಿರ್ವಹಿಸಬಲ್ಲರೆಂದು ನಿಮಗೆ ಅನ್ನಿಸುತ್ತದೆಯೇ? ***ಹೌದು/ ಇಲ್ಲ***

5. ಪಠ್ಯ ವಿಷಯಗಳನ್ನು 'ನೋ ಬ್ಯಾಗ್ ಡೇ' ದಿನಗಳಲ್ಲಿ ಅಳವಡಿಸಿಕೊಳ್ಳಲು ಸಾಧ್ಯವಾಗಿದೆಯೇ?

   ***ಹೌದು/ ಇಲ್ಲ/ ಗೊತ್ತಿಲ್ಲ***

6. 'ನೋ ಬ್ಯಾಗ್ ಡೇ' ದಿನದ ಕಾರ್ಯ ಚಟುವಟಿಕೆಗಳ ವರದಿ ನಿಮ್ಮ ಗಮನಕ್ಕೆ ತಂದಿದ್ದಾರೆಯೇ?

   ***ಹೌದು/ ಇಲ್ಲ***

7. 'ನೋ ಬ್ಯಾಗ್ ಡೇ'ದಿನವನ್ನು ಪಠ್ಯ ಪುನರ್ಬಲನ ಚಟುವಟಿಕೆಗಳಿಗಾಗಿ ಬಳಸಿಕೊಳ್ಳಬಹುದೇ?

   ***ಹೌದು/ ಇಲ್ಲ/ ಗೊತ್ತಿಲ್ಲ***

8. ನಿಮ್ಮ ಶಾಲೆಯನ್ನು ಆಧರಿಸಿ 'ನೋ ಬ್ಯಾಗ್ ಡೇ'ಉಪಯುಕ್ತವೆನಿಸುತ್ತದೆಯೇ?

   ***ಹೌದು/ ಇಲ್ಲ***

9. 'ನೋ ಬ್ಯಾಗ್ ಡೇ' ಪರಿಕಲ್ಪನೆ ನಿಮಗೆ ಒಪ್ಪಿಗೆಯಾಯಿತೆ?

   ***ಹೌದು/ ಇಲ್ಲ***

10. 'ನೋ ಬ್ಯಾಗ್ ಡೇ' ಕೇವಲ ಸರ್ಕಾರಿ ಶಾಲೆಗಳಿಗೆ ಮಾತ್ರ ಸೀಮಿತವೇ, ಅಥವಾ ಖಾಸಗಿ ಶಾಲೆಗಳು ಸಹ ಅಳವಡಿಸಿಕೊಳ್ಳಬಹುದೇ? ***ಸರ್ಕಾರಿ ಮಾತ್ರ/ ಖಾಸಗಿ ಮಾತ್ರ/ಎರಡೂ***

**ಈ ಕೆಳಗಿನ ಹೇಳಿಕೆಗಳಿಗೆ ಸಂಕ್ಷಿಪ್ತವಾಗಿ ನಿಮ್ಮ ಅಭಿಪ್ರಾಯವನ್ನು ಬರೆಯಿರಿ.**

11. ಮಗುವಿನ ಸುಪ್ತಪ್ರತಿಭೆಯ ಅನಾವರಣಕ್ಕೆ 'ನೋ ಬ್ಯಾಗ್ ಡೇ' ಒಂದು ವೇದಿಕೆ ಆಗಿದೆಯೇ? ನಿಮ್ಮ ಅನುಭವವನ್ನು ತಿಳಿಸಿರಿ.

ಮುಖ್ಯ ಶಿಕ್ಷಕರ ಸಹಿ

ಮತ್ತು ಶಾಲಾ ವಿಳಾಸ

**ಮಕ್ಕಳ ಅಭಿಪ್ರಾಯ ಸಂಗ್ರಹ/ ಸಂದರ್ಶಕರ ಅವಲೋಕನ ಪಟ್ಟಿ**

**ಈ ಕೆಳಗಿನ ಹೇಳಿಕೆಗಳಿಗೆ ನಿರೀಕ್ಷಿತ ಉತ್ತರಗಳನ್ನು ನೀಡಿದೆ.**

**ನಿಮಗೆ ಸರಿ ಎನಿಸಿದ ಅಭಿಪ್ರಾಯಕ್ಕೆ ಸರಿ ( ) ಗುರುತಿನಿಂದ ತಿಳಿಸಿ.**

1. ಶಾಲೆಯ ಸಾಮಾನ್ಯ ವೇಳಾಪಟ್ಟಿಯಲ್ಲಿ 'ನೋ ಬ್ಯಾಗ್ ಡೇ'ದಿನವನ್ನು ಅಳವಡಿಸಿಕೊಂಡಿದ್ದಾರೆಯೇ?

***ಹೌದು/ ಇಲ್ಲ***

2. 'ನೋ ಬ್ಯಾಗ್ ಡೇ' ಕಲಿಕಾ ಪ್ರಕ್ರಿಯೆಯ ಯೋಜನಾವಹಿ ತಯಾರಿಸಿದ್ದಾರೆಯೇ?

***ಹೌದು/ ಇಲ್ಲ***

3. 'ನೋ ಬ್ಯಾಗ್ ಡೇ' ಕಾರ್ಯಾ ಚಟುವಟಿಕೆಗಳ ವರದಿಯನ್ನು ದಾಖಲಿಸಿದ್ದಾರೆಯೇ?

***ಹೌದು/ ಇಲ್ಲ***

4. 'ನೋ ಬ್ಯಾಗ್ ಡೇ' ಕಾರ್ಯಾಕ್ರಮದಲ್ಲಿ ಅಳವಡಿಸಬಹುದಾದ ಚಟುವಟಿಕೆಗಳ ಪಟ್ಟಿಯನ್ನು ತಯಾರಿಸಿದ್ದಾರೆಯೇ?

***ಹೌದು/ ಇಲ್ಲ***

5. 'ನೋ ಬ್ಯಾಗ್ ಡೇ' ದಿನ ನಡೆಸಿದ ಚಟುವಟಿಕೆಗಳ ಬಗ್ಗೆ ಸಹ ಶಿಕ್ಷಕರ ಅಭಿಪ್ರಾಯ.

   1.

   2.

**ತರಗತಿಗಳಿಗೆ ಭೇಟಿ ಮಾಡಿ ಮಕ್ಕಳ ಅಭಿಪ್ರಾಯ ಸಂಗ್ರಹಿಸುವುದು:**

6. 'ನೋ ಬ್ಯಾಗ್ ಡೇ' ದಿನ ನೀವು ಶಾಲೆಗೆ ಶಾಲಾ ಬ್ಯಾಗ್ ಮತ್ತು ಪಠ್ಯಪುಸ್ತಕಗಳನ್ನು ತೆಗೆದುಕೊಂಡು ಬರುತ್ತೀರಾ?

***ಹೌದು/***

***ಇಲ್ಲ***

7. 'ನೋ ಬ್ಯಾಗ್ ಡೇ' ದಿನ ನಡೆಸುತ್ತಿರುವ ವಿವಿಧ ವಿಷಯಗಳಲ್ಲಿ ನಡೆಸುತ್ತಿರುವ ಚಟುವಟಿಕೆಗಳ ಬಗ್ಗೆ ಮಕ್ಕಳ ಅಭಿಪ್ರಾಯ.